ಸ್ವಾತಂತ್ರ್ಯದ
ಐವತ್ತು ವರ್ಷಗಳು

ಮಾಡಿ ಮಡಿದವರು

ಬಸವರಾಜ ಕಟ್ಟೀಮನಿ

ಸಂಕ್ಷಿಪ್ತ ರೂಪ:

ಡಾ. ಶ್ರೀನಿವಾಸ ಹಾವನೂರ



ಮಾಡಿ ಮಡಿದವರು

ಬಸವರಾಜ ಕಟ್ಟೀಮನಿ

ಸಂಕ್ಷಿಪ್ತ ರೂಪ

ಡಾ. ಶ್ರೀನಿವಾಸ ಹಾವನೂರ

ಚಿತ್ರಗಳು

ಭೀಮರಾವ್ ಮುರಗೋಡ

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ISBN 81-237-2423-3

ಮೊದಲ ಮುದ್ರಣ: 1998 (*ಶಕ 1920*)
ಎರಡನೆಯ ಮುದ್ರಣ: 1999 (*ಶಕ 1920*)

Maadi Madidavaru (Abridged version of
Kannada novel *Maadi Madidavaru*)
ರೂ. **10.00**
ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ,
ಎ-5, ಗ್ರೀನ್ ಪಾರ್ಕ್, ಹೊಸ ದೆಹಲಿ-110 016,
ಇವರಿಂದ ಪ್ರಕಟಿತ.

1

ರೈಲಿನ ಎಂಜಿನು ಕರ್ಕಶವಾಗಿ ಸಿಳ್ಳುಹಾಕಿತು. ಅದರೊಂದಿಗೆ ಗಾರ್ಡನ ಸಿಳ್ಳಿನ ಸ್ವರವೂ ಬೆರೆತುಕೊಂಡಿತು. ಜನಗಳ ಕೂಗಾಟ, ಕಿರಿಚಾಟಗಳ ಮಧ್ಯೆ ಗಾಡಿಯೂ ಧಡಧಡನೆ ಸದ್ದು ಮಾಡುತ್ತ ಓಡತೊಡಗಿತು.

ಕಿಟಿಕಿಯಾಚೆ ದೃಷ್ಟಿ ಹೊರಳಿಸಿ ಹೇಮಾ ತನ್ನ ಕತ್ತಿನ ಸುತ್ತ ಸುತ್ತಿಕೊಂಡಿದ್ದ ಸ್ಕಾರ್ಫ್ ಸರಿಮಾಡಿಕೊಂಡಳು. ಹಿಂದಿನ ಒರಗುದಿಂಬಿಗೆ ತಲೆಯಾನಿಸಿ ಪಕ್ಕದಲ್ಲಿದ್ದ ದಿನಪತ್ರಿಕೆಯನ್ನೆತ್ತಿಕೊಂಡು ಅದರ ಮೇಲೆ ಕಣ್ಣಾಡಿಸಿದಳು. ಅದೇ ಸಮಾಚಾರ.... ಕರುಳಿರಿಯುವ, ಎದೆ ಕೊರೆಯುವ, ಭಾವನೆಗಳನ್ನು ಕೆರಳಿಸುವ ಆ ಸಮಾಚಾರ....

ಗಾಂಧೀಜಿ, ನೆಹರೂ, ಪಟೇಲ್ ಆದಿಯಾಗಿ ಕಾಂಗ್ರೆಸ್ ಮುಂದಾಳುಗಳೆಲ್ಲರ ಬಂಧನ-ಬೆಳಗಿನ ಜಾವದಲ್ಲಿ ಅದರ ಪ್ರತಿಕ್ರಿಯೆಯೆಂದು ದೇಶದಾದ್ಯಂತ ಹರತಾಳ, ಮೆರವಣಿಗೆ, ಪ್ರದರ್ಶನ. ಅಲ್ಲಲ್ಲಿ ಗೋಳೀಬಾರು. ಅಲ್ಲಲ್ಲಿ ಲಾಠೀ ಪ್ರಹಾರ....

ಆ ಸಮಾಚಾರ....ದೇಶವನ್ನೆಲ್ಲ ಬಡಿದೆಬ್ಬಿಸಿದ ಆ ಸಮಾಚಾರ ಅವಳನ್ನೂ ಜಾಗೃತಗೊಳಿಸಿದ್ದಿತು. ಎ. ಐ. ಸಿ. ಸಿ.ಯಲ್ಲಿ ಗಾಂಧೀಜಿ ಮಾಡಿದ ಭಾಷಣ.... ನೀವು ಮಾಡಬೇಕು ಇಲ್ಲವೆ ಮಡಿಯಬೇಕು. ಗಂಡು ಹೆಣ್ಣು, ಕೂಸು ಕುನ್ನಿ, ವಿದ್ಯಾರ್ಥಿ ವಿದ್ಯಾರ್ಥಿನಿಯರು ಎಲ್ಲರೂ ಭಾಗವಹಿಸಬೇಕು, ಈ ಸಂಗ್ರಾಮದಲ್ಲಿ - ಈ ನಮ್ಮ ಅಂತಿಮ ಸಂಗ್ರಾಮದಲ್ಲಿ. ಬ್ರಿಟಿಷ್ ಸರಕಾರದ ಅಧಿಕಾರವನ್ನು ಧಿಕ್ಕರಿಸಿ ಸ್ವಾತಂತ್ರ್ಯವನ್ನು ಸಾರಬೇಕು. 'ಡು ಆರ್ ಡೈ!' ಎಂಬ ಆ ವೀರ ಘೋಷಣೆ...ಹಿಂದೂಸ್ಥಾನದ ಕೋಟ್ಯಾವಧಿ ಜನರ ಹಾಗೇ ಅವಳನ್ನೂ ಎಚ್ಚರಿಸಿತ್ತು ಆ ಆಹ್ವಾನ. ಅಂತೆಯೇ ಪುಣೆಯಲ್ಲಿನ ತನ್ನ ಕಾಲೇಜ್ ವ್ಯಾಸಂಗಕ್ಕೆ ಶರಣು ಹೊಡೆದು ಆ ಚಳವಳಿಯಲ್ಲಿ ಧುಮುಕುವುದಾಗಿ ನಿರ್ಧರಿಸಿದ್ದಳು.

ಆ ನಿರ್ಧಾರವನ್ನು ಮುರಿಯಬೇಕೆಂದು ತಂದೆ ತುಂಬ ಪ್ರಯತ್ನಿಸಿದ್ದರು. ಹತ್ತಾರು ಕಾರಣಗಳನ್ನು ಮುಂದೆ ಮಾಡಿ ಹೋರಾಟದ

ಹಾದಿಯಿಂದ ಅವಳನ್ನು ಹಿಂದಿರುಗಿಸಲು ಯತ್ನಿಸಿದ್ದರು. ಅವರ ಮಾತು ತನ್ನನ್ನು ಆಶ್ಚರ್ಯಕ್ಕೀಡು ಮಾಡಿದ್ದಿತು.

"ಮಾಡಬೇಕು ಇಲ್ಲವೆ ಮಡಿಯಬೇಕು" ಎಂಬ ಗಾಂಧೀಜಿಯವರ ಮಾತು ಎಲ್ಲಿ? ಗಾಂಧೀಜಿಯವರ ಪಟ್ಟಶಿಷ್ಯರೆಂದೂ, ಕರ್ನಾಟಕದ ಹಿರಿಯ ಮುಖಂಡರೆಂದೂ ಹೆಸರಾದ ತನ್ನ ತಂದೆಯ, ದೇಶಭಕ್ತ ಶಾಮರಾಯರ ಮಾತು ಎಲ್ಲಿ? 1921ರ ಚಳವಳಿಯ ಕಾಲಕ್ಕೆ ಕಾಲೇಜಿಗೆ ಶರಣು ಹೊಡೆದು ಚಳವಳಿಗೆ ಧುಮುಕಿದ್ದ ತನ್ನ ತಂದೆಯೇ, ಈ 1942ರ ಚಳವಳಿಯಲ್ಲಿ ತನಗೆ ಧುಮುಕಲು ವಿರೋಧಿಸುತ್ತಿದ್ದಾರೆ!

"ನೀನು ಕಾಲೇಜ್ ಬಿಡುವುದು ಬೇಡ, ಹೇಮಾ. ತಾಯಿಯಿಲ್ಲದ ತಬ್ಬಲಿ ಮಗು ನೀನು. ಆ ಮಹಾರಾಯಿತಿ ನೀನಿನ್ನೂ ಚಿಕ್ಕವಳಿದ್ದಾಗಲೇ ಕಣ್ಣು ಮುಚ್ಚಿದಳು. ಅಂದಿನಿಂದ ನಿನ್ನನ್ನು ಸಾಕಿ ಸಲಹಿದ್ದೇನೆ. ಈ ಚಳವಳಿ ಅಂದರೆ ದೊಡ್ಡ ಕೆಲಸ. ನಿನ್ನಂಥ ಹುಡುಗಿಯರು ಇದಕ್ಕೆಲ್ಲ ಸೇರಬಾರದು. ನಿನ್ನ ಶಿಕ್ಷಣ, ನಿನ್ನ ಮದುವೆ-"

"ಇಲ್ಲ ಅಪ್ಪಾ. ನನಗೆ ಮದುವೆ ಆಗೋ ಮನಸ್ಸಿಲ್ಲ. ಸದ್ಯಕ್ಕಂತೂ ಈ ಚಳವಳಿಯಲ್ಲಿ ಸೇರಿ ದೇಶಕ್ಕೆ ನನ್ನ ಸೇವೆ ಸಲ್ಲಿಸಬೇಕೆಂದಿದ್ದೇನೆ, ಅಪ್ಪಾ" ಎಂದು ಹೇಳಿದಳು. ಆದರೂ ಅವರು ಮತ್ತೆ ಮತ್ತೆ 'ಯಾವ ಗಲಾಟೆಗೂ ಹೋಗಬೇಡ' ಎಂದಿದ್ದರು. ಅವರ ಹೃದಯದಲ್ಲಿ ದೇಶಪ್ರೇಮ ಒಂದೆಡೆ, ಸಂತಾನ ವಾತ್ಸಲ್ಯ ಒಂದೆಡೆ-ಇವುಗಳ ನಡುವಿನ ತಾಕಲಾಟ ಅವರ ಮುಖದಲ್ಲಿ ಸ್ಪಷ್ಟವಾಗಿ ಗೋಚರವಾಗಿದ್ದಿತು.

"ಗಲಾಟೆ ಅಂದರೇನಪ್ಪ? ಈ ಚಳವಳಿಯಲ್ಲಿ ನನ್ನಿಂದ ಆಗುವುದನ್ನೆಲ್ಲ ನಾನು ಮಾಡುವವಳೇ" ಎಂದು ದೃಢಸ್ವರದಲ್ಲಿ ನುಡಿದು ಆಕೆ ಅಲ್ಲಿಂದ ಎದ್ದುಬಿಟ್ಟಿದ್ದಳು.

ಅದೇಕೋ ಮೆಲ್ಲನೆ ಸಾಗಿದ್ದ ಗಾಡಿ ನಿಂತುಕೊಂಡಿತು. ಹೇಮಾಳ ಬಗೆಗಣ್ಣಿನೆದುರಿಗೆ ನಡೆಯುತ್ತಿದ್ದ ಹಿಂದಿನ ದಿನದ ಆ ಪ್ರಸಂಗದ ನೆನಪೂ ಮರೆತು ಹೋಯಿತು. ಕಿಟಿಕಿಯಾಚೆ ದೃಷ್ಟಿ ಬೀರಿ ಸೃಷ್ಟಿಯನ್ನು ನಿಟ್ಟಿಸಿದಳು. ಕತ್ತಲೆ ಕವಿದು ನಿಸರ್ಗವನ್ನೆಲ್ಲ ತಬ್ಬಿಕೊಂಡಿತು. ಬಾಗಿಲ ಮೇಲಿನ ಕಿಟಿಕಿಯನ್ನು ಮುಚ್ಚಬೇಕೆಂದು ಹೇಮಾ ಕೈಯೆತ್ತುತ್ತಿದ್ದ ಹಾಗೇ, ಬಾಗಿಲನ್ನು ತೆರೆದು ಓರ್ವ ವ್ಯಕ್ತಿ ಒಳಕ್ಕೆ ಬಂದವನೆ ಬಾಗಿಲನ್ನು ಮುಚ್ಚಿದ. ಹೇಮಾಗೆ ಭಯವಾಗದಿರಲಿಲ್ಲ. ಅಲ್ಲದೆ ಹೆಣ್ಣುಮಕ್ಕಳ ಆ ಚಿಕ್ಕ ಡಬ್ಬಿಯಲ್ಲಿ

ಅವಳೊಬ್ಬಳೇ.

ಅವನಿಗೆ 25-26 ವರ್ಷ ವಯಸ್ಸಿರಬಹುದು. ಸಾಕಷ್ಟು ಎತ್ತರವೂ ಹೃಷ್ಟಪುಷ್ಟವೂ ಆದ ದೇಹಕ್ಕೆ ಖಾದಿಯ ನೆಹರೂ ಶರ್ಟು, ಖಾದಿಯ ಧೋತರ, ಗಾಂಧೀ ಟೊಪ್ಪಿಗೆ ಕಳೆ ತಂದುಕೊಟ್ಟಿದ್ದವು. ಇತ್ತ ಅವಳದು ಸಾಧಾರಣ ಎತ್ತರದ ಶರೀರಕ್ಕೆ ಒಪ್ಪುವ ಖಾದಿಯ ಬಿಳಿಯ ಸೀರೆ, ಬಿಳಿಯ ರವಕೆ, ಗೌರವರ್ಣದ ಕಾಂತಿಯನ್ನು ಹೆಚ್ಚಿಸುವ ಕೇಶರಾಶಿ. ಬುದ್ಧಿವಂತಿಕೆಯನ್ನೂ ಸೂಚಿಸುವ ಸ್ಥಿರ ದೃಷ್ಟಿ.

ಹಠಾತ್ತಾಗಿ ಅವನಿಗೆ ಏನೋ ಜ್ಞಾಪಕವಾದಂತಾಯಿತು. "ಇರಬಹುದೆ?" ಎಂದುಕೊಂಡನಾತ. ಅವಳಿಗೂ ಅಂಥದೇ ಭಾವನೆ. "ಇರಬಹುದೆ?" ಆದರೂ ಆಕೆ ಉಸಿರು ಬಿಗಿಹಿಡಿದು ಮೌನವಾಗಿ ಕುಳಿತಿದ್ದಳು. ಏನೋ ಸಂದೇಹ. ಏನೋ ಭೀತಿ.

"ನಿಮ್ಮನ್ನ ಎಲ್ಲೋ ನೋಡಿದ್ಹಾಂಗ ನೆಪ್ಪ ಐತಿ" ಎಂದನಾತ.

"ನಿಮ್ಮನ್ನೂ ನಾ ನೋಡಿದ ಹಾಗೆ ನೆನಪು. ನಿಮ್ಮ ಹೆಸರೇನು?"

"ಶೇಖರಪ್ಪ."

"ನೆನಪಾಯ್ತು ಬಿಡ್ರಿ. ಕಲ್ಲಾಪುರದವರು. ನಮ್ಮ ತಂದೆಯವರ ಹತ್ತಿರ ಮಾತಾಡಲಿಕ್ಕೆ ಅಂತ ಬೆಳಗಾವಿಯ ನಮ್ಮನಿಗೆ ಬರತಿದ್ದಿರಿ."

"ಹಾಂಗಾದರ ನಮ್ಮ ಶಾಮರಾಯರ ಮಗಳು ನೀವು! ಹೇಮಕ್ಕ, ಒಮ್ಮೆಲೆ ಗುರುತು ಸಿಗಲಿಲ್ಲ ಬಿಡ್ರಿ."

"ಈಗ ಎಲ್ಲಿ, ಮುಂಬಯಿಯಿಂದ ಬಂದ್ರಿ ಅಂತ ಕಾಣಸ್ತದ."

"ಹೌದು. ಏನೇನೊ ಮಾಡಿ ತಪ್ಪಿಸಿಕೊಂಡು ಬಂದೆ. ಒಬ್ಬ ಸಿ.ಐ.ಡಿ. ನನ್ನ ಬೆನ್ನ ಹತ್ಯಾನ. ಎಂಜಿನ್ ಹತ್ತಿರದ ಡಬ್ಬಿಯ, ಮೇಲಿನ ಬೆಂಚಿನ ಮ್ಯಾಲೆ ಮಲಗಿದ್ದೆ - ಸ್ವಲ್ಪ ಮರೆಯಾಗಿ. ಆ ಸಿ.ಐ.ಡಿ. ನನ್ನ ಯಾವಾಗ ನೋಡಿದನೋ ಏನೊ. ಅಲ್ಲೇ ಕೆಳಗಿನ ಬೆಂಚಿನ ಮೇಲೆ ಬಂದು ಕುತಗೊಂಡ. ಅವನ ಕಣ್ಣು ತಪ್ಪಿಸಿ, ಬೇರೆ ಡಬ್ಬಿ ಹತ್ತಬೇಕು ಅನ್ನುವಾಗ ಇಲ್ಲಿ ನುಗ್ಗಿಬಿಟ್ಟೆ."

"ಮುಂಬಯಿಯೊಳಗ ನಮ್ಮ ಕರ್ನಾಟಕದವರು ಯಾರಾದರೂ ಭೆಟ್ಟಿಯಾಗಿದ್ರೇನು?"

"ಹೋ. ಎಲ್ಲಾರು. 9ನೇ ತಾರೀಖಿನ ಸಂಜೆ. ಮುಖಂಡರೆಲ್ಲಾ ಬಂದಿದ್ರು. ನಿಮ್ಮ ತಂದೆಯವರೂ ಇದ್ರು."

"ಆಮೇಲೆ?"

"ಮುಂದಿನ ಕಾರ್ಯಕ್ರಮ ಏನೂಂತ ವಿಚಾರ ನಡೀತು. ಮುಖಂಡರಾರೂ ಏನೂ ಹೇಳ್ಳಿಲ್ಲ. ನೀವೇ ಏನಾದ್ರೂ ಮಾಡಿಕೊಳ್ರಿ ಅಂದರು. ಸಭೆ ಮುಗೀತು."

"ನನ್ನ ಕೇಳಿದರೆ ಮೊದಲಿನ ಹಾಗೆ ಸತ್ಯಾಗ್ರಹ ಮಾಡಿ ಜೇಲಿಗೆ ಹೋದ್ರ ಏನೂ ಪ್ರಯೋಜನ ಇಲ್ಲ."

"ಸರಿ ಹೇಳಿದ್ರಿ. ಬೇರೆ ಚಳವಳಿಗಳ ಹಾಗಲ್ಲ ಈ ಚಳವಳಿ. ಹೊರಗಿದ್ದುಕೊಂಡೇ ಹೋರಾಡಬೇಕು. ಸರಕಾರದ ಯಂತ್ರವನ್ನು ಮುರಿದು ನಾಶಮಾಡಬೇಕು."

ಆವೇಶಪೂರಿತವಾದ ಅವನ ಮಾತುಗಳಿಂದ ಹೇಮಾವತಿಯಲ್ಲಿಯೂ ಆವೇಶ ಬಂದಂತಾಯಿತು.

"ನಾನೂ ಭಾಗವಹಿಸಬೇಕಂತ ಮಾಡೇನಿ ಈ ಚಳವಳಿಯೊಳಗೆ. ನನ್ನಿಂದ ಏನಾದರೂ ಉಪಯೋಗವಾದೀತೆ?" ಎಂದು ಕೇಳಿದಳು.

"ಓಹೊ. ಯಾಕೆ ಉಪಯೋಗವಾಗಲಿಕ್ಕಿಲ್ಲ? ನಿಮ್ಮಂಥ ವಿದ್ಯಾವಂತರೂ ನಮಗೆ ಸಹಾಯ ಮಾಡಿದರ ಏನನ್ನೂ ಸಾಧಿಸಬಹುದು. ಕರಪತ್ರ ಹೊರಡಿಸುವುದು, ಟೈಪ್ ಮಾಡುವುದು, ಇಂಥ ಇನ್ನೂ ಎಷ್ಟೋ ಕೆಲಸ ಮಾಡಬಹುದಲ್ಲ?"

ಸಂತೋಷದಿಂದ ಹೇಮಾಳ ಮುಖ ಅರಳಿತು. ಹೆಣ್ಣಾದ ಮಾತ್ರಕ್ಕೇ ತನಗಿಲ್ಲಿ ಬಹಿಷ್ಕಾರವಿಲ್ಲ ಎಂಬುದು ಮನವರಿಕೆಯಾಗುತ್ತಲೂ ಎದೆ ತುಂಬಿಬಂತು. ಶೇಖರನ ಬಗ್ಗೆ ಅಭಿಮಾನ ಮೂಡಿತು. ತನ್ನ ತಂದೆ ಕಾಂಗ್ರೆಸ್ಸಿನ ಹಳೆಯ ಮುಖಂಡರಾದರೆ, ಈತ ಹೊಸ ಮುಖಂಡತ್ವದ ಪ್ರತೀಕ. ಹರಯದ ಉತ್ಸಾಹಿ. ಕೇವಲ ಮುಲ್ಕೀ ಪರೀಕ್ಷೆ ಮಾಡಿ ಮುಗಿಸಿದವ. ಹಳ್ಳಿಯಲ್ಲಿ ಹಳ್ಳಿಗರ ನಡುವೆ ರೈತನಾಗಿ ಜೀವಿಸುವವ.

ಅವಳಿಗೆ ಆಗ ಮುಂದಿನ ಹೋರಾಟದ ಸ್ವರೂಪವೆಂಥದೆಂಬುದು ಮಸಕುಮಸಕಾಗಿ ತೋರತೊಡಗಿತು. ಅದು ಸಾಮಾನ್ಯ ಜನತೆಯ, ರೈತರ, ಕಾರ್ಮಿಕರ, ಹೆಚ್ಚಾಗಿ ತರುಣರ ಹೋರಾಟವಾಗಬಹುದೆ?

ಗಾಡಿ ನಿಂತುಕೊಂಡಿತು. ಶೇಖರ ತನ್ನ ಚೀಲವನ್ನೆತ್ತಿಕೊಂಡು ಹಿಂಬದಿಯ ಬಾಗಿಲಿನಿಂದ ಇಳಿಯತೊಡಗಿದಾಗ ಹೇಮಾವತಿ ಹೇಳಿದಳು:

"ಶೇಖರಣ್ಣ, ಊರು ಮುಟ್ಟಿದ ಮೇಲೆ ನಮ್ಮ ಮನೀಗೆ ಬರಬೇಕು.

ಮರೀಬೇಡ್ರಿ."

2

ಬೆಳಗಾವಿಯ ಒಂದು ಮರೆಯ ಜಾಗದಲ್ಲಿ ಶೇಖರ, ಹೇಮಾ ಮತ್ತು ವಿಶ್ವನಾಥ ದೇಸಾಯಿ ಮುಂದಿನ ದಾರಿಯ ಬಗ್ಗೆ ಆಲೋಚನೆಯಲ್ಲಿ ತೊಡಗಿದ್ದರು. ದೇಸಾಯಿಯೂ ಹೇಮಾಳಂತೆ ಕಾಲೇಜಿನಲ್ಲಿ ಕಲಿಯುತ್ತಿದ್ದವ. ಅದಕ್ಕೆ ಶರಣು ಹೊಡೆದು ಚಳವಳಿಯಲ್ಲಿ ತನ್ನ ವತನದಾರ ತಂದೆಯ ಮನಸ್ಸಿಗೆ ವಿರುದ್ಧವಾಗಿ ಧುಮುಕಿದ್ದ. ಶೇಖರನ ಕೈಯಲ್ಲಿದ್ದ ಬಂದೂಕನ್ನು ನೋಡಿ, ದೇಸಾಯಿ ಕೇಳಿದ:

"ಹಿಂದಿನ ಯಾವ ಚಳವಳಿಯೊಳಗೂ ಪಿಸ್ತೂಲು, ಬಂದೂಕು ಉಪಯೋಗವಾದಂತಿಲ್ಲ. ಅಲ್ಲವೇ?"

ಶೇಖರ ಹೇಳಿದ:

"ಭಗತಸಿಂಗ್, ಸುಖದೇವ್ ಮುಂತಾದವರು ಉಪಯೋಗ ಮಾಡಿದ್ದರು. ಆದರೆ ಅದು ಹಿಂಸಾತ್ಮಕ ಕ್ರಾಂತಿ. ನಮ್ಮ ಬಾಪೂಜಿ ಹೇಳಿದ ಕ್ರಾಂತಿ ಸರ್ವಥಾ ಅಂಥಾದ್ದಲ್ಲ. ಪಿಸ್ತೂಲು ಹಿಡಿದ ಮಾತ್ರಕ್ಕೆ ನಾವು ಹಿಂಸೆ ಮಾಡೋದಕ್ಕೆ ಹೊರಟೇವಿ ಅಂತ ತಿಳೀಬಾರದು."

"ಮತ್ತೆ ಇವುಗಳ ಉಪಯೋಗವಾದರೂ ಏನು?" ಎಂದು ದೇಸಾಯಿ ಕುತೂಹಲದಿಂದ ಕೇಳಿದ.

"ಸರಕಾರದ ಹತ್ತಿರ ಪೋಲೀಸರಿದ್ದಾರ, ಬಂದೂಕು ಅವ. ಬಾಂಬು ಸಹಿತ ಇದ್ದೀತು. ಸರಕಾರದ ಯಂತ್ರವನ್ನೆಲ್ಲ ನಾಶಮಾಡಿ ಅದರ ಅಧಿಕಾರ ನಡೀದ್ಹಾಂಗ ಮಾಡಹೊರಟವರು ನಾವು. ಆವಾಗ ನಮ್ಮನ್ನ ಅವರು ಸುಮ್ನ ಬಿಡತಾರೇನು? ನಮ್ಮನ್ನು ನಾಶ ಮಾಡಲಿಕ್ಕೆ ಬಂದಾಗ, ನಮ್ಮ ಕೈಯೊಳಗೂ ಶಸ್ತ್ರಾಸ್ತ್ರ ಅವ ಅಂತ ತಿಳಿದರ ಹಿಂದಿನ್ಹಂಗ ನಮ್ಮ ಮ್ಯಾಲೆ ಬೇಕು-ಬೇಕಾದ್ಹಂಗ ದಬ್ಬಾಳಿಕೆ ನಡಸಲಿಕ್ಕೆ ಆಗೋದಿಲ್ಲ. ಪಿಸ್ತೂಲ ತೋರಿಸಿ ನಾವು ಹೆದರಿಸಬಹುದು. ಕೆಲಸ ಬೇಗ ಸಾಧಿಸುವುದಕ್ಕಾಗಿ ಮಾತ್ರ ಈ ಶಸ್ತ್ರಗಳನ್ನು ಬಳಸೋಣ. ಅವುಗಳಿಂದ ಹಿಂಸೆ ಮಾಡಬೇಕು ಅಂತ ಸ್ವಲ್ಪವೂ ವಿಚಾರ ಇಲ್ಲ. ಏನಂತೀರ?" ಎಂದು ಕೇಳಿದ ಶೇಖರ.

"ಅಂದರ ಬಹಳ ಶಸ್ತ್ರ ಬೇಕಾಗಬಹುದು ಅನ್ನಿರಿ" ಎಂದಳು ಹೇಮಾ.

"ಅಂದ ಹಾಗೆ ದೇಸಾಯರೇ, ನಿಮ್ಮ ಮನೆಯಲ್ಲಿ ಒಂದಲ್ಲ ಮೂರು ಬಂದೂಕುಗಳು ಇವೆ. ಅಲ್ಲವೆ. ಅವನ್ನ ಹಾರಿಸಿಕೊಂಡು ಬರೋಣವೆ?

ನೀವು ಸಹಾಯ ಮಾಡಬೇಕು.” ಶೇಖರನ ಈ ಮಾತಿಗೆ ದೇಸಾಯಿ ಹುರುಪಿನಿಂದ ಒಪ್ಪಿದ.

ಅಷ್ಟರಲ್ಲಿ ಯಾರೋ ಬಾಗಿಲು ತಟ್ಟಿದರು. ಹೇಮಾ ಎದ್ದು ಬಾಗಿಲು ತೆರೆದಳು. ಬಂದವ ಲಾರಿ ಡ್ರೈವರ್ ಕಲ್ಲಪ್ಪ. ಶೇಖರನನ್ನು ಕರೆದುಕೊಂಡು ಹೋಗಲು ಬಂದಿದ್ದ.

ದುಡ್ಡಣ್ಣವರ ಸಾಹುಕಾರರ ಮನೆಯೆದುರು ಲಾರಿ ಬಂದು ನಿಂತೊಡನೆ ಒಳಗಿನಿಂದ ಶಂಕರಪ್ಪ ಮಾಸ್ತರರು ಓಡಿ ಬಂದರು. ಐವತ್ತೈದು ವರ್ಷಕ್ಕೆ ಮೇಲ್ಪಟ್ಟು ವಯಸ್ಸಾಗಿದ್ದರೂ ಅವರು ಹರಯದವರನ್ನು ಮೀರಿಸುವ ಉತ್ಸಾಹಿಗಳಾಗಿದ್ದರು. ಉತ್ಸಾಹಕ್ಕೆ ಅನುರೂಪವಾದ ದೇಹದಾರ್ಢ್ಯ. ವೀರಗೀತ, ಲಾವಣಿ ಹಾಡುವುದರ ಮೂಲಕ,ಕಳೆದ ಇಪ್ಪತ್ತು ವರ್ಷಗಳಿಂದ ಸ್ವಾತಂತ್ರ್ಯ ಚಳುವಳಿಯ ಪ್ರಚಾರ ಮಾಡುವುದರಲ್ಲಿ ಪಳಗಿದವರಿದ್ದರು.

ದುಡ್ಡಣ್ಣವರ ಸಾಹುಕಾರರ ಮನೆ ಮೊದಲಿನಿಂದಲೂ ಕಾರ್ಯಕರ್ತರಿಗೆ ಆಶ್ರಯಸ್ಥಾನವಾಗಿದ್ದಿತು. ಲಾರಿಯಲ್ಲಿದ್ದ ಚೀಲಗಳ ಮೇಲೆ ಕಂಬಳಿ ಹಾಸಿ ಒರಗಿದ್ದ ಶೇಖರನನ್ನು ಕುರಿತು ಮಾಸ್ತರರು ಹೇಳಿದರು:

“ಸ್ವಲ್ಪ ಕೆಳಗಿಳಿದು ಬಾ ಶೇಖರಪ್ಪ. ಹೊಂಗಲದಿಂದ ಒಂದು ಭಯಂಕರ ಕೆಟ್ಟ ಸುದ್ದಿ ಬಂದೈತಿ!” ಮತ್ತೇನು ಅನಾಹುತವಾಗಿದೆಯೊ ಎಂದು ಯೋಚಿಸುತ್ತ ಶೇಖರ ಕೆಳಗಿಳಿದು ಬಂದ.

“ಹೊಂಗಲದಲ್ಲಿ ಪೋಲೀಸರು ಗೋಳೀಬಾರು ಮಾಡಿದರು. ಒಬ್ಬರಲ್ಲ, ಏಳು ಜನ ಸತ್ತಾರ!” ಎಂದರು ಮಾಸ್ತರರು.

ಉಸಿರು ಬಿಗಿಹಿಡಿದು ಶೇಖರ ಪ್ರಶ್ನೆ ಮಾಡಿದ.

“ಯಾಕೆ? ಅಂಥದ್ದೇನಾಯಿತು?”

“ಅಂಥ ಹಿಂಸಾಕೃತ್ಯ ಏನೂ ನಡೆದಿರಲಿಲ್ಲ. ಮುಂಜಾನೆ ಪ್ರಭಾತಫೇರಿ ಹೊರಟಿತ್ತಂತೆ. ಅದರಲ್ಲಿ ಭಾಗವಹಿಸಿದ್ದ ಕೆಲವರನ್ನು ಹಿಡಿದುಕೊಂಡು ಹೋದಾಗ ಜನ ತಾಲೂಕು ಕಚೇರಿ ಮುಂದ ಗುಂಪುಗೂಡಿ ಪ್ರದರ್ಶನ ಮಾಡಿದರಂತೆ. ಅಷ್ಟಕ್ಕೇ ಪೋಲೀಸರು ಗುಂಡುಹಾರಿಸಬೇಕೆ?” ಕರ್ನಾಟಕದೊಳಗಿನ ಮೊದಲನೇ ಬಲಿದಾನ ಇದು, ಶೇಖರಪ್ಪ. ಇದೊಂದು ಆಹ್ವಾನ ಅಂತ ತಿಳೀಬೇಕು.”

ಶಾಂತ ರೀತಿಯಿಂದ ನಡೆದ ಪ್ರದರ್ಶನ, ನಿಷ್ಕಾರಣವಾಗಿ ಜನರ ಮೇಲೆ ಗೋಳೀಬಾರು. ಅದಕ್ಕೆ ಏಳು ಜನ ನಿರಪರಾಧಿಗಳ ಆಹುತಿ!

ಶೇಖರನ ಎದೆಯ ಮೇಲೆ ವಜ್ರಾಘಾತವಾದಂತಾಗಿದ್ದಿತು. ಮುಷ್ಟಿಯನ್ನು ಕಲ್ಲಿನಂತೆ ಬಿಗಿಮಾಡಿ ಮೇಲಕ್ಕೆದ್ದ ಶೇಖರಪ್ಪ. ಲಾರಿಯನ್ನು ಹತ್ತಿದ. ಬಳಿಯಲ್ಲಿದ್ದ ದೇಸಾಯಿ "ಮಾಯಾ, ಮಮತಾ ಎಲ್ಲವನ್ನೂ ಹರಿದೊಗೆದು, ಜೀವದ ಹಂಗುದೊರೆದು ನಾವಿಂದು ಹೋರಾಡಬೇಕು. ಹೆಂಡರು ಮಕ್ಕಳು ಮನಿಮಾರು ಅಂತ ಮನಸ್ಸಿನೊಳಗ ನೂರಾರು ಆಶಾ ಇದ್ದರ ನಮ್ಮ ಇಡೀ ಜೀವನವನ್ನು ದೇಶಕ್ಕಾಗಿ ಮುಡುಪಾಗಿಡೋದು ಕಷ್ಟ" ಎಂದು ತನ್ನಷ್ಟಕ್ಕೆ ನುಡಿದ.



ಆ ಮಾತಿನಲ್ಲಿ ತಥ್ಯವಿದೆಯೆಂಬುದನ್ನು ಒಪ್ಪಲೇಬೇಕಾಯಿತು ಶೇಖರ. ತನ್ನ ವಿಚಾರದಲ್ಲೂ ಆ ಮಾತು ಅನ್ವಯಿಸುವಂತಿದ್ದಿತು. ತಮ್ಮ ಮನೆತನದ ತೊಂದರೆ ತಾಪತ್ರಯಗಳೆಲ್ಲ ಅವನ ಬಗೆಗಣ್ಣಿನೆದುರಿಗೆ ಮೂಡಿದಂತಾಯಿತು. ಮೊದಲಿನಿಂದಲೂ ಬಡತನದ ಜೀವನ; ಸ್ವಂತ ಹೊಲವಿಲ್ಲದೆ ಅನ್ಯರದನ್ನು ಲಾವಣಿಗೆ ಹಿಡಿದು ಹಗಲೂ ರಾತ್ರಿ ಬೆವರು ಸುರಿಸಿ ಯಾವ ಸುಖವನ್ನೂ ಕಾಣದೆ ತಂದೆ ಸತ್ತುಹೋದುದು. ಲಾವಣಿಗೆ ಕೊಡುವ ಹಣವೂ ಹುಟ್ಟದೆ ಇದ್ದುದು, ಐವತ್ತೈದರ ಸೀಮೆಯನ್ನು ದಾಟಿದ ವೃದ್ಧ ತಾಯಿಯೂ ಉರಿಬಿಸಿಲಿನಲ್ಲಿ ಅನ್ಯರ ಹೊಲದಲ್ಲಿ ಕೂಲಿ ಮಾಡಿ ಸಂಸಾರ ಸಾಗಿಸುವ ಪ್ರಸಂಗ ಬಂದುದು, ನೂರು ತೊಂದರೆಗಳನ್ನು ಸಹಿಸಿಕೊಂಡು ಅಣ್ಣ ಲಿಂಗಣ್ಣ

ಬಡ ಎತ್ತಿನಂತೆ ಸಂಸಾರದ ನೊಗ ಹೊತ್ತು ಎಳೆಯುತ್ತಿರುವುದು, ಅವನ ಭಾರವನ್ನು ಕೊಂಚವಾದರೂ ಕಡಿಮೆ ಮಾಡಬೇಕಾದುದು ತನ್ನ ಕರ್ತವ್ಯವಾಗಿರುವಾಗ ಅದನ್ನು ನಿರ್ಲಕ್ಷಿಸಿ ಚಳವಳಿ, ಕಾಂಗ್ರೆಸ್, ಸತ್ಯಾಗ್ರಹ, ಗ್ರಾಮೋದ್ಧಾರ ಎಂದು ತಾನು ಅಲೆಯುತ್ತಿರುವುದು. ಆದರೂ ಮನೆಯವರಾರೂ ಆ ಬಗ್ಗೆ ತುಟಿ ಪಿಟಕ್ಕೆನ್ನದಿರುವುದು.....ಈಗ ಮತ್ತೆ ಪ್ರಾರಂಭವಾಯಿತು ಹೋರಾಟ. ತಾನಂತೂ ಚಳವಳಿಗೆ ಧುಮುಕಿದ್ದಾಯಿತು. ಕಲ್ಲಾಪುರವೂ ಧುಮುಕುತ್ತದೆ. ಆದರೆ ತನ್ನಿಂದ ತನ್ನ ಮನೆಯವರಿಗೆ ಎಂಥೆಂಥ ತೊಂದರೆ ಬರಲಿವೆಯೊ!

ಅಂದು ರಾತ್ರಿ ಶೇಖರನ ಮನೆಯಲ್ಲಿಯೇ ಚಳವಳಿಗಾರರು ಒಟ್ಟುಗೂಡಿದ್ದರು. ಶಂಕರಪ್ಪ ಮಾಸ್ತರರು, ಬಾಳಪ್ಪ, ಪೈಲ್ವಾನ್ ಸಂಗಣ್ಣ, ಹಸನಸಾಬಿ ಮುಂತಾದವರಲ್ಲಿ ಆತ್ಮೀಯವಾದ ಮಾತುಕತೆ ನಡೆದಿತ್ತು. ಶೇಖರನ ತಾಯಿ ಪಾರ್ವತಮ್ಮ ಅಡಿಗೆ ಮನೆಯಲ್ಲಿ ಕುಳಿತುಕೊಂಡು ಪಡಸಾಲೆಯಲ್ಲಿ ನಡೆದಿದ್ದ ಮಾತುಕತೆ ಎಲ್ಲವನ್ನೂ ಉತ್ಸುಕತೆಯಿಂದ ಆಲಿಸುತಿದ್ದಳು.

ಮುದುಕ ಬಾಳಪ್ಪನಿಗೆ ಗಾಂಧೀಜಿ ಎಂದರೆ ತುಂಬಾ ಪ್ರೀತಿ ಮತ್ತು ಅಭಿಮಾನ. ಸಂಗೊಳ್ಳಿ ರಾಯಣ್ಣನೆ ಗಾಂಧೀಜಿಯ ರೂಪದಲ್ಲಿ ಮತ್ತೆ ಹುಟ್ಟಿ ಬಂದಿರುವನೆಂದು ತಿಳಿದಿದ್ದ. ಮತ್ತು ವೈರಿಗಳಾಗಿದ್ದ ಇಂಗ್ಲೀಷರನ್ನು ದೇಶದಿಂದ ಹೊರಗಟ್ಟುವುದಕ್ಕಾಗಿ ಅವ್ವ ಚೆನ್ನವ್ವನನ್ನು ಹರನೇ ಕಳಿಸಿದ್ದಾನೆಂದು ನಂಬಿಕೊಂಡಿದ್ದ. ಅವರನ್ನು ಈಗ ಯಾವ ಜೇಲಿನಲ್ಲಿ ಇರಿಸಿದ್ದಾರೆಂದು ಬಾಳಪ್ಪ ಎಲ್ಲರನ್ನೂ ಕೇಳುತ್ತಲೇ ಇದ್ದ. ಮುಂಬಯಿಯಿಂದ ಬಂದ ಶೇಖರನನ್ನು ಕೇಳಿದಾಗ ಅವನೂ "ಗೊತ್ತಿಲ್ಲ, ಅಜ್ಜಾ" ಎನ್ನಬೇಕೆ?

"ಗೊತ್ತಿಲ್ಲ? ಈ ಹಿಂದ ಅವರನ್ನ ಸೆರೆಹಿಡಿದಾಗ ಯಾವ ಜೇಲಿನ್ಯಾಗ ಇಟ್ಟಾರ ಅನ್ನೂದು ಪಕ್ಕಾ ತಿಳಿದಿರತಿತ್ತು. ಪಾಪ, ಎಪ್ಪತ್ತು ವರ್ಷ ದಾಟಿದ ಮುದುಕ. ಇಂಥಾ ವಯಸ್ಸಿನಾಗ, ಏನು ಕಾಡಸ್ತಾರ ನಮ್ಮ ಗಾಂಧೆಪ್ಪನ್ನ!

"ಅವರು ಎಲ್ಲಿದ್ದಾರ ಅನ್ನೋದು ಗೊತ್ತಿರದಿದ್ರೂ ಏನು ಮಾಡಬೇಕು ಹೇಳಿಬಿಟ್ಟಾರ. ನಮ್ಮ ಜನ ನಿಮ್ಮ ಅಧಿಕಾರಕ್ಕ ಬಾಗುವುದಿಲ್ಲ, ಅಂತ ಸರಕಾರಕ್ಕ ತಿಳಿಸಿದ್ದನ್ನ ನಾವು ಮಾಡಿ ತೋರಿಸಬೇಕಾಗೈತೆ".

"ಮಾಡಿರಿ. ಅವಶ್ಯ ಮಾಡಿರಿ! ನಾನೂ ಬರ್‍ತೀನಿ ನಿಮ್ಮ ಸಂಗಡ."

ವಿದೇಶೀ ಆಡಳಿತದ ವಿರುದ್ಧ ಬಂಡೆದ್ದ ಹಳ್ಳಿಗರ ಪ್ರತೀಕದಂತಿದ್ದ ಮುದುಕ ಬಾಳಪ್ಪನನ್ನು ಆನಂದ, ಅಭಿಮಾನಗಳಿಂದ ನಿಟ್ಟಿಸಿದ ಶೇಖರ. ಬಾಳಪ್ಪ ಹೇಳಿದ:

"ನಮ್ಮೂರ ಕುಲಕರ್ಣಿ ರಂಗಣ್ಣ ಬಹಾಳ ಘಾತಕೀ ಮನುಷ್ಯ. ನಿಮ್ಮ ಎಲ್ಲರ ಮ್ಯಾಲೆ ಗುಟ್ಟಿನಿಂದ ಏನೇನೊ ಬರದು ಕಳಸ್ಯಾನಂತ. ತೋರಿಕೆಗೆ ಮಾತ್ರ ನಾ ನಿಮ್ಮ ಕಡೇನs ಅದೇನಿ ಅಂತಾನ. ಮೂವತ್ತೆರಡರ ಚಳವಳಿಯೊಳಗೂ ಹೀಂಗೇ ಕುತಿಗ್ಗೊಯ್ಕತನ ಮಾಡಿದ್ದ. ಅದಕ್ಕs ಅವಗ ಇನಾಮು ಸಿಕ್ಕಿತಲ್ಲ ಆ ಕೆರೀ ಕೆಳಗಿನ ಹೊಲಾ!"

"ಈ ಚಳವಳಿಯಲ್ಲಿ ಹಾಗಾಗಬಾರದು. ಹಾವಿನ ವಿಷದ ಹಲ್ಲು ಮುರದ ಬಿಡಬೇಕು. ಅದಕ ಏನರೆ ಉಪಾಯ ಹುಡುಕರಿ"ಎಂದರು ಶಂಕರಪ್ಪ ಮಾಸ್ತರರು.

ಈ ಆಪ್ತಾಲೋಚನೆ ಮುಗಿದೊಡನೆ ಎಲ್ಲರೂ ರಂಗಣ್ಣನ ಮನೆಗೆ ಹೊರಟರು. ಅಪರಾತ್ರಿಯಲ್ಲಿ ಈ ರೀತಿ ಜನ ಬಂದದ್ದನ್ನು ಕಂಡು, ಮನೆಯ ಹೆಂಗಸರು, ಮಕ್ಕಳು ಹೌಹಾರಿದರು.

"ನೀವೇನೂ ಚಿಂತಿ ಮಾಡಬ್ಯಾಡ್ರಿ. ನಾವು ಇವರ ಮೈಮೇಲೆ ಏನೂ ಕೈಹಚ್ಚುವುದಿಲ್ಲ" ಎಂದು ಶೇಖರ ಸಾಂತ್ವನ ಹೇಳಿದ. ನಂತರ ರಂಗಣ್ಣನನ್ನು ಕುರಿತು "ನಿಮ್ಮ ಹತೀಲೆ ಇರೋ ದಫ್ತರ್ ಎಲ್ಲಾ ಹೊರಗ ತಗೀರಿ" ಎಂದ.

ರಂಗಣ್ಣನಿಗೆ ಈಗ ನಿಜಕ್ಕೂ ನಡುಕ ಹುಟ್ಟಿತು. ಅವನ ಒಪ್ಪಿಗೆಗಾಗಿ ಕಾಯದೇ, ಎಲ್ಲ ದಫ್ತರುಗಳನ್ನೂ ಮನೆಯ ಪಡಸಾಲೆಯಲ್ಲಿ ತಂದು ಸುರುವಿದರು. ಇನ್ನು ಮುಂದೇನು ಮಾಡುವರೋ ಎಂದು ರಂಗಣ್ಣ ಯೋಚಿಸುವ ಮುನ್ನವೇ ಕಡ್ಡಿಯನ್ನು ಗೀರಿ ಎಲ್ಲವನ್ನೂ ಸುಟ್ಟುಹಾಕಿದರು.

3

ಹಳ್ಳೂರಿನ ದೇಸಾಯಿ ಬಾಬಾಸಾಹೇಬರೆಂದರೆ ಬೆಳಗಾಂವ ಜಿಲ್ಲೆಯ ಜನರಿಗೆಲ್ಲ ಗೊತ್ತು. ಹಿರಿಯರು ಗಳಿಸಿದ್ದ ಆಸ್ತಿಯಲ್ಲಿ ಬಹುಭಾಗವನ್ನು ಅವರು ದುಂದುವೆಚ್ಚದಿಂದ ಕಳೆದುಕೊಂಡಿದ್ದರು. ತಮ್ಮ ಅದ್ಭುತವಾದ ರಾಜನಿಷ್ಠೆ, ಅದರಂತೆ ರಾಷ್ಟ್ರೀಯ ಚಳುವಳಿಯ ಬಗೆಗೆ ಅವರು ತೋರಿಸುತ್ತಿದ್ದ ಕಡುವಿರೋಧದಿಂದಲೂ ಅವರು ಹೆಸರು ಮಾಡಿದ್ದರು!

ಪತ್ನಿಯನ್ನು ಕಳೆದುಕೊಂಡಾಗಿನಿಂದ ದೇಸಾಯಿಯವರ ಸ್ವಭಾವ ಇನ್ನೂ ವಿಲಕ್ಷಣವಾಗಿದ್ದಿತು. ಬೇಟೆಯಾಡುವ ಆಸಕ್ತಿ ನಿಂತುಹೋಗಿತ್ತು. ಇಸ್ಪೀಟು, ಮದ್ಯ, ಮದಿರಾಕ್ಷಿ ಇವು ಮೂರೂ, ಅವರು ಪ್ರಪಂಚವನ್ನೆಲ್ಲ ಮರೆಯುವಂತೆ ಮಾಡಿದ್ದುವು. ಆದರೆ ಮಗ? ಅವನನ್ನು ಕುರಿತು ಅವರಿಗೆ ಬಲವಾದ ಚಿಂತೆ. ಕಾಲೇಜಿಗೆ ಮೂರು ತಿಂಗಳ ರಜೆ ಕೊಟ್ಟಿದ್ದರೂ ವಿಶ್ವನಾಥ ಮನೆಗೆ ಬಂದಿರಲೇ ಇಲ್ಲ. ಪತ್ರಕ್ಕೆ ಉತ್ತರವಿಲ್ಲ. ಯಾವ ಸುದ್ದಿಯೂ ಇಲ್ಲ. ಏಕಮಾತ್ರ ಪುತ್ರ. ಅವನು ಚಳವಳಿಯನ್ನು ಸೇರಿರಲಿಕ್ಕಿಲ್ಲವಷ್ಟೆ, ಅಥವಾ ಅಲ್ಲಲ್ಲಿ ನಡೆಯುವ ಗೋಳೀಬಾರಿನ ಗುಂಡಿಗೆ ಆಹುತಿಯಾದನೆ? ಆ ಚಿಂತೆಯಿಂದಲೂ ಅವರು ಮದ್ಯದ ಬಾಟಲಿಗೆ ಶರಣು ಹೋಗುತ್ತಿದ್ದರು.

ಆ ರಾತ್ರಿಯಲ್ಲಿ ಕುಡಿದ ಮದ್ಯದ ಅಮಲು ಅವರ ಸ್ಮೃತಿಯನ್ನೆಲ್ಲ ಕವಿದುಕೊಂಡಿದ್ದಿತು. ಅಂಥ ಸಮಯದಲ್ಲಿ ಪೈಲ್ವಾನ್ ಸಂಗಣ್ಣ ಅವರ ಮುಂದೆ ಧುತ್ತೆಂದು ಬಂದು ನಿಂತ.

“ಯಾರೋ ನೀನು? ಒಳಗೆ ಹೇಗೆ ಬಂದಿ?”

“ನಾನ್ರೀ ಕಲ್ಲಾಪುರದ ಸಂಗಣ್ಣ. ಬೆಳಗಾಂವಿಯೊಳಗ ಸಣ್ಣ ದೇಸಾಯ್ರು ಭೆಟ್ಟಿ ಆಗಿದ್ರು. ನಿಮಗೊಂದು ಸುದ್ದೀ ತಿಳಿಸಿ ಬಾ ಅಂದ್ರು.”

“ಹೌದೆ? ಹೌದೆ! ಎಲ್ಲಿದ್ದಾನೆ ಈಗ?” ಎಂದು ಸಂಭ್ರಮದಿಂದ ಕೇಳುತ್ತ ಸಂಗಣ್ಣನನ್ನು ತಮ್ಮ ಮಲಗುವ ದೊಡ್ಡ ಕೋಣೆಗೆ ಕರೆದೊಯ್ದರು. ಅವರ ಮೂರು ಬಂದೂಕುಗಳಿದ್ದದ್ದು ಅದೇ ಜಾಗವೇ.

“ಇಲ್ಲೇ ಇದ್ದಾರೆ. ತುಸು ದೂರದಲ್ಲಿ. ನೀವು ಸಿಟ್ಟಿಗೆದ್ದೀರಿ ಅವರ ಮ್ಯಾಲೆ ಅಂತ ತಿಳಿದು ಊರ ಹೊರಗೆ ಹಣಮಪ್ಪನ ಗುಡಿಯ ಹತ್ತಿರ ನಿಂತಾರೆ. ಅವರು ಚಳವಳಿಯೊಳಗ ಸೇರಿದಾರ. ಅವರ ಮ್ಯಾಲೆ ವಾರಂಟೂ ಬಂದೈತಂತ. ಪೋಲೀಸರ ಕಣ್ಣು ತಪ್ಪಿಸಿ ತಿರಗ್ಯಾಡತಾ ಇದ್ದಾರ. ನೀವು ಸಿಟ್ಟಿಗೇಳೋದು ಸಹಜ ಐತಿ, ಮನೀಗೆ ಬರಲಿಕ್ಕೆ ಧೈರ್ಯ ಇಲ್ಲ, ಅವರಿಗೆ.”

ಒಬ್ಬನೇ ಒಬ್ಬ ಮಗ! ಚಳವಳಿ ಸೇರಿಬಿಟ್ಟನೆ? ಸಿಟ್ಟಿಗೆದ್ದು ಏನು ಪ್ರಯೋಜನ?

“ಇಲ್ಲಪಾ. ಸಿಟ್ಟಿಗೇಳೂದಿಲ್ಲ, ಬಾ ಅಂತ ಹೇಳು.”

“ಇಲ್ಲರೀ, ಹಾಂಗ ಬರುದಿಲ್ಲಂತ. ನೀವೇ ಬಂದು ಕರಕೊಂಡು ಹೋಗಬೇಕಂತ. ಹಾಂಗ ಆದ್ರ ನೀವು ಅವರ್ನ ಕ್ಷಮಿಸೀರಿ ಅಂತ ತಿಳೀತಾರಂತ.”

"ಆಗಲೆಪಾ. ಬರ್ತೀನಿ ನಡಿ" ಎಂದು ಹೇಳಿ ಹೊರಟುಬಿಟ್ಟರು.

ಗುಡಿಯ ಹತ್ತಿರ ಬಂದಾಗ ಸಂಗಣ್ಣ "ಸಣ್ಣ ದೇಸಾಯ್ರ, ಸಣ್ಣ ದೇಸಾಯ್ರ" ಎಂದು ಮೂರ್‍ನಾಲ್ಕು ಬಾರಿ ಕೂಗಿದ. ಯಾವ ಉತ್ತರವೂ ಬರಲಿಲ್ಲ.

"ಎಲ್ಲಿ ಕೂತಿದ್ದನಪ್ಪಾ, ಅವಾ?" ಎಂದು ದೇಸಾಯರು ಕಳವಳಬಟ್ಟು ಕೇಳಿದರು.

"ಇಲ್ಲೇ ಇದ್ರು ಕಟ್ಟೀಮ್ಯಾಲ. ಇಲ್ಲೇ ಕೂತಿರತೀನಿ. ಲಗೂ ಬಾ-ಅಂತ ನನಗ ಹೇಳಿದ್ರು. ನಿಮ್ಮನ್ನ ಭೆಟ್ಟಿಯಾಗಬೇಕಂತ ಬಂದವರು ಅದೇಕೆ ಮನಸ್ಸು ಬದಲಾಯಿಸಿದರೊ!"

ಬಾಬಾಸಾಹೇಬರ ಎದೆ ಒಂದೇ ಸಮನೆ ಹೊಡೆದುಕೊಳ್ಳತೊಡಗಿತು. ಪಿತೃವಾತ್ಸಲ್ಯದ ಜೊತೆಗೆ ಮಾತೃವಾತ್ಸಲ್ಯವೂ ಸೇರಿಕೊಂಡಿತು. "ಅಯ್ಯೋ ಈ ಚಳಿಯಲ್ಲಿ, ಅಪರಾತ್ರಿಯಲ್ಲಿ, ಅಡವಿಯೊಳಗೆಲ್ಲ ಅಲೆದಾಡುವಂತಾಯ್ತಲ್ಲ. 'ಇಲ್ಲಪಾ, ನಾ ಸಿಟ್ಟಿಗೆದ್ದಿಲ್ಲ. ನಡೀ ಮನಿಗೆ ಹೋಗೋಣ' ಅಂತ ಹೇಳ್ತಿದ್ದೆ. ಮತ್ತೆ ಬೆಳಗಾವಿಗೆ ಹೋಗಿಬಿಟ್ಟನೇನೊ" ಎಂದು ಹಲುಬಿದರು.

ಸಂಗಣ್ಣ ಹೇಳಿದ "ಧಣೇರ. ನಿಮ್ಮ ಭೆಟ್ಟಿಗಂತೇ ಬಂದವರು. ಹೊಳ್ಳಿ ಹೋಗಿರಲಿಕ್ಕಿಲ್ಲ. ಬಾಳೊತ್ತು ದಾರೀ ಕಾದು ಮನೀಗೇ ಹೋಗಿರಬಹುದು" ಎಂದ.

ದೇಸಾಯರಿಗೆ ಅದೂ ನಿಜವೆನ್ನಿಸಿತು. "ಸಂಗಣ್ಣ, ಇದ್ದರೂ ಇರಬಹುದು. ನಾ ಮನೀಗೇ ಹೋಗತೀನಿ. ಆದರೂ ನೀನು ಒಂದಿಷ್ಟು ಹುಡುಕು" ಎಂದು ಹೇಳಿ ಮನೆಯತ್ತ ಧಾವಿಸಿ ಬಂದರು.

ಮನೆಯ ಹೊರಬಾಗಿಲು ತೆರೆದೇ ಇತ್ತು. ದೀಪ ಉರಿಯುತ್ತಲೇ ಇತ್ತು. ಆಳು ಮನುಷ್ಯನನ್ನು ಕೂಗಿದರೆ ಅವನಿಂದ ಉತ್ತರವಿಲ್ಲ. ಸಂಗಣ್ಣನೇ ಒಳ ಬರುವಾಗ ಅವನ ಕೈಕಾಲು ಕಟ್ಟಿ ಬಾಯಲ್ಲಿ ಚೆಂಡನ್ನು ತುರುಕಿದ್ದ. ದೇಸಾಯರು ತಮ್ಮ ಕೋಣೆಗೆ ಬಂದು ನೋಡುತ್ತಾರೆ; ಗೋಡೆಗೆ ಎದ್ದು ಕಾಣುವಂತೆ ಹಾಕಿದ್ದ ಮೂರು ಬಂದೂಕುಗಳು ಕಾಣೆಯಾಗಿದ್ದವು!

ಕೆಳಗಿನ ಮೇಜಿನ ಮೇಲೊಂದು ಪತ್ರ. ಬಿಡಿಸಿ ಓದಿದರು.

"ತಂದೆಯವರ ಚರಣಗಳಲ್ಲಿ -

ವಿಶ್ವನಾಥನ ನಮಸ್ಕಾರಗಳು.

ತಮ್ಮನ್ನು ಭೆಟ್ಟಿಯಾಗಲೆಂದು ಬಂದಿದ್ದೆ. ದೂರದಿಂದ ದರ್ಶನ

ಪಡೆದು ಸಮಾಧಾನಗೊಂಡೆ. ತಮ್ಮ ಅಪೇಕ್ಷೆಗೆ ವಿರುದ್ಧವಾಗಿ ಚಳವಳಿಗೆ ಸೇರಿರುವುದಕ್ಕಾಗಿ ದಯವಿಟ್ಟು ಮನ್ನಿಸಬೇಕು. ಈ ಚಳವಳಿಯಲ್ಲಿ ನಮಗೆ ಉಪಯೋಗವಾಗಬಹುದೆಂದು ಇಲ್ಲಿದ್ದ ಮೂರೂ ಬಂದೂಕಗಳನ್ನೂ ಪೆಟ್ಟಿಗೆಯಲ್ಲಿದ್ದ ಗುಂಡುಗಳನ್ನೂ ಒಯ್ದಿದ್ದೇನೆ. ನೀವಂತೂ ಅವುಗಳಿಂದ ಬೇಟೆಯಾಡುವುದನ್ನು ಎಂದೋ ಬಿಟ್ಟಿದ್ದೀರಿ. ಈ ಕಾಳಗದಲ್ಲಿ ಬದುಕಿ ಉಳಿದರೆ ತಮ್ಮ ದರ್ಶನವಾದೀತು.

ಇತಿ, ತಮ್ಮ ಬಂಡುಗಾರ ಮಗ."

ಹೀಗೆ ಬಲು ಸುಲಭವಾಗಿ ಶಸ್ತ್ರಾಸ್ತ್ರ ಸಿಕ್ಕಿದ್ದು ಗುಂಪಿನವರಿಗೆ ಸಂತೋಷವುಂಟು ಮಾಡಿತು. ಇನ್ನು ಒಂದು ಗುಪ್ತಸ್ಥಳ ಹುಡುಕಬೇಕು.

"ಇಲ್ಲಿಂದ ಎರಡು ಮೈಲಿ ದೂರ ಕಿರುಬನ ಕೊಳ್ಳದಾಗ ಒಂದು ಪಳೇಕಾಲದ ಗುಡಿ ಇರೂದು ನಿಮಗೆ ಗೊತ್ತೈತಲ್ಲ. ಸುತ್ತುಮುತ್ತು ನಾಲ್ಕು ಕಡೆಗೂ ದೊಡ್ಡ ಗುಡ್ಡ ಇರೂದರಿಂದ ಪೋಲೀಸರು ಅಲ್ಲಿ ಹಾಯೂಹಂಗಿಲ್ಲ. ಜನರೂ ಆ ಕಡೆ ಹೋಗೂದು ಕಡಿಮೆ. ಆ ಗುಡಿಯೊಳಗ ನಲವತ್ತು ಐವತ್ತು ಮಂದಿ ಸಹಜವಾಗಿ ಇರಬಹುದು. ಹತ್ತಿರ ಝುರಿಗಳೂ ಇದಾವೆ. ಕುಡಿಯುವ ನೀರಿನ ತ್ರಾಸ ಇಲ್ಲ. ಅಲ್ಲಿ ನಮ್ಮ ಕೇಂದ್ರ ಕಚೇರಿ ಹೂಡಬೇಕು."

"ಬಹಳ ಚಲೋ ಜಾಗ ಆರಿಸಿದ್ದೀಯಪ್ಪ ಶೇಕ್ರಣ್ಣ. ಅಲ್ಲಿ ಹೋಗಿ ಕೂತರ ಎಂಥಾ ಪೋಲಿಸನಿಗೂ ಪತ್ತೆ ಆಗಲಿಕ್ಕಿಲ್ಲ" ಎಂದು ನುಡಿದ ವಿಶ್ವನಾಥ.

"ಅಂತೂ ನಾವು ಅಲ್ಲಿಗೆ ಹೋಗುವ ಸುದ್ದಿ ಬಹಳ ಗುಟ್ಟಾಗಿರಬೇಕು. ಯಾರಿಗೂ ಹೇಳಬಾರದು" ಎಂದು ಎಚ್ಚರಿಸಿದ ಶೇಖರ.

ಗುಡಿ ವಿಶಾಲವಾಗಿತ್ತು. ಅನೇಕ ವರ್ಷಗಳಿಂದ ಜನವಸತಿ ಇಲ್ಲದೆ ಎಲ್ಲೆಡೆಯಲ್ಲೂ ಧೂಳು ತುಂಬಿಕೊಂಡಿತ್ತು. ಸಾಯಂಕಾಲದವರೆಗೆ ಆ ಸ್ಥಳವನ್ನೆಲ್ಲ ಗುಡಿಸಿ ಶುಚಿಗೊಳಿಸಿದ್ದೇ ಆಯಿತು. ಆ ಕೂಡಲೇ ಮುಂದಿನ ಕಾರ್ಯಕ್ರಮದ ಬಗ್ಗೆ ಸಮಾಲೋಚನೆ ನಡೆಯಿತು.

4

ಊಟ ಮುಗಿದ ತರುವಾಯ ಮೊದಲೇ ಗೊತ್ತುಪಡಿಸಿದ್ದ ರೀತಿ ಗುಂಪಿನವರೆಲ್ಲರೂ ದೊಡ್ಡ ರಸ್ತೆಯ ಕಡೆಗೆ ಹೊರಟರು. ನಾಲ್ಕೈದು ಜನರು ಅಂಗಿಗಳ ಒಳಗಡೆ ಪಿಸ್ತೂಲುಗಳನ್ನು ಅಡಗಿಸಿಕೊಂಡಿದ್ದರು. ಮಿಕ್ಕವರು ಚೂಪುಗೊಡಲಿಗಳನ್ನೂ ದೊಣ್ಣೆಗಳನ್ನೂ ಹಿಡಿದುಕೊಂಡಿದ್ದರು.

ಮೂರು ನಾಲ್ಕು ಮೈಲಿಗಳವರೆಗೆ ಹೊಲಗಳಲ್ಲಿ ನಡೆದು ಅವರು ಮುಖ್ಯರಸ್ತೆಗೆ ಬಂದು ಸೇರಿ ಮೊದಲೇ ಗೊತ್ತುಮಾಡಿದ್ದ ಸ್ಥಳಕ್ಕೆ ಬಂದು ಕಾಯ್ದು ಕುಳಿತರು. ಬೆಳಗಾವಿಯಿಂದ ಬರುವ ಮೋಟಾರು ದಾರಿಯು ಅಲ್ಲಿ ಹೊರಳಿ ಚಿಕ್ಕದೊಂದು ಸೇತುವೆಯ ಮೇಲೆ ಹಾದುಹೋಗುತ್ತಿತ್ತು. ಸುತ್ತುಮುತ್ತಲೂ ದಟ್ಟವಾಗಿ ಬೆಳೆದ ಮಾವಿನ ಮರಗಳು. ಅವುಗಳಾಚೆ ಗಿಡಗಂಟೆಗಳಿಂದ ಕೂಡಿದ ಮರಡಿ. ಆಚೆ ಈಚೆ ಅರ್ಧ ಮೈಲಿವರೆಗೂ ಜನ ಸುಳಿಯುವ ಹಾಗಿರಲಿಲ್ಲ. ಅಂಥ ಪ್ರದೇಶ ಅದು.

ಮೊದಲೇ ಗೊತ್ತುಪಡಿಸಿದಂತೆ ಮುದುಕ ಬಾಳಪ್ಪ ಧರಿಸಿದ್ದ ಬಟ್ಟೆಬರೆಗಳಲ್ಲೇ ಹೋಗಿ, ದಾರಿ ಹೊರಳುವ ಸ್ಥಳದ ಹತ್ತಿರ ಮರದ ನೆರಳಿನಲ್ಲಿ ಕುಳಿತುಕೊಂಡು, ಚಿಲುಮೆಯನ್ನು ತೆಗೆದು ತಂಬಾಕು ಹಾಕತೊಡಗಿದ. ಉಳಿದವರೆಲ್ಲ ಸುತ್ತುಮುತ್ತಲಿನ ಗಿಡಗಳ ಹಿಂದೆ ಅವಿತುಕೊಂಡು ಸಮಯ ಕಾಯತೊಡಗಿದರು.

ಅವರು ಬಹಳ ಹೊತ್ತು ಕಾಯುವ ಅಗತ್ಯ ಉಳಿಯಲಿಲ್ಲ, ದೂರದಿಂದ ಧೂಳು ಎದ್ದ ಹಾಗೆ ಕಾಣಿಸಿತು. ಒಂದೆರಡು ನಿಮಿಷಗಳಲ್ಲೇ ಅವರು ಆತುರವಾಗಿ ಕಾಯುತ್ತಿದ್ದ ಟಪಾಲು ಬಸ್ಸು ವೇಗವಾಗಿ ಬರುವುದು ಕಂಡುಬಂದಿತು.

ಒಡನೆಯೇ ಶೇಖರ ಮೆಲ್ಲಗಿನದೊಂದು ಸಿಳ್ಳು ಹಾಕಿ ಗುಂಪಿನವರಿಗೆಲ್ಲ ಸಿದ್ಧವಾಗಿರುವಂತೆ ಸೂಚಿಸಿದ. ಬಾಳಪ್ಪನೂ ತಕ್ಷಣ ಎದ್ದುನಿಂತು ನಡುದಾರಿಯಲ್ಲಿ ಬಸ್ಸು ನಿಲ್ಲಿಸುವ ಪ್ರವಾಸಿಕರ ಹಾಗೆ ಬಲಗೈಯನ್ನು ಮುಂದೆ ಮಾಡಿದ.

ವೇಗವಾಗಿ ಬರುತ್ತಿದ್ದ ಬಸ್ಸು ಹೊರಳುವ ಸ್ಥಳಕ್ಕೆ ಬಂದಾಗ ಕಿರ್‌ರ್‌ರ್‌ರ್ ಎಂದು ಸದ್ದುಮಾಡುತ್ತಾ ನಿಂತುಕೊಂಡಿತು. ಒಡನೆಯೇ ಸುತ್ತುಮುತ್ತಲಿಂದ ಗುಂಪಿನವರೆಲ್ಲ ಬಂದು ಬಸ್ಸನ್ನು ಸುತ್ತುವರಿದರು. ಪಿಸ್ತೂಲನ್ನು ಡ್ರೈವರನ ಕಡೆಗೆ ಗುರಿಹಿಡಿದು ಶೇಖರ ಗಂಭೀರ ಸ್ವರದಲ್ಲಿ ಹೇಳಿದ: “ಆ ಟಪಾಲು ಚೀಲಗಳನ್ನೆಲ್ಲ ಕೊಟ್ಟುಬಿಡಿ.”

ಅಕಸ್ಮಾತ್ತಾಗಿ ಒದಗಿದ ಈ ಪ್ರಸಂಗದಿಂದ ಗಾಬರಿಯಾಗಿದ್ದ ಡ್ರೈವರು ಮರುಮಾತನಾಡದೆ ಟಪಾಲು ತುಂಬಿದ ಚೀಲಗಳನ್ನೆಲ್ಲ ಒಂದೊಂದಾಗಿ ತೆಗೆದು ಕೆಳಗಿರಿಸತೊಡಗಿದ.

ಬಸ್ಸಿನಲ್ಲಿದ್ದ ಹಲವರು ಹೆದರಿ ಬಸ್ಸಿನಿಂದ ಇಳಿದು

ಓಡಿಹೋಗುವುದರಲ್ಲಿದ್ದರು. ಇನ್ನು ಕೆಲವರು ತಮ್ಮಲ್ಲಿದ್ದ ಹಣವನ್ನು ತೆಗೆದು ಗುಂಪಿನವರಿಗೆ ಕೊಡುವುದಕ್ಕೂ ಬಂದರು. ಅನೇಕರು ಪ್ರಾಣಭಯದಿಂದ ನಡುಗುತ್ತಿದ್ದುದೂ ಕಂಡುಬಂದಿತು. ಅದನ್ನು ನಿರೀಕ್ಷಿಸುತ್ತಿದ್ದ ಶೇಖರ "ನೀವ್ಯಾರೂ ಇಳೀಬ್ಯಾಡ್ರಿ ಮೋಟಾರಿನಿಂದ. ನಿಮಗೆ ನಾವು ಕೈಹಚ್ಚುವುದಿಲ್ಲ. ಈ ಟಪಾಲು ಸರಕಾರೀ ಸಾಮಾನು. ಅದನ್ನು ಮಾತ್ರ ತಗೊಂಡು ಹೋಗ್ತೇವೆ. ಯಾರೂ ಹೆದರಬ್ಯಾಡ್ರಿ. ನಾವೂ ನಿಮ್ಮವರೇ" ಎಂದು ಕೂಗಿ ಹೇಳಿದ. ಅನಂತರ ಡ್ರೈವರನ ಕಡೆಗೆ ತಿರುಗಿ "ಹೂಂ. ಇನ್ನು ಹೊರಡಿ ನೀವು!" ಎಂದ. ಬಸ್ಸು ಹೊರಟುಬಿಟ್ಟಿತು.

"ಅಂತೂ ಗಾಂಧೀ ಜಯಂತಿಯನ್ನ ಜೋರಾಗಿ ಆಚರಿಸಿದಂತಾಯ್ತು, ಶೇಖರಣ್ಣ! ಟಪಾಲು ಲೂಟಿ ಆಗೋದು ಇದೇ ಮೊದಲು ಸಾರಿ ನೋಡು, ಕರ್ನಾಟಕದೊಳಗ. ನಾಳೆ ನಾಡದ್ದು ಈ ಸುದ್ದಿ ಪತ್ರಿಕೆಯೊಳಗ ಬಂತು ಅಂದರ ಆಮ್ಯಾಲ ಎಲ್ಲಾ ಕಡೆಗು ಲೂಟಿ ಸುರು ಆಗತೈತಿ...."ಎಂದರು ಮಾಸ್ತರರು.

ಕೆಲಸ ಯಶಸ್ವಿಯಾಗಿ ಕೊನೆಗೊಂಡದ್ದರಿಂದಾಗಿ ಅವರೆಲ್ಲಾ ತುಂಬಾ ಸಂತೋಷಗೊಂಡಿದ್ದರು. ಯಾವ ಗಲಾಟೆಯೂ ಇಲ್ಲದೆ, ಕೊಂಚವೂ ಹಿಂಸೆಯಿಲ್ಲದೆ ಸುಲಭವಾಗಿ ಸಾಧಿಸಿತ್ತು ಆ ಕಾರ್ಯ! ಉತ್ಸಾಹದಿಂದ ಅವರೆಲ್ಲರೂ ಕಿರುಬನ ಕೊಳ್ಳದ ಕಡೆಗೆ ಹೊರಟರು.

ಆ ದಿನ ಗುಂಪಿನವರೆಲ್ಲ ಕೂಡಿ ಆ ಕೊಳ್ಳದಲ್ಲಿಯೆ ಗಾಂಧೀ-ಜಯಂತಿಯನ್ನಾಚರಿಸಿದರು. ಲೂಟಿ ಮಾಡಿ ತಂದ ಅಂಚೆಯನ್ನೊಡೆದು ಅದರಲ್ಲಿದ್ದ ಸರಕಾರೀ ಕಾಗದಪತ್ರಗಳನ್ನೆಲ್ಲ ಸುಟ್ಟುಬಿಟ್ಟರು. ಸಾರ್ವಜನಿಕರ ಪತ್ರಗಳನ್ನೆಲ್ಲ ಒಂದು ಚೀಲದಲ್ಲಿ ಕಟ್ಟಿ ರಾತ್ರಿ ಹೊತ್ತು ತಾಲೂಕಿನ ಸ್ಥಳದಲ್ಲಿರುವ ಅಂಚೆ ಕಚೇರಿಯ ಕಟ್ಟೆಯ ಮೇಲೆ ಇಟ್ಟು ಬರುವುದೆಂದು ಗೊತ್ತುಮಾಡಿ ಅದಕ್ಕಾಗಿ ಒಬ್ಬನನ್ನು ನಿಯಮಿಸಿದರು. ಅನಂತರ ಎಲ್ಲರೂ ಗುಡಿಯೊಳಗಡೆ ಸಭೆ ಸೇರಿ ಗಾಂಧೀಜಿಯವರ ಹೆಸರು ಹೇಳಿ ಮತ್ತೊಂದು ಸಲ,"ಮಾಡುವೆವು-ಇಲ್ಲ-ಮಡಿಯುವೆವು" ಎಂಬುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

ಸಾಯಂಕಾಲದ ಊಟವಾದ ನಂತರ ವಿಶ್ವನಾಥ ಗರ್ಭಗುಡಿಯಲ್ಲಿದ್ದ ಕಾಗದ, ಕಾರ್ಬನ್, ಪೆನ್ಸಿಲ್ ಇತ್ಯಾದಿ ಸಾಮಗ್ರಿಗಳನ್ನು ತೆಗೆದುಕೊಂಡು ಕರಪತ್ರಗಳನ್ನು ಬರೆಯುವ ಕಾರ್ಯಕ್ಕೆ ತೊಡಗಿದ. ತಾವು ಅಂದು ಆಚರಿಸಿದ

ಗಾಂಧೀಜಯಂತಿಯ ವೈಶಿಷ್ಟ್ಯವನ್ನೆಲ್ಲ ಚಿತ್ರಿಸಿ, ಅದೇ ರೀತಿ ಕರ್ನಾಟಕದ ಜನರೆಲ್ಲ ಆಚರಿಸಬೇಕೆಂದು ಕರೆ ಕೊಡಬೇಕಾಗಿದ್ದಿತು. ವಾರಕ್ಕೊಂದು ಸಲ ಕರಪತ್ರ ಹೊರಡಿಸುವುದು ಅವನ ಪಾಲಿನ ಕೆಲಸವಾಗಿದ್ದಿತು. ನೂರಾರು ಪ್ರತಿಗಳನ್ನು ತೆಗೆದು ಅವುಗಳನ್ನು ಅಂಚೆಗೆ ಹಾಕುವ ಹಾಗೂ ಹಂಚುವ ಏರ್ಪಾಡು ಮಾಡಿ,ಅನಂತರ ವಿರಮಿಸಬೇಕಾಗುತ್ತಿದ್ದಿತು. ಕೈಯಿಂದ ಪ್ರತಿಗಳನ್ನು ತೆಗೆಯುವುದು ತೀರ ತೊಂದರೆಯ ಕೆಲಸವಾದುದರಿಂದಲೂ, ಅದಕ್ಕಾಗಿ ಸಮಯವೂ ಹೆಚ್ಚಾಗಿ ವ್ಯಯವಾಗುತ್ತಿದ್ದುದರಿಂದಲೂ ಸಾಧ್ಯವಿದ್ದಷ್ಟು ಬೇಗ ಒಂದು ಅನುಕೂಲವಾದ ತಾಣವನ್ನು ಹುಡುಕಿ ಕರಪತ್ರಗಳಿಗಾಗಿ ಒಂದು ಪುಟ್ಟ ಕಾರ್ಯಾಲಯವನ್ನೇ ಏರ್ಪಡಿಸಬೇಕಾಗಿದ್ದಿತು. ಆಮೇಲೆ ಸೈಕ್ಲೋಸ್ಟೈಲ್ ಯಂತ್ರವನ್ನು ಅಲ್ಲಿಗೆ ತಂದು ಹೇಮಾವತಿಯನ್ನು ಕರೆದು ಕಾರ್ಬನಿನಿಂದ ಪ್ರತಿಗಳನ್ನು ತೆಗೆಯಬೇಕಾಗಿದ್ದಿತು. ಬೇಸರ ಬರಿಸುವ ಕೆಲಸವಾದರೂ ಆತ ಕೊಂಚವೂ ಗೊಣಗದೆ ತನ್ನ ಕರ್ತವ್ಯವನ್ನು ಸಂತೋಷದಿಂದ ನೆರವೇರಿಸುತ್ತಿದ್ದ.

5

ಮಧ್ಯಾಹ್ನದ ಊಟ ಮುಗಿಸಿ, ಬಾಬಾಸಾಹೇಬ ದೇಸಾಯಿಯವರು ವಿಶ್ರಾಂತಿ ಪಡೆಯುತ್ತಿದ್ದರು. “ಯಾರೋ ಒಬ್ಬರು ಸಾಹೇಬ್ರು ಬಂದಾರ್ರಿ, ಧಣೇರ” ಎಂದು ಆಳು ಬಂದು ಹೇಳಿದಾಗ ದೇಸಾಯಿಯವರು ಬೆಚ್ಚಿಬಿದ್ದರು. ಬಂದವ ಕೀರ್ತಿನಾಥ. ತನ್ನ ಸಿ. ಐ. ಡಿ. ಹುದ್ದೆಯ ಗುರುತನ್ನು ಹೇಳಿ ಮಾತಿಗೆ ತೊಡಗಿದ:

“ನಿಮ್ಮ ಮಗ ಎಲ್ಲಿದ್ದಾನೆ? ಏನು ಮಾಡ್ತಿದ್ದಾನೆ ಗೊತ್ತಿದೆಯೆ?”

“ಇಲ್ಲ. ಅವ ಇಲ್ಲಿ ಬಂದೇ ಇಲ್ಲ. ಚಳವಳಿಯೊಳಗ ಸೇರಿದ್ದಂಗ ಕಾಣಸ್ತದ” ಎಂದು ತನ್ನ ಅಳಲನ್ನು ತೋಡಿಕೊಂಡರು, ಮತ್ತು “ಈಗ ಎಲ್ಲಿ ಇದ್ದಾನ? ನಿಮಗ ಗೊತ್ತಿದ್ರ ಹೇಳ್ರಿ. ಅವನ ಜೀವಕ್ಕ ಏನು ಧಕ್ಕೆ ಆಗಿಲ್ಲಲ್ಲ?” ಎಂದು ಕೇಳಿದರು.

ಕೀರ್ತಿನಾಥ ಹೇಳಿದ: “ಇಲ್ಲೇ ಸಮೀಪದ ಕಲ್ಲಾಪುರದೊಳಗ ಶೇಖರ ಅಂತ ಇದ್ದನಲ್ಲ; ಅವನ ಗುಂಪನ್ನು ಸೇರಿಕೊಂಡಾನ, ನಿಮ್ಮ ಮಗ. ಮೊನ್ನೆ ಟಪಾಲ ಬಸ್ ಲೂಟಿ ಮಾಡಿದರು. ಅವನೇ ಮುಂದಾಳಾಗಿದ್ದ. ಆ ಶೇಖರನ ಮಗ್ಗಲು ಮುರೀತಂದ್ರ, ನಿಮ್ಮ ಮಗ ತಾನಾಗೇ ಹಾದಿಗೆ ಬರ್ತಾನ.

ಅದಕ್ಕೊಂದು ಉಪಾಯ ಅದ. ನೀವು ಅದನ್ನ ಮಾಡಬೇಕು."

"ಏನದು? ಏನದು? ಹೇಳ್ರಿ. ಅವಶ್ಯ ಮಾಡತೇನಿ."

"ಆ ಶೇಖರನ ಅಣ್ಣ ಲಿಂಗಣ್ಣ, ನಿಮಗ ಗೊತ್ತು. ನಿಮ್ಮ ಹೊಲ ಅವನೇ ಮಾಡ್ತಾನಂತಲ್ಲ? ಆ ಹೊಲಾ ಲಿಂಗಣ್ಣನಿಂದ ಬಿಡಿಸಿ ಬಿಡ್ರಿ."

ಕಳೆದ 50 - 60 ವರ್ಷಗಳಿಂದ ಲಾವಣಿ ಮಾಡುತ್ತಿದ್ದ ಲಿಂಗಣ್ಣನನ್ನು ಬಿಡಿಸುವುದೆ? ಆದರೂ ದೇಸಾಯಿಯವರು ಒಪ್ಪಿದರು.

6

ಗುಂಪಿನವರಿಗೂ ಪೋಲೀಸರಿಗೂ ನೇರ ಘರ್ಷಣೆಯಾದದ್ದು ಅದೇ ಮೊದಲ ಸಲ. ಸಶಸ್ತ್ರ ಪೋಲೀಸರಿಂದ ರೈಫಲ್‌ಗಳನ್ನು ಪಡೆಯುವ ದೃಷ್ಟಿಯಿಂದ ಹಂಚಿಕೆಯಾಗಿತ್ತು ಅದು. ರಾತ್ರಿಯ ಸುಮಾರು ಮೂರು ಗಂಟೆಯ ಸಮಯ. ಐವರು ಪೋಲೀಸರು ಆ ಊರಿನ ಗೌಡನೂ ಗಸ್ತಿ ತಿರುಗುತ್ತ ಬರುತ್ತಿದ್ದರು. ಹಾಗೆ ತಿರುಗಿ ತಿರುಗಿ ಸುಸ್ತಾಗಿದ್ದರೆನ್ನಬಹುದು. ಆಗ ನಾಲ್ವರು ರೈತರು ಅವರಿಗೆ ಎದುರಾದರು. "ಏಯ್, ಎಲ್ಲಿಗೆ ಹೊರಟೀರಿ?" ಎಂದು ಪೋಲೀಸರು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ಒಬ್ಬ ಹೇಳಿದ:

"ನಮ್ಮ ಪೈಕಿ ಒಬ್ಬ ಮುದುಕಿ ಸತ್ತಾಳ. ಆಕಿಗೆ ಮಣ್ಣು ಕೊಡೋ ತಯಾರಿಗೆ ಹೊರಟೇವಿ." ಹೀಗೆ ಹೇಳಿದವ ಸಂಗಣ್ಣ! ಆ ಕೂಡಲೇ ಉಳಿದ ಮೂವರು ಪೋಲೀಸರ ಕಣ್ಣಿಗೆ ಖಾರಪುಡಿಯನ್ನು ಉಗ್ಗಿ ಅವರ ಮೇಲೆ ಹಾರಿದರು. ಒಡನೆಯೇ ಹಿಂದಿನಿಂದ ಇನ್ನೈದು ಜನ ಬಂದು ರೈಫಲ್ಲನ್ನು ಕಸಿದುಕೊಂಡವರೇ ಓಡಿದರು. ಗೌಡನಿಗೆ ಏನೂ ತೋಚದೆ, ಆತ ಸುಮ್ಮನುಳಿದ.

ಹೀಗೆ ದೊರೆತ ಯಶಸ್ಸಿನಿಂದ ಆನಂದಿತರಾಗಿ ಹಿಂತಿರುಗುವಾಗ ಬೆಳಗಾಗುತ್ತ ಬಂದಿತ್ತು. ಪೂರ್ವ ದಿಕ್ಕಿನಿಂದ ಬಾಲ ರವಿಯ ಎಳೆಗಿರಣಗಳು ಗುಡ್ಡದೋರೆಯು ಮೇಲೆ ಸುರಿದು ಸುತ್ತಮುತ್ತಲಿನ ಪರಿಸರವನ್ನ ಚೇತೋಹಾರಿಯನ್ನಾಗಿ ಮಾಡಿದ್ದುವು. ದೊರೆತ ರೈಫಲ್‌ಗಳನ್ನು ಒಬ್ಬೊಬ್ಬರೂ ಸೈನಿಕರಂತೆ ಹೆಗಲ ಮೇಲೆ ಹಾಕಿಕೊಂಡು ಬರುತ್ತಿದ್ದರು.

"ಅಂತೂ ಈ ಬಂದೂಕು ಸಿಕ್ಕಿದ್ದರಿಂದ, ತಾಲೂಕು ಕಚೇರಿಯ ಮ್ಯಾಲ ದೌಡು ಮಾಡುವದು ಸುಲಭ ಆಗೈತಿ" ಎಂದರು ಮಾಸ್ತರರು.

"ಇನ್ನ ಅದನ್ನ ಎಂದ ಮಾಡೋದು ಶೇಖರಣ್ಣ?" ಎಂದು ಕೇಳಿದ ಸಂಗಣ್ಣ.

"ಅದು ಭಾಳ ಗಂಡಾಂತರದ್ದು ಸಂಗಣ್ಣಾ. ತಯಾರಿ ಛಲೋ ಮಾಡಬೇಕು. ನೂರು ಜನರಾದರು ಬೇಕಾದೀತು, ಆ ಕೆಲಸಕ್ಕ. ಎಲ್ಲಾ ಮೊದಲೇ ನಕಾಶೆ ಹಾಕಿ, ಸೈನಿಕರ ಹಾಂಗ ಶಿಸ್ತಿನಿಂದ ಮಾಡೋ ಜನಾ ಬೇಕು."

ಕೊಳ್ಳಕ್ಕೆ ಬಂದು ಝರಿಯ ನೀರಿನಲ್ಲಿ ಸ್ನಾನ ಮಾಡುತ್ತಿದ್ದಾಗಲೂ ಶೇಖರನಿಗೆ ಈ ಮಹಾನ್ ಸಾಹಸ ಹೇಗೆ ಕೈಗೂಡಬಹುದೆಂದು ಯೋಚಿಸುತ್ತಿದ್ದ. ಸ್ನಾನ ಮುಗಿಸಿ ಮೇಲೆ ಬಂದು ನೋಡುತ್ತಾನೆ - ಎದುರಿಗೆ ತನ್ನ ತಾಯಿ!

"ಏನವ್ವಾ ಇಷ್ಟು ಲಗು ಬಂದೆ?"

"ಹೀಂಗಾs ಬಂದೆನಪ್ಪ. ನಡೀ. ನೀವೆಲ್ಲ ರೊಟ್ಟಿ ತಿನ್ನಿರಿ ಮೊದಲು. ಎಲ್ಲಾ ಹೇಳ್ತೇನೆ" ಎಂದಳು ಪಾರ್ವತಮ್ಮ

ತಾಯಿಯ ಮುಖವನ್ನೊಂದು ಸಲ ಸೂಕ್ಷ್ಮವಾಗಿ ನಿರುಕಿಸಿದ ಶೇಖರ. ಅಲ್ಲಿ ಚಿಂತೆಯ ಭಾವವನ್ನು ಗುರುತಿಸಲು ಸಾಧ್ಯವಾಗದಿದ್ದರೂ ಆಕೆಯ ಧ್ವನಿಯಲ್ಲಾದ ಬದಲಾವಣೆಯಿಂದ ಏನೋ ಅಚಾತುರ್ಯ ನಡೆದಿರ-ಬೇಕೆಂಬುದು ಸ್ಪಷ್ಟವಾಗಿದ್ದಿತು.

ಗುಂಪಿನವರೆಲ್ಲ ಗುಡಿಯ ಪಡಸಾಲೆಯಲ್ಲಿ ಕುಳಿತುಕೊಂಡು ರೊಟ್ಟಿ ತಿನ್ನುತ್ತಿದ್ದಾಗ ಪಾರ್ವತಮ್ಮ ಹೇಳಿದಳು:

"ಆ ರಂಗಣ್ಣ ಮತ್ತೆ ಏನೋ ಕುತಂತ್ರ ಹೂಡಿದಾಂಗ ಕಾಣತೈತಿ. ನಿನ್ನೆ ಅವನೂ ದೇಸಾಯರು ಕೂಡಿ ಮನೆಗೆ ಬಂದಿದ್ದರು."

ದೇಸಾಯರು ಎನ್ನುತ್ತಲೇ ವಿಶ್ವನಾಥನಿಗೆ ಕುತೂಹಲ ಉಕ್ಕೇರಿತು. "ಯಾರು? ನಮ್ಮ ಅಪ್ಪ ಏನು?" ಎಂದು ಆತ ಕೇಳಿದ.

"ಹೌದಪ್ಪ, ಅವರೇ. ನಿಮ್ಮ ಹೊಲವನ್ನೇ ನಾವು ಲಾವಣಿಗೆ ಹಿಡಿದಿರೂದು. ನಿನಗೆ ಗೊತ್ತಿಲ್ಲೇನು?"

"ಯಾಕ ಬಂದಿದ್ದರು ಅವರು?"

"ಏನೋ ತಂತ್ರ ಮಾಡಿದಾನ ಕುಲಕರ್ಣಿ. ಇಲ್ಲದಿದ್ದರ ದೇಸಾಯರು ಅಂಥಾವರಲ್ಲ. ನಿನ್ನೆ ಬಂದವರೇ ಲಿಂಗಣ್ಣನ್ನ ಕರದು ಬಾಯಿಗೆ ಬಂದ ಹಾಂಗ ಮಾತಾಡಿದರು. 'ಹೊಲಾ ಈಗಿಂದೀಗ ಬಿಡಬೇಕು' ಅಂದರು...."

"ಹೊಲಾ ಬಿಡಬೇಕು? ಇದೇನವ್ವ. ಇಂಥಾ ಮಾತು?" ಎಂದ ಶೇಖರ.

"ಹೌದು ಬಿಡಬೇಕಂತೆ. ಅಷ್ಟೇ ಅಲ್ಲ. ಈಗ ನಾಲ್ಕೈದು ವರ್ಷದಿಂದ ನೆಟ್ಟಗೆ ಬೆಳೆ ಬರಲಿಲ್ಲ ಅಂತ ಲಾವಣಿ ಹಣ ಕೊಡೂದೂ ಉಳಿದಿತ್ತಲ್ಲ? ಇಷ್ಟರ ತನಕ ದೇಸಾಯರೂ ಅದನ್ನ ಕೇಳಿರಲಿಲ್ಲ. ಚಲೋ ಬೆಳೆ ಬಂದಾಗ ಕೊಟ್ಟರಾಯ್ತು ಅಂತ ಸುಮ್ಮನಿದ್ದೆವ್ರು.ಈಗ ಒಮ್ಮಿಂದ ಒಮ್ಮೆಲೆ ಎಲ್ಲಾ ಕೊಡಬೇಕು ಅಂತ ಕೂತಿದ್ದಾರ. ಈ ವರ್ಷಾನೂ ಬೆಳೆ ಬರಲಿಲ್ಲ. ನಾಲ್ಕೈದು ಚೀಲ ಆದ್ರೂ ಜೋಳ ಬರ್ತಾವ್ರೋ ಇಲ್ಲೋ. ಸುಗ್ಗಿನೂ ಇನ್ನೂ ದೂರ ಐತಿ. ಇಂಥಾದರಾಗ ದೇಸಾಯರು ಹೀಂಗ ಬಂದು ಕೂತರ ಏನು ಮಾಡಬೇಕು?"

ಶೇಖರನ ರೊಟ್ಟಿ ಕೈಯಲ್ಲಿಯೇ ಉಳಿಯಿತು. ಮುಂದೆ ತಿನ್ನಲು ಅವನಿಗೆ ಮನಸ್ಸು ಬರಲಿಲ್ಲ. ಅಕಸ್ಮಾತ್ತಾಗಿ ಬಂದು ನಿಂತ ಈ ಮಹಾ ಸಮಸ್ಯೆಯನ್ನು ಹೇಗೆ ಎದುರಿಸಬೇಕೆಂಬುದು ತಿಳಿಯದಾಯಿತು. ಇದುವರೆಗೆ ಮನೆಯ ಯೋಚನೆಯನ್ನೇ ತಲೆಗೆ ಸೇರಿಸಿಕೊಳ್ಳದೆ ಎಲ್ಲ ಬುದ್ಧಿಯನ್ನೂ ಎಲ್ಲ ಶಕ್ತಿಯನ್ನೂ ಚಳವಳಿಯಲ್ಲೇ ತೊಡಗಿಸಿ ಕೆಲಸ ಮಾಡುತ್ತಿದ್ದನಾತ. ಹಿರಿಯಣ್ಣ ಲಿಂಗಣ್ಣ ಮನೆತನವನ್ನು ನೋಡಿಕೊಳ್ಳಲು ಸಮರ್ಥನಾಗಿದ್ದು ಅವನಿಗೆ ಸಹಾಯಕಳಾಗಿ ತಾಯಿಯಿರುವಾಗ ತಾನು ಆ ಬಗೆಗೆ ಚಿಂತೆಮಾಡುವ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದ. ಆದರೆ ಈಗ ಹಠಾತ್ತಾಗಿ ಬಂದೊದಗಿದ ಈ ಗಂಡಾಂತರವನ್ನು ಎದುರಿಸಲಾರದೆ ಮನೆಯವರು ಚಿಂತೆಗೆ ಒಳಗಾಗಿದ್ದರು. "ದೇಸಾಯಿಯವರಿಗೆ ಸರಕಾರದಿಂದ ತಾಕೀತು ಬಂದೈತಂತಪ್ಪ. ಚಳವಳಿಯ ಮಂದಿಗೆ ಹೊಲ ಮಾಡೂದಕ್ಕ ಕೊಡಬಾರದಂತ. ಅದಕ್ಕ ಬಿಡಿಸುತಾರಂತೆ..."ಎಂದಳು, ಪಾರ್ವತಮ್ಮ.

"ಶೇಖರಣ್ಣ ಚಳವಳಿಯವ, ಆದರೆ ಲಿಂಗಣ್ಣ ಏನು ಅಲ್ಲವಲ್ಲ? ತಾನಾಯ್ತು ತನ್ನ ಹೊಲ ಆಯ್ತು...ತನ್ನ ದುಡಿತ ಆಯ್ತು...ಅಂಥವನ ಸುತ್ತು ಯಾಕ ಇವರು ಗಂಟುಬಿದ್ದಾರ?" ಎಂದ ಸಂಗಣ್ಣ.

"ನಮ್ಮ ರಂಗಣ್ಣನಂಥ ಕುಲಕರ್ಣಿ ಇದ್ದರೆ ಯಾರಿಗೆ ಏನು ಬರಲಿಕ್ಕಿಲ್ಲ ಬಿಡು! ನಿನಗೂ ಬಂದರ ಬಂತೇ ದಾಳಿ!" ಎಂದ ಬಾಳಪ್ಪ.

"ಅದೂ ಅಲ್ಲದೆ, ಸಣ್ಣ ದೇಸಾಯರು ನಿಮ್ಮ ಸಂಗಡ ಇರೋದು ಗೊತ್ತಾಗೈತಿ. ಅವರನ್ನ ನೀವೇ ಕೆಡಿಸಿ ಹಾಳುಮಾಡಿ ಚಳವಳಿಗೆ ಹಾಕಿದಿರಿ

ಅಂತ ಸಿಟ್ಟಾಗಿದ್ದಾರ ದೇಸಾಯರು. ಅವರನ್ನ ಮನೆಗೆ ಕಳಿಸಿಬಿಟ್ಟರ ಹೊಲಾ ಬಿಡಿಸುವದಿಲ್ಲವಂತೆ... ನೀವು ಏನಾರೆ ಮಾಡಿಕೊಳ್ರಿ. ನಮ್ಮ ಹೆಸರು ಯಾಕ ಕೆಡಸ್ತೀರಿ. ಸರಕಾರದೊಳಗ? ನಮ್ಮ ಮಗನ್ನ ಕಳಿಸಿಬಿಡ್ರಿ-ಅಂದರು."

"ಕಳಿಸಿಬಿಡ್ರಿ ಅಂದರ ಕಳಿಸುವರ್ಯಾರವ್ವ? ಇವರೇನೂ ನನ್ನ ಕರಕೊಂಡು ಬಂದಿಲ್ಲ: ಆದರ, ಈಗ ಅಂಥಾ ಪ್ರಸಂಗ ಬಂದ ಹಾಗಾಯ್ತಲ್ಲ?" ಎಂದು ನೊಂದು ನುಡಿದ ವಿಶ್ವನಾಥ.

"ಛೆ, ಛೆ. ಹಾಂಗ ತಿಳಿಕೋಬ್ಯಾಡ. ನಿನ್ನ ಮನಸ್ಸಿನಾಗ ಇರದಿದ್ದರ ಹೋಗಬ್ಯಾಡ. ನಮಗೇನು ಹ್ಯಾಂಗಾದರೂ ಮಾಡತೀವಿ. ಇಂಥ ಕಷ್ಟ ನಮಗೇನೂ ಹೊಸದಲ್ಲ. ಇಂಥಾವು ಬೇಕಾದಷ್ಟು ಬರತಾವ ನಮ್ಮ ಆಯುಷ್ಯದಾಗ. ಎಲ್ಲಾ ಅನುಭೋಗಿಸಿ ನಮಗ ರೂಢಿ ಆಗೈತಿ. ಈ ಹೊಲಾ ಇರದಿದ್ದರ ಇನ್ನೊಂದು ಹೊಲಾ ಮಾಡಿದರಾಯ್ತು. ದುಡಿಯುವವರಿಗೆ ಯಾವದಾದರೇನಂತೆ? ಆದರೂ ನಾಲ್ಕು ವರ್ಷದ ಲಾವಣಿ ಹಣಾ ಒಮ್ಮೆಲೆ ಕೊಡೋದು ಮಾತ್ರ ತ್ರಾಸದ ಕೆಲಸ. ದನಾ ಕರು, ನೇಗಿಲು, ಬಂಡಿ ಎಲ್ಲಾ ಜಪ್ತು ಮಾಡಿ ತಗೊಂಡು ಹೋಗತೀವಿ ಅಂತ ಹೇಳಿದರು ದೇಸಾಯರು. ಅದೊಂದನ್ನ ಹ್ಯಾಂಗಾದರೂ ಬಗೆಹರಿಸಿದರ ಆಯ್ತು. ನಮಗಾಗಿ ನೀನೇನೂ ಚಳವಳಿ ಬಿಡಬೇಕಾಗಿಲ್ಲಪ್ಪ. ನಾ ಮುದುಕಿಯಾಗ್ತಾ ಬಂದೆ. ಆದರೂ ಮೈಯಾಗ ಶಕ್ತಿ ಐತಿ ಇನ್ನೂ. ಈ ತೋಳು ಇರುವತನಕಾ ಯಾರಿಗೂ ಅಂಜಬೇಕಾಗಿಲ್ಲ. ಕೂಲೀ ಮಾಡಿ ದುಡಿದು ಇರ್ತೀವಿ. ಆದರ ಯಾರಿಗೂ ಅಂಜಾಕಿಲ್ಲ" ಎಂದು ಆವೇಶದಿಂದ ನುಡಿದಳು ಪಾರ್ವತಮ್ಮ.

ಕನ್ನಡನಾಡಿನ ಕೆಚ್ಚು ಕಲಿತನಗಳೇ ಮೂರ್ತಿವೆತ್ತು ಬಂದಂತಿದ್ದ ಆ ತಾಯಿಯನ್ನು ಕಂಡು ಗುಂಪಿನವರಿಗೆಲ್ಲ ಅಭಿಮಾನದಿಂದ ಮೈಯುಬ್ಬದೆ ಇರಲಿಲ್ಲ. ಆ ಬಡ ಸಂಸಾರದ ಮೇಲೆ ನಡೆಯುತ್ತಿದ್ದ ಅನ್ಯಾಯದ ಕತೆ ಕೇಳಿ ಸಂಗಣ್ಣನಿಗೆ ಮೈಯೆಲ್ಲ ಉರಿಯುತ್ತಿದ್ದಿತು. 'ತಲೆತಲಾಂತರದಿಂದ ದುಡಿಯುತ್ತ ಬಂದ ಹೊಲವನ್ನು ಒಮ್ಮೆಲೆ ಯಾವ ಕಾರಣವೂ ಇಲ್ಲದೆ ಬಿಡಿಸುವುದು ಎಂದರೇನು? ಲಿಂಗಣ್ಣನ ಅಪರಾಧವಾದರೂ ಏನು? ಅವನೇಕೆ ಹೊಲ ಬಿಡಬೇಕು?' ಎಂದುಕೊಂಡ.

"ನೀಯೇನೂ ಚಿಂತಿಮಾಡಬ್ಯಾಡವ್ವ. ಅಣ್ಣನಿಗೂ ಹೇಳಿ ಇದಕ್ಕಾ ಏನಾದರೂ ಉಪಾಯ ಕಂಡುಹಿಡೀತೀವಿ" ಎಂದು ಹೇಳಿ ಶೇಖರ ತಾಯಿಯನ್ನು ಊರಿಗೆ ಕಳುಹಿಸಿದ.

ಹಿಂದಿನ ರಾತ್ರಿ ನಿದ್ರೆಯಿರಲಿಲ್ಲವಾದ್ದರಿಂದ, ಎಲ್ಲರೂ ಪಾರ್ವತವ್ವ ತಂದಿದ್ದ ರೊಟ್ಟಿ, ಪಲ್ಲೆ ತಿಂದು ಮಲಗಿದರು. ಬಾಳಪ್ಪ ಗುಡಿಯ ಮುಂದಿನ ಕಟ್ಟೆಯ ಮೇಲೆ ಎಂದಿನಂತೆ ಕಾವಲು ಕೂತಿದ್ದ. ಶೇಖರ ವಿಶ್ವನಾಥರು ಈ ಹೊಸ ಸಂಕಟದ ಬಗ್ಗೆ ಆಲೋಚಿಸುತ್ತಿದ್ದರು.

"ಹ್ಯಾಂಗ ಮಾಡೋಣು, ಶೇಖರಣ್ಣ" ಎಂದು ವಿಶ್ವನಾಥ ಹೇಳಬೇಕೆಂದು ಇರುವಾಗ ಬಾಳಪ್ಪ ಸಿಳ್ಳು ಹಾಕಿದ.

"ಯಾರೋ ಕುದುರೆ ಹತ್ತಿಕೊಂಡು ಬರೋ ಹಾಂಗ ಕಾಣಿಸುತೈತಿ. ಎಬ್ಬಿಸು ಎಲ್ಲಾರನ್ನೂ. ಪೋಲೀಸರು ಬಂದರೋ ಏನೊ. ಬಂದೂಕು ಗಿಂದೂಕು ಎಲ್ಲಾ ತಗೊಂಡು ತಯಾರಾಗಿರ್ರಿ ಹೊರಡೂದಕ್ಕ....."

ಒಂದೆರಡು ನಿಮಿಷಗಳಲ್ಲಿಯೆ ಎಲ್ಲರೂ ಎದ್ದು ಗುಡಿಯೊಳಗೆ ಇರಿಸಿದ್ದ ಸಾಮಗ್ರಿಗಳೆಲ್ಲವನ್ನು ಹೊತ್ತುಕೊಂಡು ಅಲ್ಲಿಂದ ಹೊರಡತೊಡಗಿದರು. ದಕ್ಷಿಣ ದಿಕ್ಕಿನ ಕಾಲುದಾರಿಯಿಂದ ಕುದುರೆಯ ಖುರಪುಟದ ದನಿ ಕೇಳಿಬರುತ್ತಿತ್ತು. ಉತ್ತರದಿಕ್ಕಿನ ಕಣಿವೆಯನ್ನಿಳಿದು ಮುಂದಿನ ಗುಡ್ಡವನ್ನೇರಿ ಅವರೆಲ್ಲರೂ ತಪ್ಪಿಸಿಕೊಂಡು ಹೋಗಬೇಕಾಗಿದ್ದಿತು.

"ನೀವೆಲ್ಲರೂ ಒಂದು ಫರ್ಲಾಂಗು ದೂರದ ಮ್ಯಾಲ ಅಡಗಿಕೊಂಡು ನಿಂತಿರ್ರಿ. ಯಾರು ಬರ್‍ತಾರ ಅನ್ನೂದು ಖಾತ್ರಿಯಾದ ಮ್ಯಾಲ ನಾನು ಸೂಚನೆ ಕೊಡ್ತೇನಿ" ಎಂದು ನುಡಿದು, ಶೇಖರ ವಿಶ್ವನಾಥನೊಂದಿಗೆ ಗಿಡದ ಬುಡದಲ್ಲಿ ನಿಂತುಕೊಂಡ. ಇಬ್ಬರ ಹತ್ತಿರವೂ ತುಂಬಿದ ಪಿಸ್ತೂಲುಗಳಿದ್ದುವು.

"ಕುದುರೆಯ ಕಾಲಿನ ಸಪ್ಪಳ ಬಿಟ್ಟರೆ ಮತ್ತೇನೂ ಕೇಳಿಸುವದಿಲ್ಲಲ್ಲ. ಯಾರೋ ಒಬ್ಬರು ಬರ್‍ತಾರೋ ಏನೊ! "ಎಂದ ವಿಶ್ವನಾಥ.

ಒಂದೆರಡು ನಿಮಿಷಗಳಲ್ಲಿಯೆ ಸಮೀಪದಿಂದ ಸದ್ದು ಕೇಳಿಸತೊಡಗಿತು. ಕೊಂಚ ಅವಧಿಯಲ್ಲೇ ಕುದುರೆಯೂ ಅದರ ಮೇಲೆ ಕುಳಿತ ಸವಾರನೂ ದೃಷ್ಟಿಗೆ ಬಿದ್ದರು. ಮೇಲಕ್ಕೇರಿ ಬರುತ್ತಿದ್ದ ಸೂರ್ಯನ ಬೆಳಕಿನಲ್ಲಿ ಸವಾರನ ಮುಖ ಸ್ಪಷ್ಟವಾಗಿ ಎದ್ದು ಕಾಣಿಸುತ್ತಿದ್ದಿತು. ನೋಡುತ್ತ ನಿಂತಿದ್ದವರೆಲ್ಲರೂ ಒಮ್ಮೆಲೆ ಗಿಡಗಳ ಮರೆಗೆ ಹೋಗಿ ಅವಿತುಕೊಂಡರು. "ದೇಸಾಯರು!" ಎಂದ ಶೇಖರ.

"ನಾವಿಲ್ಲಿ ಇರೂದು ಇವರಿಗೆ ಹ್ಯಾಂಗಾದರೂ ತಿಳೀತೋ! ಸಿ.ಐ.ಡಿ. ಗಳ ಕೆಲಸಾನೇ ಇರಬಹುದು ಇವೆಲ್ಲಾ. ಅವರಿಗೆ ಈ ಜಾಗದ ಪತ್ತೆ

ಗೊತ್ತಾಗಿದ್ದೀತು..."

"ಈಗ ಇಲ್ಲಿ ನಿಲ್ಲೂದು ನೆಟ್ಟಗಲ್ಲ. ನಡಿ. ಲಗೂ ನಡಿ. ಪಾರಾಗಿ ಹೋಗೋಣ. ಹಿಂದೆ ಪೋಲೀಸರಿದ್ದರೂ ಇರಬಹುದು" ಎಂದು ಹೇಳಿ ವಿಶ್ವನಾಥ ಅಲ್ಲಿಂದ ಹೊರಟು ಕಣಿವೆಯಲ್ಲಿ ಇಳಿಯತೊಡಗಿದ. "ನೀನಿಲ್ಲೇ ಇರು ಬಾಳಪ್ಪ. ಅವರ್ಯಾತಕ್ಕ ಬಂದಿದ್ದರು ಅನ್ನೂದನ್ನ ತಿಳಕೋ. ನಾವು ಆ ಗುಡ್ಡದ ಕೆಳಗೆ ವಸ್ತಿ ಮಾಡತೀವಿ. ಅಲ್ಲಿಗೆ ಸುದ್ದಿ ಕಳಿಸು" ಎಂದು ಹೇಳಿ ಶೇಖರನೂ ಅಲ್ಲಿಂದ ಹೊರಟು ನಡೆದ.

ಬಾಳಪ್ಪ ಚಿಲುಮೆಯನ್ನು ತೆಗೆದು ತಂಬಾಕು ಹಾಕಿ ಹೊಗೆ ಎಳೆಯತೊಡಗಿದ. ನಾಲ್ಕೈದು ನಿಮಿಷಗಳಲ್ಲಿ ದೇಸಾಯರು ಅಲ್ಲಿಗೆ ಬಂದು ಕುದುರೆಯಿಂದಿಳಿದರು. ಒಂದು ಕ್ಷಣ ಹಾಗೇ ನಿಂತುಕೊಂಡು ಗುಡಿಯನ್ನೂ, ಗಿಡದ ಬುಡದಲ್ಲಿ ಕುಳಿತಿದ್ದ ಬಾಳಪ್ಪನನ್ನೂ ನಿಟ್ಟಿಸಿ ನೋಡಿದರು. ಅವನ ಗುರುತೂ ತಿಳಿದಿರಬೇಕು. "ನೀನ್ಯಾಕಪಾ ಇಲ್ಲಿ, ಮುದುಕಾ?" ಎಂದರು.



"ಏನ್ ಹೇಳಲಿ ದೇಸಾಯ್ರ, ಮಗ ಸತ್ತಾಗಿನಿಂದ ನನಗ ಪ್ರಪಂಚ ಎಲ್ಲ ಬೇಸರಾಗ್ಯೆತಿ. ಅವನೊಬ್ಬನ್ನ ಬಿಟ್ಟರೆ ಬ್ಯಾರೆ ಯಾರಿದ್ದರೂ ನನಗ? ವಯಸ್ಸಿಗೆ ಬಂದ ಮಗನು ಸತ್ತುಹೋದ ಮ್ಯಾಲ ಆ ಊರಾಗ ಇದ್ದು

ಜೀವ ಗಮಿಸೀತೇನ್ರಿ? ಅದಕ್ಕ ಇಲ್ಲಿಗೆ ಬಂದುಬಿಟ್ಟಿದ್ದೀನಿ. ಈ ದೇವರಿಗೂ ನೀರು ಹಾಕುವವರ್‍ಯಾರೂ ಇರಲಿಲ್ಲ. ಪೂಜೆ ಮಾಡಿಕೋಂತ ಬಾಬಾನ ಹಾಂಗ ಇದ್ದೀನ್ರಿ. ಇಲ್ಲಿ ಮ್ಯಾಲ ಗವಿಯೊಳಗ ಸಾಧುಗಳೂ ಇದ್ದಾರ. ಅವರ ಸೇವಾನೂ ಮಾಡಲಿಕ್ಕಾಯ್ತು" ಎಂದ.

"ನೀನೂ ಸಾಧು ಆಗಾಂವ ಅನ್ನು-" ಎನ್ನುತ್ತಾ ದೇಸಾಯರು ಕುದುರೆಯನ್ನು ಗಿಡಕ್ಕೆ ಕಟ್ಟಿ ಗುಡಿಯನ್ನೆಲ್ಲ ಸುತ್ತಿ ನೋಡಿದರು. ಯಾರ ಸುಳಿವೂ ಇರಲಿಲ್ಲ. ಆದರೆ ಪಡಸಾಲೆಯಲ್ಲಿ ಅಲ್ಲಲ್ಲಿ ಬಿದ್ದುಕೊಂಡಿದ್ದ ರೊಟ್ಟಿಯ ಚಿಕ್ಕ ತುಂಡುಗಳನ್ನೂ, ಗುಂಪಿನವರು ಸೇದಿ ಬಿಸುಟಿದ್ದ ಬೀಡಿಯ ತುಣುಕುಗಳನ್ನೂ ಕಂಡಾಗ ಅಲ್ಲಿ ಜನ ವಾಸಿಸಿದ್ದುದು ಸ್ಪಷ್ಟವಾದಂತಾಯಿತು.

"ಮುಂಜಾನೆ ಇಲ್ಲಿದ್ದವರೆಲ್ಲ ಎಲ್ಲಿಗೆ ಹೋದರೋ?" ಎಂದರು ದೇಸಾಯರು, ಕೊಂಚ ದರ್ಪದಿಂದ.

"ಯಾರ್‍ರೀ ಅಪಾ ಮುಂಜಾನೆ ಇದ್ದವರು?" ಎಂದು ಏನನ್ನೂ ಅರಿಯದವನಂತೆ ನುಡಿದ ಬಾಳಪ್ಪ.

"ಸುಳ್ಳು ಹೇಳಬ್ಯಾಡೋ ನನ್ನ ಮುಂದೆ. ನನಗೆಲ್ಲಾ ಗೊತ್ತದ. ಆ ಚಳವಳೀ ಜನ ಎಲ್ಲಾ ಎಲ್ಲಿ ಹೋಯ್ತು?" ಎಂದು ಗದರಿಸಿ ಕೇಳಿದರು, ದೇಸಾಯರು.

"ಯಾವ ಚಳವಳಿಯವರೋ ನನಗೊಂದೂ ಗೊತ್ತಿಲ್ಲವಪ್ಪಾ. ನನಗಂತೂ ನನ್ನ ಮಗನ್ನ ಕಳಕೊಂಡಾಗಿನಿಂದ ಜೀವಾನೇ ಬ್ಯಾಡಾಗೈತಿ."

"ಜೀವ ಬ್ಯಾಡಾಗೈತ್ಯೋ, ಜೇಲು ಬೇಕಾಗೈತ್ಯೋ ಮುದುಕಾ? ಸುಮ್ಮನ ಚಲೋ ಮಾತಿನಿಂದ ಹೇಳಿದರ ನೆಟ್ಟಗಾಯ್ತು. ಇಲ್ಲದಿದ್ದರ ಒಣಾ ತ್ರಾಸ ಆಗುತೈತಿ ನೋಡು ನಿನಗ, ಈ ಮುಪ್ಪಿನ ಕಾಲದಾಗ."

"ನನಗಂತೂ ಜೀವದ ಮ್ಯಾಲ ಆಸೇನs ಉಳಿದಿಲ್ಲ ಧಣೇರs. ಈ ಎಲುವು ಇವತ್ತ ಮಣ್ಣು ಕೂಡಿದರೂ ನನಗೇನೂ ಅನ್ನಿಸೂದಿಲ್ಲ. ನಿಮ್ಮ ಮುಂದ ಯಾಕ ಸುಳ್ಳು ಹೇಳಲಿ ನಾನು? ಯಾರ್‍ಯಾರೋ ಬರ್‍ತಾರ. ಮಲಗಿಕೋತಾರ. ಬೆಳಗಾಗುತ್ತಲೂ ಎದ್ದು ಹೊರಟುಹೋಗ್ತಾರ. ನನ್ನಷ್ಟಕ್ಕೆ ನಾ ಒಂದು ಕಡೆ ಬಿದ್ದುಕೊಂತೀನಿ. ಅವರ ಪುರಾಣ ಎಲ್ಲಾ ತಗೊಂಡು ನಾ ಏನ್ ಮಾಡ್ಲಿ ಧಣೇರs !"

ದೇಸಾಯಿಯವರಿಗೆ ಕೋಪ ಉಕ್ಕೇರಿದಂತಾಯಿತು. "ಸಾಕು ಮಾಡೋ ಈ ನಾಟಕಾ. ನೀನೂ ಈ ಚಳವಳಿಯ ಪುಂಡರ ಸಂಗಡ

ಇದ್ದೀ ಅಂತ ಆ ಕುಲಕರ್ಣಿ ಹೇಳ್ತಿದ್ದ. ನನಗೆಲ್ಲಾ ಗೊತ್ತಾಗಿದೆ. ನೀನು ಉಳಕೊಬೇಕಾದರ ನಾ ಕೇಳೂದಕ್ಕೆಲ್ಲಾ ನೆಟ್ಟಗ ಉತ್ತರ ಕೊಡು. ನಮ್ಮ ವಿಶ್ವನಾಥ ಎಲ್ಲಿ ಇದ್ದಾನ? ರಾತ್ರಿ ಇಲ್ಲೇ ಇದ್ದನೋ ಇಲ್ಲೋ?"

"ನೀವು ಹೇಳೋದು ನನಗ ಏನೂ ತಿಳೀಲಿಲ್ಲರೀ ಧಣೇರs. ಆ ಕುಲಕರ್ಣಿ ಯಾವಾಗಲೂ ಹಾಂಗs. ಏನಾರ ಚಾಡಿ ಹೇಳಿ ಯಾರನ್ನಾರೆ ಹಾಳು ಮಾಡೋ ಮನುಷ್ಯಾ ಅವ. ಅವ ಹೇಳಿದ ಅಂತ ನೀವು ಎಲ್ಲಾ ನಂಬಬ್ಯಾಡ್ರಿ ಧಣೇರs. ನನಗ ಗೊತ್ತಿದ್ದರ ಹೇಳತಿರಲಿಲ್ಲೇನ್ರಿ ನಿಮಗ?" ಎಂದ.

"ಇಲ್ಲಿ ನೋಡು ಮುದುಕಾ, ಸುಮ್ಮನs ನನ್ನ ಸಿಟ್ಟಿಗೆಬ್ಬಿಸಬ್ಯಾಡ. ವಿಶ್ವನಾಥ ಎಲ್ಲಿದಾನ ಅನ್ನೂದಷ್ಟ ಹೇಳಿಬಿಡು, ಸಾಕು. ನನಗೆ ಬ್ಯಾರೆ ಏನೂ ಬೇಕಾಗಿಲ್ಲ. ಅವನ್ನ ಮನೆಗೆ ಕರಕೊಂಡು ಹೋದರ ಸಾಕು."

"ನೀವು ಹೇಳೂದು ತಿಳೀತ್ರಿ ಧಣೇರs. ಆದರ ನನಗ ಗೊತ್ತಿರದಿದ್ದರ ಏನು ಹೇಳ್ಲಿ ನಿಮಗ? ಇನ್ನು ಮ್ಯಾಲ ಏನಾದರೂ ಅವರು ಇಲ್ಲಿಗೆ ಬಂದರ ತಿಳಿಸತೀನ್ರಿ. ನೀವು ಬಂದಿದ್ದಿರಿ ಅಂತ ಅವರಿಗೂ ಹೇಳತೀನ್ರಿ."

"ಒಳ್ಳೇ ಮಾತಿಗೆ ನೀ ಬಾಯಿ ಬಿಡೂ ಹಾಂಗ ಕಾಣೂದಿಲ್ಲ. ಕೋರಡೆಯಿಂದ ಏಟು ಬಿದ್ದಾಗ ಹೇಳೂ ಮಂದಿ ನೀವು. ಆಗಲಿ" ಎಂದು ನುಡಿದು ದೇಸಾಯರು ಗಿಡದ ಹತ್ತಿರ ಬಂದು ಚಪ್ಪಾಳೆ ತಟ್ಟಿದರು. ಒಡನೆಯೆ ಎಲ್ಲಿಂದಲೋ ಹತ್ತು ಹದಿನೈದು ಜನ ಸಶಸ್ತ್ರ ಪೋಲೀಸರೂ ಮತ್ತು ಒಬ್ಬ ಫೌಜುದಾರನೂ ಎದುರಿಗೆ ಬಂದರು.

"ಎಲ್ಲಾರೂ ಪಾರಾಗಿ ಹೋಗಿದಾರ. ಇವ ಏನೂ ಹೇಳಲೊಲ್ಲ. ಹಿಡೀರಿ ಇವನ್ನ. ಇನ್ನೇನು ಮಾಡೋದು?" ಎಂದರು ದೇಸಾಯರು.

ಅದುವರೆಗೆ ವಿನಯದಿಂದ ಮಾತಾಡುತ್ತಿದ್ದ ಮುದುಕ, ಪೋಲೀಸರನ್ನು ಕಂಡೊಡನೆ ದಿಗ್ಗನೆ ಎದ್ದು ನಿಂತು ದರ್ಪದ ದನಿಯಲ್ಲಿ ನುಡಿದ: "ನನ್ನ ಏನಂತ ಹಿಡೀತೀರಿ? ನಾ ಏನ ಮಾಡಿದ್ದೀನಿ? ಏನು ಹುಡುಗಾಟ ಆಗೈತೇನು ನಿಮಗೆ?" "ಗುಂಪಿಗೆಲ್ಲಾ ನೀನೇ ಪುಢಾರಿ ಆಗಿ ಮತ್ತ ಮ್ಯಾಲ ಸೋಗು ಮಾಡತೀ ಏನು? ನಮಗೆಲ್ಲಾ ಗೊತ್ತೈತಿ. ಬಾ" ಎಂದು ನುಡಿದು ಫೌಜುದಾರರು ಅವನನ್ನು ಬಂಧಿಸಲು ಪೋಲೀಸರಿಗೆ ಆಜ್ಞಾಪಿಸಿದರು. "ಖಬರ್‌ದಾರ್, ನನ್ನ ಮೈಗೆ ಕೈಹಚ್ಚಬೇಡಿ"ಎಂದು ಮುದುಕ ಪ್ರತಿಭಟಿಸುತ್ತಿದ್ದ ಹಾಗೇ ಮೂವರು ಪೋಲೀಸರು ಬಂದು ಅವನನ್ನು ಬಿಗಿಯಾಗಿ ಹಿಡಿದು-

ಕೊಂಡರು. ಕೈಗೆ ಬೇಡಿ ತೊಡಿಸಿದ್ದೂ ಆಯಿತು.

ಆ ದಿನವೆಲ್ಲ ಮುದುಕನಿಗೆ ಏಟುಗಳ ಮೇಲೆ ಏಟು ಬಿದ್ದವು. ಯಾವುದಕ್ಕೂ ಆತ ಸೊಪ್ಪು ಹಾಕಲಿಲ್ಲ; ಅಂಥ ಇಳಿ ವಯಸ್ಸಿನಲ್ಲೂ ಧೀರನಂತೆ ಎಲ್ಲವನ್ನೂ ಸಹಿಸಿದ. ಗುಂಪಿನವರ ಸುದ್ದಿ ತಿಳಿಸಿದರೆ ಬಿಟ್ಟುಬಿಡಲಾಗುವುದೆಂದು ಆಸೆ ತೋರಿಸಲಾಯಿತು. ಬಹುಮಾನ ಕೊಡುವುದಾಗಿಯೂ ಹೇಳಲಾಯಿತು. ಹೊಡೆತಗಳನ್ನೆಲ್ಲ ಮೌನವಾಗಿ ಸಹಿಸಿಕೊಂಡ ಮುದುಕನಿಗೆ ಈ ಲೋಭದ ಹೊಡೆತವನ್ನು ಮಾತ್ರ ಸಹಿಸಲಾಗಲಿಲ್ಲ. ಕೆರಳಿದ ಹುಲಿಯಂತೆ ಕನಲಿ ಒಂದೇ ಮಾತಿನಲ್ಲಿ ಉತ್ತರವಿತ್ತ: "ಕಿತ್ತೂರ ಚೆನ್ನವ್ವನ ನಾಡಿನಾಗ ಹುಟ್ಟಿ ಬೆಳದೀನಿ ನಾನು. ಇಂಥ ಹೇಸಿ ಕೆಲಸ ನಮ್ಮ ಮಂದಿ ಯಾರೂ ಮಾಡಾಕಿಲ್ಲ. ನಾಲಿಗೆ ಬಿಗಿಹಿಡಿದು ಮಾತಾಡ್ರಿ."

ಕೊಳ್ಳದಿಂದ ಹೊರಟ ಗುಂಪಿನವರು ಗುಡ್ಡವನ್ನೇರಿ ಇಳಿದು ಅಡ್ಡಹಾದಿಯಲ್ಲಿ ಎಂಟು-ಹತ್ತು ಮೈಲು ನಡೆದು ಆ ಹಳ್ಳಿಗೆ ಬಂದು ಮುಟ್ಟಿದಾಗ ಮಧ್ಯಾಹ್ನ ಕಳೆದುಹೋಗಿದ್ದಿತು.

ಒಂದೇ ಸಮನೆ ಹತ್ತು-ಹನ್ನೆರಡು ಮೈಲು ನಡೆದುಬಂದಿದ್ದರಿಂದಲೂ, ಹಿಂದಿನ ರಾತ್ರಿ ನಿದ್ರೆಯಿಲ್ಲದ್ದರಿಂದಲೂ ಬೆಳಗಿನ ರೊಟ್ಟಿಯನ್ನುಳಿದು ಬೇರೇನೂ ಹೊಟ್ಟೆಗೆ ಬಿದ್ದಿರಲಿಲ್ಲವಾದ್ದರಿಂದಲೂ ಎಲ್ಲರಿಗೂ ತುಂಬಾ ದಣಿವೂ ಹಸಿವೂ ಆಗಿತ್ತು. ಎಲ್ಲಾದರೂ ಹೋಗಿ ಊಟ ಮಾಡಿ ದೇಹಗಳನ್ನೊರಗಿಸಬೇಕೆಂಬುದೇ ಅವರೆಲ್ಲರ ಬಯಕೆಯಾಗಿತ್ತು. ಹಗಲು ಹೊತ್ತಿನಲ್ಲಿ ಹೋಗಿ ಇರಲು ಸುರಕ್ಷಿತ ಸ್ಥಳವಾವುದೆಂಬುದನ್ನು ಕುರಿತು ಯೋಚಿಸುತ್ತಿದ್ದರು.

"ಸ್ವಾಮಿಗಳ ಮಠಕ್ಕೆ ಹೋಗಬಹುದಲ್ಲ? ಊಟಾನೂ ಆಗ್ತೈತಿ. ಗುಪ್ತವಾಗಿ ಇರೋದಕ್ಕೂ ಆಗ್ತೈತಿ " ಎಂದರು ಮಾಸ್ತರರು.

ಮಠದ ಕಟ್ಟಡ ಅಷ್ಟು ಭವ್ಯವಾಗಿಲ್ಲದಿದ್ದರೂ ಸಾಕಷ್ಟು ವಿಶಾಲವಾಗಿದ್ದಿತು. ದೊಡ್ಡ ಪಡಸಾಲೆ, ಅದರ ಮೇಲೆ ಹಳೆಯ ಕಾಲದ ಕಟ್ಟಡ. ಎದುರಿಗೆ ಬಸವಣ್ಣನ ಗುಡಿ. ಒಂದೆರಡು ಕೊಠಡಿಗಳೂ ಇದ್ದುವು. ಪಡಸಾಲೆಯ ಆಚೆಗೆ ಪೂಜಾಗೃಹ. ಅದರ ಕೆಳಗಡೆ ಹಿಂದಿನ ಸ್ವಾಮಿಗಳ ಸಮಾಧಿಯನ್ನೊಳಗೊಂಡ ನೆಲಮನೆಯೂ ಇದ್ದಿತು. ಪೂಜಾಗೃಹದಿಂದ ಸಮಾಧಿಗೆ ಹೋಗಲು ಮೆಟ್ಟಲುಗಳಿದ್ದುವು. ಪಡಸಾಲೆಯಲ್ಲಿ ಒಂದು

ವ್ಯಾಸಪೀಠವನ್ನು ಹಾಕಿ ಅದರ ಮೇಲೆ ಸ್ವಾಮಿಗಳಿಗೆ ಆಸನವನ್ನು ಏರ್ಪಡಿಸಲಾಗಿದ್ದಿತು. ಅಲ್ಲಿ ಕುಳಿತುಕೊಂಡು ಸ್ವಾಮಿಗಳು ಭಕ್ತಾದಿಗಳಿಗೆ ದರ್ಶನವೀಯುವರು. ಪ್ರವಚನ ನಡೆಸುವರು. ಯಾರೂ ಇಲ್ಲದಿದ್ದಾಗ ಅಲ್ಲಿಯೆ ವ್ಯಾಸಂಗದಲ್ಲಿ ತಲ್ಲೀನರಾಗಿರುವರು.

ಸ್ವಾಮೀಜಿಗೆ ನಲವತ್ತು ನಲವತ್ತೆರಡು ವರ್ಷಗಳ ವಯಸ್ಸಾಗಿರಬಹುದು. ಎತ್ತರವಾದ ಗೌರವರ್ಣದ ಶರೀರ. ಮೇಲೆ ಕಾವಿಯ ಬಣ್ಣದ ಖದ್ದರಿನ ಕಪನಿಯನ್ನು ಧರಿಸಿ, ಕಾಲುಗಳಲ್ಲಿ ಹಾವುಗೆಗಳನ್ನು ಮೆಟ್ಟಿದ್ದರು. ಕೊರಳಲ್ಲಿ ಒಂದು ರುದ್ರಾಕ್ಷಿ ಮಾಲೆ. ಹಣೆಯ ಮೇಲೆ ಎದ್ದು ಕಾಣಿಸುವ ವಿಭೂತಿ ಪಟ್ಟೆ. ತೀರ ಸಾದಾ ವೇಷ ಅವರದು.

ಬಂದವರ ಅಡಿಗಳ ಸದ್ದು ಕಿವಿಗೆ ಬೀಳುತ್ತಲೇ ಸ್ವಾಮೀಜಿ ಹೊರಳಿ ನೋಡಿದರು. ಅವರ ಮುಖದ ಮೇಲೆ ಆನಂದ ಬೆರೆತ ಆಶ್ಚರ್ಯಭಾವ ಮಿನುಗುವುದು ಕಾಣಿಸಿತು. ವಿಶ್ವನಾಥನೊಬ್ಬನನ್ನುಳಿದು ಅವರಲ್ಲಿ ಯಾರೂ ಸ್ವಾಮೀಜಿಗೆ ಅಪರಿಚಿತರಲ್ಲ. ಎಲ್ಲರೂ ಭಕ್ತರೇ. ನಗುನಗುತ್ತ ಸ್ವಾಮೀಜಿ ಎಲ್ಲರನ್ನೂ ಸ್ವಾಗತಿಸಿದರು.

ಬಂದವರೆಲ್ಲ ಅಡ್ಡಬಿದ್ದು ವಂದಿಸಿದ ತರುವಾಯ ಸ್ವಾಮೀಜಿ ಕೇಳಿದರು:

"ನೀವು ಮಾಡ್ತಾ ಇರುವ ಕೆಲಸದ ಸುದ್ದಿ ಎಲ್ಲಾ ನಮಗೆ ತಿಳಿದಿದೆ. ಬಹಳ ಸಂತೋಷ. ಬಹಳ ಸಂತೋಷ. ಈಗಲೂ ಎಲ್ಲೋ ಕೆಲಸಕ್ಕಾಗಿಯೇ ಹೊರಟ ಹಾಂಗೈತಲ್ಲ?"

"ಈ ದಿನ ಏನೂ ಇಲ್ಲ ಸ್ವಾಮೀಜಿ. ನಿನ್ನೆ ರಾತ್ರಿ ಒಂದು ಕೆಲಸ ಮುಗಿಸಿದೆವು. ಅದರ ಫಲವೇ ಈ ಬಂದೂಕುಗಳು. ಮೊದಲು ಇವನ್ನೆಲ್ಲ ಎಲ್ಲಾದ್ರೂ ಮುಚ್ಚಿಡಬೇಕು. ಆಮೇಲೆ ನಾವೂ ತಮ್ಮ ಆಶ್ರಯದೊಳಗೇ ಸ್ವಲ್ಪ ದಿನಾ ಇರಬೇಕಾಗೈತಿ. ಬೇರೆ ಜಾಗಾ ನೋಡುವ ತನಕ. ಆದರೂ..." ಎಂದ ಶೇಖರ.

"ನಿಮಗೆ ಮನಸ್ಸಿಗೆ ಬಂದಷ್ಟು ದಿನ ಇರ್ರಿ ಇಲ್ಲೇ. ಹ್ಯಾಂಗೂ ಕೆಳಗೆ ಸಮಾಧಿ ಐತಿ. ಈ ಸಾಮಾನೆಲ್ಲಾ ಅಲ್ಲಿಡಬಹುದು. ನೀವೂ ಅಲ್ಲಿ ಮಲಗಿಕೋಬಹುದು. ಏನೂ ಚಿಂತೀ ಮಾಡಬ್ಯಾಡ್ರಿ" ಎಂದರು ಸ್ವಾಮೀಜಿ.

"ಸಮಾಧಿಯ ಹತ್ತಿರ ನಾವು ಹೋದರ ಅದು ಅಪವಿತ್ರ ಆಗುವದಿಲ್ಲೇನು ಸ್ವಾಮೀಜಿ?" ಎಂದು ಮಾಸ್ತರರು ಸಂದೇಹ ವ್ಯಕ್ತಪಡಿಸಿದರು.

ಸ್ವಾಮೀಜಿ ನಕ್ಕು ನುಡಿದರು: "ಅಪವಿತ್ರ? ಹುಚ್ಚಾ. ಆ ಸಮಾಧಿ

ಯಾರದು ಅಂತ ತಿಳಿದಿದ್ದಿ? ಪೂರಾ ಸ್ವಾತಂತ್ರ್ಯ ಪ್ರಿಯರಾಗಿದ್ದ ನಮ್ಮ ಬಹಳ ಹಿಂದಿನ ಗುರುಗಳದ್ದು. ಕಿತ್ತೂರ ಚೆನ್ನಮ್ಮ ರಾಣಿ, ರಾಜ ಮಲ್ಲಸರ್ಜ ಇಬ್ಬರೂ ನಮ್ಮ ಗುರುಗಳ ಭಕ್ತರಾಗಿದ್ದರು. ಅವರಿಬ್ಬರೂ ಮಠಕ್ಕೂ ಬಂದು ಹೋಗಿದಾರ. ಅಂಥ ಸ್ವಾತಂತ್ರ್ಯವೀರರ ಗುರುಗಳಾಗಿದ್ದವರ ಸಮಾಧಿಯ ಹತ್ತಿರ ನಿಮ್ಮಂಥ ಸ್ವಾತಂತ್ರ್ಯ ಸೈನಿಕರು ಮಲಗಿದರೆ ಅವರ ಆತ್ಮಕ್ಕೆಷ್ಟು ಸಂತೋಷವಾದೀತು! ನೀವು ಏನೂ ವಿಚಾರ ಮಾಡದೆ ಇಲ್ಲಿ ಆರಾಮಾಗಿ ಇರ್ರಿ" ಎಂದು ಎಲ್ಲರನ್ನೂ ಊಟಕ್ಕೆಬ್ಬಿಸಿದರು.

ಹತ್ತು ಮೈಲುಗಳ ಪ್ರಯಾಣದ ತರುವಾಯ ಮಠದ ಪ್ರಸಾದ-ರೊಟ್ಟಿ, ಅವರೆಕಾಳಿನ ಪಲ್ಯ, ಕಡಲೆಕಾಯಿ ಚಟ್ನಿ, ಬೇಳೆ ತುಂಬಾ ರುಚಿಕರವಾಗಿತ್ತು. ಊಟ .ಮಾಡುತ್ತಿದ್ದವರನ್ನೆಲ್ಲ ಸಮಾಧಾನದಿಂದ ನಿರುಕಿಸುತ್ತಿದ್ದರು ಸ್ವಾಮೀಜಿ.

"ಬಾಳಪ್ಪನ್ನ ಅಲ್ಲೇ ಬಿಟ್ಟು ಬಂದೆವು. ಏನಾಯ್ತೋ ಏನೊ..." ಎಂದು ನುಡಿದ ಶೇಖರ.

"ಬಿಡಬಾರದಾಗಿತ್ತೋ ಏನೊ. ದೇಸಾಯರೊಬ್ಬರೇ ಬಂದಿರಲಾರರು ಅಂತ ನನಗೂ ಅನಿಸ್ತದ. ಅವರ ಹಿಂದೆ ಪೋಲೀಸ್‌ಪಾರ್ಟಿ ಬಂದಿರಬೇಕು. ಬಾಳಪ್ಪನ್ನ ಹಿಡಿದು ಒಯ್ದಿದ್ದರೂ ಒಯ್ದಿರಬಹುದು ಅವರು..." ಎಂದರು ಸ್ವಾಮೀಜಿ.

"ಅಂಥ ಮುದುಕನ್ನ ಹಿಡಿದು ಏನ್ಮಾಡ್ತಾರ ಸ್ವಾಮೀ ಪೋಲೀಸರು?"

"ಮುದುಕ ಇರಲಿ, ಮುದುಕಿ ಇರಲಿ. ನಿಮ್ಮ ಗುಂಪಿನ ಸುದ್ದಿಯನ್ನ ತಿಳಿದುಕೊಳ್ಳೂದಕ್ಕ ಯಾರು ಸಿಕ್ಕರೂ ಹಿಡಿಯುವವರೇ. ನಮ್ಮ ಮಠದಾಗ ನೀವಿರುವುದು ಗೊತ್ತಾಯಿತಂದರ ಇಲ್ಲಿಗೆ ಬಂದು ನಮ್ಮನ್ನ ಹಿಡಿಯಲಿಕ್ಕೂ ಹಿಂದೆ ಮುಂದೆ ನೋಡುವವರಲ್ಲ ಅವರು" ಎಂದು ನುಡಿದು ಸ್ವಾಮೀಜಿ ನಕ್ಕರು.

"ನಮ್ಮಿಂದ ನಿಮ್ಮ ಮ್ಯಾಲ ಏನಾದರೂ ಬಂದೀತು ಸ್ವಾಮಿ!" ಎಂದು ಶೇಖರ ಸಂಕೋಚದಿಂದ ನುಡಿದ.

ಪುಸ್ತಕ ಹುಡುಕುತ್ತಿದ್ದ ಸ್ವಾಮೀಜಿ ಅವನ ಕಡೆಗೆ ತಿರುಗಿ ನಗುತ್ತ ನುಡಿದರು: "ಬಂದರೂ ಒಳ್ಳೆಯದಾದೀತು ಬಿಡು. ನಮಗೂ ಒಂದು ಸಲ ಹಿಂಡಲಗಿ ಜೇಲು ನೋಡುವ ಆಸೆ ಆಗಿದೆ."

ಆ ಮಾತಿನಿಂದಾಗಿ ಗುಂಪಿನವರೆಲ್ಲ ನಗತೊಡಗಿದರು.

7

ತಟ್ಟೆಯನ್ನು ತುದಿಯುವರೆಗೆ ತಂದು, ಅದರೊಳಗಿನ ನುಚ್ಚು ಮಜ್ಜಿಗೆಯನ್ನು ಕುಡಿಯಲು ಮನಸ್ಸಾಗದೆ ಹಾಗೇ ಕೆಳಗಿರಿಸಿದ ಲಿಂಗಣ್ಣ. ಮಧ್ಯಾಹ್ನದ ಹೊತ್ತು. ಬೆಳಗಿನಿಂದ ಹೊಲದಲ್ಲಿ ಕೆಲಸಮಾಡಿ ಆಗ ತಾನೆ ಮನೆಗೆ ಬಂದಿದ್ದ. ವಿಪರೀತ ಹಸಿವೆಯಾಗಿದ್ದರೂ ಅವನಿಗೆ ನುಚ್ಚು ಉಣ್ಣುವ ಮನಸ್ಸಾಗಲಿಲ್ಲ.

ಎದುರಿಗಿನ ಕೊಟ್ಟಿಗೆಯಲ್ಲಿ ದನಗಳು ಮೆಲಕುಹಾಕುತ್ತ ಮಲಗಿದ್ದವು. ಎರಡು ಎಮ್ಮೆ, ಒಂದು ಹಸು, ನಾಲ್ಕು ಕರುಗಳು, ಒಂದು ಹೋರಿ. ಅವುಗಳ ಕಡೆಗೆ ದೃಷ್ಟಿ ಹೋದಾಗಲೆಲ್ಲ ಅಭಿಮಾನ ಆನಂದಗಳಿಂದ ಉಕ್ಕೇರುತ್ತಿದ್ದ ಲಿಂಗಣ್ಣನ ಹೃದಯ ಇಂದು ಕಳವಳದಿಂದ ಭಾರವಾಗತೊಡಗಿತು. ಹೊಲದಲ್ಲಿ ಕಟ್ಟಿದ್ದ ಎರಡು ಎತ್ತುಗಳೂ ಅವನ ಬಗೆಗಣ್ಣಿನ ಎದುರಿಗೆ ಬಂದು ನಿಂತಂತಾಯಿತು. ಎಷ್ಟು ಪ್ರೀತಿಯಿಂದ, ಎಷ್ಟು ಆತ್ಮೀಯತೆಯಿಂದ ಅವನು ಅವುಗಳನ್ನೆಲ್ಲ ಸಾಕಿ ಬೆಳೆಸಿದ್ದ! ಹಸುರು ಹುಲ್ಲು, ಗರಿಕೆ, ಜೋಳದ ದಂಟು, ಹುರುಳಿ- ಯಾವುದಕ್ಕೂ ಕಡಿಮೆ ಮಾಡಿರಲಿಲ್ಲ. ತನ್ನ ಮಕ್ಕಳ ಮೇಲೆ ಎಂಥ ಪ್ರೀತಿ ಇತ್ತೋ ಅದಕ್ಕೂ ಹೆಚ್ಚಿನ ಪ್ರೀತಿ ಅವುಗಳ ಮೇಲಿತ್ತು. ಅವನ್ನು ಬಿಟ್ಟರೆ ಬೇರಾವ ಆಸ್ತಿಯೂ ಅವನಿಗಿರಲಿಲ್ಲ. ಸ್ವಂತ ಹೊಲವಂತೂ ಇರಲೇ ಇಲ್ಲ. ಇದ್ದುದು ಅದೊಂದು ಮನೆ. ಆ ದನಕರುಗಳು, ಕೃಷಿಯ ಸಾಮಗ್ರಿಗಳು-ರಂಟೆ, ನೇಗಿಲು, ಬಂಡಿ-ಅಷ್ಟೆ.

ಅರವತ್ತು ಎಪ್ಪತ್ತು ವರ್ಷಗಳಿಂದ ತಾವು ಹರಗಿ ಬಿತ್ತಿದ ಆ ಹೊಲ! ಅದಕ್ಕಾಗಿ ತನ್ನ ಅಜ್ಜ, ತಂದೆ, ತಾಯಿ, ತಾನು, ತನ್ನ ಹೆಂಡರು ಮಕ್ಕಳು ಎಷ್ಟು ಬೆವರು ಸುರಿಸಲಿಲ್ಲ! ಮಳೆಯ ನೀರಿಗೆ ಸರಿಸಮನಾಗಿ ತಮ್ಮ ಬೆವರಿನ ನೀರು ಇಳಿದಿದ್ದರೂ ಇದ್ದೀತು. ಬಂಜರು ಭೂಮಿಯಾಗಿ ಬಿದ್ದುದನ್ನು ತಮ್ಮ ಪರಿಶ್ರಮದಿಂದ ಫಲವತ್ತಾದ ಹೊಲವಾಗಿ ಮಾರ್ಪಡಿಸಿಯಾಗಿದ್ದಿತು. ದೇವರ ದಯೆಯಿಂದ ಕಾಲಕ್ಕೆ ಸರಿಯಾಗಿ ಮಳೆ ಬಂದರೆ ಚಿನ್ನದಂಥ ಬೆಳೆ ಬರುತ್ತಿತ್ತು. ಮೂರು ನಾಲ್ಕು ವರ್ಷಗಳಿಂದ ಮಳೆ ಬರಲಿಲ್ಲ. ಬೆಳೆ ಬರಲಿಲ್ಲ. ಮನೆಯವರೆಲ್ಲ ಬೆವರಿಳಿಸಿ ದುಡಿದದ್ದೂ ವ್ಯರ್ಥವಾಗಿತ್ತು. ಬಂದ ಕಾಳು ಹೊಟ್ಟೆಗೇ ಸಾಲುವಂತಿರಲಿಲ್ಲ. ಇನ್ನು ಲಾವಣಿ ಹಣ ಕೊಡುವುದು ಹೇಗೆ ಸಾಧ್ಯವಾದೀತು? ಕೊಡುವ ಬಾಕಿ ಉಳಿಯಿತು. ಬೆಳೆಯಿತು. ದೇಸಾಯರು ಒಳ್ಳೆಯವರು. ಕಷ್ಟ ಕಾಲದಲ್ಲಿ

ಕೇಳಲಿಕ್ಕಿಲ್ಲವೆಂಬ ಭರವಸೆಯ ಮೇಲೆ ಕಾಲ ತಳ್ಳಿದ್ದಾಯಿತು. ಈಗ ಒಮ್ಮೆಲೆ ಎಲ್ಲ ಬಾಕಿಯನ್ನೂ ತೀರಿಸಬೇಕೆಂಬ ಒತ್ತಾಯ ಬಂದಿದೆ.

ಹಣ ಕೊಡದಿದ್ದರೆ ಜಪ್ತಿಗೆ ದನಕರುಗಳನ್ನೂ, ಕೃಷಿಯ ಸಾಮಗ್ರಿಗಳನ್ನೂ ತೆಗೆದುಕೊಂಡು ಹೋಗುತ್ತಾರೆ. ಹೊಲವೂ ಕೈಬಿಡುತ್ತದೆ. ಕೈಗೆ ಬರಲಿರುವ ಬೆಳೆಯೂ ಹೋಗುತ್ತದೆ. ಮುಂದೆ? ಮಾಡಲು ಹೊಲವಿಲ್ಲ. ಹೊಲ ಸಿಕ್ಕರೂ ದನಕರುಗಳಿಲ್ಲ. ಎತ್ತುಗಳಿಲ್ಲ, ರಂಟೆ ಕುಂಟೆಗಳಿಲ್ಲ. ಅವನೆದುರಿಗೆ ದೊಡ್ಡ ಸಂಕಟವೇ ಎದ್ದು ನಿಂತಿತು. ಇಂಥ ಮನಃ ಸ್ಥಿತಿಯಲ್ಲಿ ನುಚ್ಚು ಹೇಗೆ ಇಳಿದೀತು, ಅವನ ಗಂಟಲಲ್ಲಿ?

ಆ ರಾತ್ರಿಯೆಲ್ಲ ಅವನಿಗೆ ನಿದ್ರೆ ಹತ್ತಲಿಲ್ಲ. ಬೆಳಗಾದರೆ ಜಪ್ತಿ. ದನಕರುಗಳು ಹೋಗುವವು, ಸಾಮಾನು ಹೋಗುವವು ... ಫಾಸೀ ಶಿಕ್ಷೆಗಾಗಿ ಕಾಯುತ್ತಿದ್ದ ಅಪರಾಧಿಯಂತೆ ಲಿಂಗಣ್ಣ ಆ ಇರುಳನ್ನು ಕಳೆಯಬೇಕಾಯಿತು.

ಬೆಳಗಾಗಲು ಇನ್ನೂ ಎರಡು ತಾಸುಗಳಿದ್ದಾಗ ಅವನಿಗೆ ಕೊಂಚ ಜೊಂಪು ಹತ್ತಿದ ಹಾಗಾಯಿತು. ಆ ಅರೆನಿದ್ರೆಯಲ್ಲಿಯೂ ತನ್ನ ಪ್ರೀತಿಯ ದನಕರುಗಳೇ ಅವನ ಕನಸಿನಲ್ಲಿ ಬಂದಂತಾಯಿತು. ಆ ಮಗ್ಗುಲಿನಿಂದ ಈ ಮಗ್ಗುಲಿಗೆ ಹೊರಳಿದ. ಮತ್ತೆ ನಿದ್ರೆ ಮಾಯವಾಯಿತು.

ಅಷ್ಟರಲ್ಲಿ ಬಾಗಿಲು ತಟ್ಟಿದ ಶಬ್ದ ಕೇಳಿಬಂದಿತು. ಎಚ್ಚರವಾಗಿಯೆ ಇದ್ದ ಲಿಂಗಣ್ಣ-"ಯಾರಪಾ ಅವರು?" ಎಂದ.

"ಬಾಗಿಲಾ ತಗೀ ಲಿಂಗಣ್ಣ."

ಲಿಂಗಣ್ಣ ಎದ್ದು ದೀಪ ಹೊತ್ತಿಸಿ ಬಾಗಿಲು ತೆರೆದಾಗ ಕಾಣಿಸಿದ ಮುಖವನ್ನು ಕಂಡು ಅವನಿಗೆ ವಿಸ್ಮಯವಾಗದಿರಲಿಲ್ಲ. ಆಶ್ಚರ್ಯದ ದನಿಯಲ್ಲಿ-"ಯಾರು? ನೀನು? ಸಂಗಣ್ಣಾ?" ಎಂದ.

"ಶ್ಯೂ! ಒದರಿ ಮಾತಾಡಬ್ಯಾಡ. ಊರಾಗ ಸಿ.ಐ.ಡಿ.ಗಳಿದ್ದಂಗ ಕಾಣಿಸ್ತೈತಿ" ಎಂದು ಪಿಸುದನಿಯಲ್ಲಿ ಹೇಳುತ್ತಾ ಸಂಗಣ್ಣ ಬಾಗಿಲನ್ನು ಭದ್ರವಾಗಿ ಮುಚ್ಚಿ ಅಗಳಿ ಹಾಕಿದ. ಬಾಗಿಲು ತೆರೆದ ಸಪ್ಪಳ ಪಾರ್ವತಮ್ಮನನ್ನೂ ಎಚ್ಚರಗೊಳಿಸಿರಬೇಕು. ಆಕೆಯೂ ಎದ್ದು ಬಂದಳು.

"ಯಾವಾಗ ಬಂದಿ ಸಂಗಣ್ಣಾ?"

"ರಾತ್ರೀನೇ ಬಂದಿದ್ದೆನವ್ವ. ಮನಿಯ ಸುದ್ದಿ ತಿಳಿದು ಓಡಿ ಬರಬೇಕಾಯ್ತು. ಹಾಂಗೂ ನಿಮ್ಮ ಕೆಲಸಾನೂ ಆದಂಗಾಯ್ತು."

"ಪಾಪ! ನಿಮ್ಮವ್ವಗ ಬಹಳ ಜ್ವರ. ನಿನ್ನೆ ಸಂಜೀಕ ನಾ ಹೋಗಿದ್ದೆ.

ಮೈಯಾಗ ಏನೂ ಉಳಿದಿಲ್ಲ ಆಕೆಗೆ. ಬರೀ ನಿನ್ನ ನೆನಸಿ ನೆನಸಿ ಹಲುಬುತ್ತಿದ್ದಳು. ಹೆತ್ತ ತಾಯಿ ಕರುಳಪ್ಪ. ಅದರಾಗ ನೀ ಒಬ್ಬನs ಮಗಾ ಆಕೆಗೆ. ಹೀಂಗ ಎಂದೂ ತಿರುಗಿದಾಂವಲ್ಲ ಆಕೀನ್ನ ಬಿಟ್ಟು. ಅದನ್ನs ಮನಸ್ಸಿಗೆ ಹಚ್ಚಿಕೊಂಡ್ಹಾಂಗ ಕಾಣಿಸತ್ತೈತಿ ಮುದುಕಿ..." ಎಂದಳು ಪಾರ್ವತಮ್ಮ.

"ಒಬ್ಬನಾ ಮಗಾ ಆದರೇನಾಯ್ತುವ್ವಾ? ಬ್ಯಾರೆ ಯಾರಿಗೂ ಒಬ್ಬೊಬ್ಬರs ಮಕ್ಕಳು ಇರೂದಿಲ್ಲೇನು? ಅವರ ಮಕ್ಕಳೂ ಚಳವಳಿಯೊಳಗ ಬಿದ್ದಿಲ್ಲೇನು? ನಿನ್ನಂಗ ಧೈರ್ಯದ ಹೆಣ್ಣುಮಗಳಲ್ಲವ್ವ ಆಕೆ. ಆಕಿಗಿಂತ ನಮ್ಮಾಕೀನೇ ನೆಟ್ಟಗಂತ ಹೇಳಬಹುದು. ಆರು ತಿಂಗಳ ಬಸುರಿ. ಆದರೂ ಒಂದಿನ ಕೂಡ ಕಣ್ಣಾಗ ನೀರು ಹಾಕಲಿಲ್ಲ. 'ಹೋಗಬ್ಯಾಡ್ರಿ' ಅಂತ ಹೇಳಲಿಲ್ಲ."

"ಎಲ್ಲಾರೂ ಒಂದs ತರಹಾ ಎಲ್ಲಿರತಾರ ಪರಪಂಚದಾಗ? ಹೋಗಲಿ ಬಿಡು. ನೀ ಒಂದು ನಾಲ್ಕು ದಿನ ಇಲ್ಲೇ ಇದ್ದರೆ ನೆಟ್ಟಗಾದಾಳು.."

"ಛೆ! ಎಂಥಾ ಮಾತವ್ವಾ ಇದು! ನಾಳೆ ಮುಂಜಾನೆ ಆದ್ರ ಹೋಗಿ ಬಿಡಬೇಕು. ಪೋಲೀಸರು ಬ್ಯಾರೆ ನಮ್ಮನ್ನ ಕಣ್ಣಾಗ ಎಣ್ಣೀ ಹಾಕಿಕೊಂಡು ಕಾಯ್ತಾ ಇದ್ದಾರ. ಇಲ್ಲಿ ಕೂತರೆ ನಡಿಯೂ ಹಾಂಗಿಲ್ಲವ್ವ. ಅಲ್ಲಿ ಆ ಊರ ಮಠದಾಗ ಶೇಕ್ರಣ್ಣಾ ನನ್ನ ಹಾದೀ ನೋಡ್ತಾ ಕೂತಾನ."

"ಅಂದ್ರ? ಸ್ವಾಮಿಗಳೂ ಚಳವಳಿಯೊಳಗಿದಾರೇನಪ್ಪ?" ಎಂದು ಆಶ್ಚರ್ಯದಿಂದ ಕೇಳಿದಳು ಪಾರ್ವತಮ್ಮ.

"ನಮ್ಮ ಹಾಂಗ ಹೊರಗ ಬರದಿದ್ದರೂ ಅಲ್ಲೇ ಇದ್ದುಕೊಂಡು ಸಹಾಯ ಮಾಡ್ತಾರವ್ವ ಬೇಕಾದ್ದು. ಈಗ ನಿಮ್ಮ ಮ್ಯಾಲ ಆ ರಂಗಪ್ಪ ತಂದಿಟ್ಟಿದ್ದ ಸಂಕಟಾನೆಲ್ಲಾ ಅವರೇ ದೂರ ಮಾಡ್ಯಾರವ್ವ. ಅದನ್ನ ಹೇಳ್ಳಿಕ್ಕೆ ಅಂತ ಬಂದೆ."

ಲಿಂಗಣ್ಣ ಆತುರಗೊಂಡು ಕೇಳಿದ: "ಏನಂದಿ? ಏನ ಮಾಡಿದಾರೆ?"

"ಏನು ಮಾಡಿದರೋ ನಮಗೂ ಗೊತ್ತಿಲ್ಲ. ದೇಸಾಯರಿಗೆ ಹೇಳಿದರಂತ. ಅಂತೂ ನಿಮ್ಮ ಹೊಲಾನೂ ಉಳೀತೈತಿ,ಬೆಳೀನೂ ಉಳೀತೈತಿ..."

"ಲಾವಣಿಯ ರೂಪಾಯಿ..."

"ಅದಕ್ಕೂ ಚಿಂತೀ ಮಾಡಬಾರದು ಅಂತ ಹೇಳಿದ್ದಾರೆ. ದೇಸಾಯರಿಗೆ ಹೇಳಿ ಕಳಿಸಿರಬೇಕು ಸ್ವಾಮಿಗಳು. ಅವರ ಮ್ಯಾಲ ಬಹಳ ಭಕ್ತಿ

ಬಾಬಾಸಾಹೇಬರದು. ಸ್ವಾಮಿಗಳ ಮಾತು ಮೀರತಾರೇನು ಅವರು?"

ಲಿಂಗಣ್ಣನ ಹೃದಯವನ್ನು ಹಿಂಡುತ್ತಿದ್ದ ಕರಾಳ ಕೈ ಒಮ್ಮೆಲೆ ಅದೃಶ್ಯವಾದಂತಾಯಿತು. ಅವನೆದೆಯನ್ನು ಆವರಿಸಿಕೊಂಡಿದ್ದ ಶೋಕ, ನಿರಾಸೆ, ಅಶಾಂತಿ, ಅಸಮಾಧಾನಗಳೆಲ್ಲವೂ ಮಾಯವಾದುವು. ಮನಸ್ಸಿನಲ್ಲಿಯೆ ಸ್ವಾಮಿಜಿಯವರ ಮೂರ್ತಿಯನ್ನು ಕಲ್ಪಿಸಿಕೊಂಡು ನೂರು ಸಲ ನಮಸ್ಕಾರ ಹಾಕಿದ.

ಅಲ್ಲಿಂದ ಹೊರಟು ಸಂಗಣ್ಣ ತಮ್ಮ ಮನೆಗೆ ಬಂದು ಬಾಗಿಲು ತಟ್ಟಿದಾಗ ಅವನ ಪತ್ನಿ ಸಿದ್ದವ್ವನೇ ಬಂದು ಬಾಗಿಲು ತೆಗೆದಳು. ಎದುರಿಗಿದ್ದ ಪಡಸಾಲೆಯಲ್ಲಿಯೆ ತಾಯಿ ಸಾತವ್ವ ಕೌದಿಯನ್ನು ಹೊದೆದುಕೊಂಡು ಮಲಗಿದ್ದಳು. ಒಂದು ಚಿಕ್ಕ ಮಾಡದಲ್ಲಿ ಹಣತೆಯೊಂದು ಮಂದವಾಗಿ ಉರಿಯುತ್ತಿತ್ತು. ಅದರ ಬೆಳಕಿನಲ್ಲಿ ಆಕೆಯ ಮುಖ ಬೆಳ್ಳಗೆ ಬಿಳಿಚಿಕೊಂಡ ಹಾಗೆ ತೋರುತ್ತಿತ್ತು. ರಾತ್ರಿಯೆಲ್ಲ ನರಳುತ್ತಿದ್ದ ಮುದುಕಿಗೆ ಆಗತಾನೆ ನಿದ್ದೆ ಹತ್ತಿದ ಹಾಗಿದ್ದಿತು. ಮೂಳೆಗಳನ್ನು ತೆರೆದು ತೋರಿಸುತ್ತಿದ್ದ ಎಡಗೈಯನ್ನು ಎದೆಯ ಮೇಲೊರಗಿಸಿಕೊಂಡು ಆಕೆ ಮಲಗಿಕೊಂಡಿದ್ದಳು.

ಗಂಡಹೆಂಡಿರಿಬ್ಬರೂ ಸದ್ದಾಗದಂತೆ ನಡೆದು ಬಂದು ತಮ್ಮ ಕೊಠಡಿಯನ್ನು ಸೇರಿದರು. "ಇದೇ ಈಗ ನಿದ್ದಿ ಹತ್ತಿದಾಂಗ ಕಾಣತೈತಿ. ಅದೂ ನೆಟ್ಟಗಾತು ಅನ್ನು. ಆಕೆ ಎಚ್ಚರಿರುವಾಗ ಹೊರಟುಬಿಡೂದು ಬಹಳ ತ್ರಾಸ ಆಗುತ್ತಿತ್ತು" ಎಂದ ಸಂಗಣ್ಣ, ತನ್ನ ಕಂಬಳಿಯನ್ನು ಎತ್ತಿಕೊಳ್ಳುತ್ತ.

"ಅಂದರs? ಈಗs ಹೊಂಟೀರೇನು?" ಮೂಗಿನ ಮೇಲೆ ಬೆರಳನ್ನು ಇರಿಸಿಕೊಂಡು ಸಿದ್ದವ್ವ ಕೇಳಿದಳು.

"ಹೂಂ. ಹೋಗಾಕಬೇಕು. ಕೆಲಸ ಬಹಳ ಅದಾವೆ."

"ಇದೊಂದಿನಾ ಆದ್ರೂ ಇದ್ದು ಹೋಗಬಾರದೇ? ನೀವು ಹೋದದ್ದು ಗೊತ್ತಾದ ಮ್ಯಾಲ ಅತ್ತೇ ಎದೀನs ಒಡಕೊಂತಾಳ. ಮೈಯಾಗ ಜ್ವರಾ ಬ್ಯಾರೆ. ಇಂಥಾದರಾಗ ನೀವು ಹೋಗಿಬಿಟ್ಟರ ಮುಗೀತು. ಈಗ ನೀವು ಬಂದಿರಿ ಅಂತ ಸ್ವಲ್ಪ ಹುಷಾರಾಗಿದ್ದಾಳೆ. ಎಂದೂ ಇಲ್ಲದ್ದು ಇಂದು ನಿದ್ದಿ ಹತ್ತೈತಿ. ಇಂದು ಹೋಗಬ್ಯಾಡ್ರಿ" ಎಂದಳು ಸಿದ್ದವ್ವ. ಅವಳ ಕಣ್ಣುಗಳಲ್ಲಿ ನೀರೂರಿತ್ತು.

ಪತ್ನಿಯನ್ನು ಪ್ರೀತಿಯಿಂದಲೂ ಕನಿಕರದಿಂದಲೂ ನಿರುಕಿಸುತ್ತ ಸಂಗಣ್ಣನೆಂದ: "ಏನ್ಮಾಡೂದು ಹೇಳು. ಇಲ್ಲಿರೂದು ಅಂದರ ಯಾವಾಗ

ಪೋಲೀಸರು ಬರ್ತಾರೋ ನೇಮ ಇಲ್ಲ. ಅಂಥಾದ್ದರಾಗ ನಾ ಇಲ್ಲಿ ಕೂತುಬಿಟ್ಟರ ಪೋಲೀಸರ ಕೈಯಾಗ ಸಿಕ್ಕಹಾಂಗs ಅನ್ನು."

"ಅವರಿಗೆ ಹ್ಯಾಂಗ ಗೊತ್ತಾಗುತೈತಿ ನೀವಿಲ್ಲಿ ಇರೂದು?"

"ನಮ್ಮನ್ನ ಹಿಡೀಲಿಕ್ಕಂತ ಕಣ್ಣಾಗ ಎಣ್ಣೀ ಹಾಕ್ಕೊಂಡು ಕಾಯ್ತಾ ಇದ್ದಾರ-"

ಸಂಗಣ್ಣ ಇನ್ನೂ ಮಾತು ಮುಗಿಸಿರಲಿಲ್ಲ.

ಅಷ್ಟರಲ್ಲೇ ಬಾಗಿಲಿನ ಮೇಲೆ ಸದ್ದಾದ ಹಾಗೆ ಕೇಳಿಬರುತ್ತಲೂ ಆತ ಬೆಚ್ಚಿಬಿದ್ದು, ತೀರ ಮೆಲುದನಿಯಲ್ಲಿ-"ಯಾರೋ ಬಾಗಿಲಾ ಬಡಿದಂಗಾಯ್ತಲ್ಲ. ಕೇಳಿಸಿತೇನು?" ಎಂದ.

ಸಿದ್ದವ್ವನಿಗೂ ಕೇಳಿಸಿತ್ತು ಸದ್ದು. ಆಕೆ ಗಾಬರಿಗೊಂಡು ಪತಿಯನ್ನು ತಬ್ಬಿಕೊಂಡಳು. ಅದುವರೆಗೆ ಧೈರ್ಯದಿಂದ ತಡೆಹಿಡಿದಿದ್ದ ಅಳುವೂ ಒಮ್ಮೆಲೆ ಉಕ್ಕಿ ಬಂದಿತು. ಅವನ ಎದೆಯ ಮೇಲೆ ತಲೆಯನ್ನೊರಗಿಸಿ ಬಿಕ್ಕುತ್ತ ಬಿಕ್ಕುತ್ತ "ಅವ್ವಯ್ಯ, ಪೋಲೀಸರೇ ಬಂದರೇನು! ಇನ್ನ್ಯಾಂಗ ಮಾಡೂದು?" ಎಂದಳು. ಸಂಗಪ್ಪ ಒಳಗೇ ಅಡಗಿ ಕುಳಿತ.

ಬಾಗಿಲಿನ ಮೇಲೆ ಸದ್ದಾಗುತ್ತಲೇ ಇತ್ತು. ಸಿದ್ದವ್ವ ಮುದುಕಿಯ ಬಳಿ ಬಂದು ಆಕೆಯ ಎದೆಯ ಮೇಲೆ ಕೈಯಿರಿಸಿ ಆಕೆಯನ್ನು ಎಚ್ಚರಗೊಳಿಸಿದಳು. ಮುದುಕಿ ಕಣ್ಣು ತೆರೆದಾಗ ಅವಳ ಕಿವಿಯ ಹತ್ತಿರ ಮುಖ ಒಯ್ದು ಲಗುಬಗೆಯಿಂದ ಕೆಲವು ಪಿಸುಮಾತನಾಡಿದಳು. ಅಷ್ಟು ಹೊತ್ತಿಗೆ ದೂರ ಮಲಗಿಕೊಂಡಿದ್ದ ಕರಿಯಪ್ಪ-ಅವಳ ಮಾವನೂ ಎದ್ದುಬಿಟ್ಟಿದ್ದ. "ಯಾರೋ ಅವರು ಬಾಗಿಲಾ ಬಡಿಯೋರು?" ಎಂದು ಆತ ಕೂಗುತ್ತಿದ್ದ ಹಾಗೆ ಸಿದ್ದವ್ವ ಅವನ ಹತ್ತಿರವೂ ಓಡಿಹೋಗಿ ವಿಷಯವನ್ನೆಲ್ಲ ತಿಳಿಸಿದಳು. ಅನಂತರ ಬಾಗಿಲು ತೆರೆಯಲು ಮಾವನಿಗೆ ತಿಳಿಸಿ, ತಾನು ಅತ್ತೆಯ ಹಾಸಿಗೆಯ ಬಳಿಯಲ್ಲಿ ಕುಳಿತುಕೊಂಡು ಅವಳ ಕಾಲುಗಳನ್ನು ಹಿಸುಕತೊಡಗಿದಳು. ಮುದುಕಿಯ ನರಳುವಿಕೆ ಪುನಃ ಪ್ರಾರಂಭವಾಗಿದ್ದಿತು.

ಕರಿಯಪ್ಪ ಬಾಗಿಲು ತೆರದೊಡನೆ ಎಂಟು ಹತ್ತು ಜನ ಪೋಲೀಸರು ಒಮ್ಮೆಲೆ ಒಳನುಗ್ಗಿದರು. ಜತೆಗೆ ಒಬ್ಬ ಫೌಜುದಾರನೂ ಇದ್ದ. ಒಂದೆರಡು ಕ್ಷಣಗಳೊಳಗಾಗಿ ಮನೆಯ ಎಲ್ಲ ಭಾಗಗಳ ಮೇಲೂ ದೃಷ್ಟಿಯೋಡಿಸಿ ಫೌಜುದಾರನೆಂದ- "ಎಲ್ಲಿದಾನಪಾ ನಿನ್ನ ಮಗ?"

ಮುದುಕ ಕರಿಯಪ್ಪ ಕೈಗಳನ್ನು ಜೋಡಿಸಿಕೊಂಡು ದೈನ್ಯಪೂರ್ಣ

ದನಿಯಲ್ಲಿ -

"ಒಂದು ತಿಂಗಳಾತು ಸಾಹೇಬರs, ಅವನ ಮಾರೀ ಕಂಡಿಲ್ಲ ನಾವು. ಮಗನ್ನ ನೋಡಬೇಕು ಅಂತ ಈ ಮುದುಕಿ ಹಗಲೂ ರಾತ್ರಿ ಕನವರಿಸ್ತಾ ಬಿದ್ದೈತಿ. ಅವನ ದ್ಯಾನ ಹಿಡಕೊಂಡು ಗಂಜೀ ಕೂಡಾ ಕುಡೀದs ಸಾಯ್ತಾ ಬಿದ್ದೈತಿ. ಅವಗ ಅರಿವಿಲ್ಲರಿ ಸಾಹೇಬರs....ಎಲ್ಲಿ ಇದ್ದಾನೋ ಏನೋ!" ಎಂದ.

"ಏ! ಮುದುಕಾ! ಸುಳ್ಳು ಬೊಗಳಬ್ಯಾಡೋ. ಅವ ನಿನ್ನೆ ರಾತ್ರಿ ಇಲ್ಲಿಗೆ ಬಂದದ್ದನ್ನ ನಮ್ಮ ಮಂದಿ ಕಣ್ಣಾರೆ ನೋಡ್ಯಾರ. ನಮ್ಮನ್ನ ಮೋಸ ಮಾಡಬೇಕಂತ ಮಾಡೀರೇನು? ಹೇಳು. ಎಲ್ಲಿದ್ದಾನ ಅವ?" ಎಂದು ಗದರಿಸಿ ಫೌಜುದಾರರು ಪೋಲೀಸರ ಕಡೆ ತಿರುಗಿ "ಹುಡುಕಿರೋ ಮನೀ ಎಲ್ಲಾ. ಎಲ್ಲಿ ಹೋಗ್ತಾನ ಅವ? ಇಲ್ಲೇ ಎಲ್ಲಾದರೂ ಅಡಗಿ ಕೂತಿದ್ದಾನು" ಎಂದು ಆಜ್ಞಾಪಿಸಿದರು. ಅಕಸ್ಮಾತ್ತಾಗಿ ಅವರ ದೃಷ್ಟಿ ಮೂಲೆಯಲ್ಲಿದ್ದ ಕೋಣೆಯ ಕಡೆಗೆ ಹೊರಳಿತು. ಆ ಕಡೆಗೆ ಅಡಿಯಿರಿಸುತ್ತ- "ಯಾರಿದಾರ ಅಲ್ಲಿ?" ಎಂದು ಕೇಳಿದರು.

ಅತ್ತೆಯ ಕಾಲುಗಳನ್ನು ಹಿಸುಕುತ್ತ ಫೌಜುದಾರನ ಚಲನವಲನಗಳನ್ನೆಲ್ಲ ಕಳ್ಳದೃಷ್ಟಿಯಿಂದ ನಿರುಕಿಸುತ್ತಿದ್ದ ಸಿದ್ದವ್ವನಿಗೆ ಅವರು ಕೊಠಡಿಯ ಕಡೆಗೆ ಹೊರಟದ್ದನ್ನು ನೋಡುತ್ತಲೂ ಎದೆ ಧಡಧಡಿಸತೊಡಗಿತು. ಕಾಲು ಹಿಸುಕುವುದನ್ನು ನಿಲ್ಲಿಸಿ, ಆಕೆ ಒಡನೆಯೆ ಎದ್ದು ಆ ಕೊಠಡಿಗೆ ಅಡ್ಡವಾಗಿ ನಿಂತುಕೊಂಡು-"ಇಲ್ಲಿ ನಮ್ಮ ನಾದಿನಿ ಮಲಗ್ಯಾಳ್ರಪ್ಪ. ಹಡೆದ ಬಾಣಂತಿ..." ಎಂದಳು.

ಅವಳು ಹಠಾತ್ತಾಗಿ ಎದ್ದುಬಂದುದನ್ನೂ ಕೊಠಡಿಗೆ ಅಡ್ಡವಾಗಿ ನಿಂತುದನ್ನೂ ಕಂಡು, ಅವಳ ಮುಖದ ಮೇಲೆ ಸ್ಪಷ್ಟವಾಗಿ ಮೂಡಿದ್ದ ಭೀತಿಯನ್ನು ಗುರುತಿಸಿ, ಫೌಜುದಾರನಿಗೆ ಸಂದೇಹವೇ ಉಳಿಯಲಿಲ್ಲ. ಸಂಗಣ್ಣ ಅದೇ ಕೊಠಡಿಯಲ್ಲಿ ಅವಿತುಕೊಂಡಿರಬೇಕೆಂದು ಅವರ ಚಾಣಾಕ್ಷ ಬುದ್ಧಿಗೆ ಹೊಳೆಯದಿರಲಿಲ್ಲ. "ನಾದಿನಿ? ಬಾಣಂತಿ ನಾದಿನಿ? ನಿಮ್ಮ ನಾದಿನಿಗೆ ಮಿಸೆ ಬಂದಿರಬೇಕಲ್ಲ ಮೂಗಿನ ಕೆಳಗೆ? ಸರಿ. ಅತ್ತ ಸರಿ!" ಎನ್ನುತ್ತಾ ಆತ ಮುಂದುವರಿಯತೊಡಗಿದ.

ನರಳುತ್ತ ಬಿದ್ದುಕೊಂಡಿದ್ದ ಮುದುಕಿಗೂ ಇನ್ನು ತಡೆಯಲಾಗಲಿಲ್ಲ. ಕೊಂಚವೂ ಶಕ್ತಿಯಿಲ್ಲದಿದ್ದರೂ ಆಗ ಆಕೆಯ ಶರೀರದಲ್ಲಿ ಆವೇಶ

ಬಂದಂತಾಯಿತು. ದಿಗ್ಗನೆ ಹಾಸಿಗೆಯಿಂದೆದ್ದು ಫೌಜುದಾರನಿಗೆ ಅಡ್ಡವಾಗಿ ತನ್ನ ಮೂಳೆಯ ದೇಹವನ್ನು ನಿಲ್ಲಿಸಿ, ನಡುಗುವ ದನಿಯಲ್ಲಿ ನುಡಿದಳು: "ನನ್ನ ಪ್ರಾಣದಾಗ ತ್ರಾಣ ಇರೂತನಕಾ ಆ ಕೋಣೆಯೊಳಗ ನಿನಗ ಹೋಗಾಕ ಕೊಡಾಕಿಲ್ಲ, ಸುಮ್ಮನ ಹೋಗೋ ಮೂಳಾs !"

ಫೌಜುದಾರ ಒಂದು ನಿಮಿಷ ನಿಂತಲ್ಲಿಯೆ ನಿಂತುಕೊಂಡಿದ್ದ. ಈಗಲೋ ಇನ್ನೊಂದು ಗಳಿಗೆಗೋ ಕೊನೆಯುಸಿರು ಹಾಕುವ ಹಾಗಿದ್ದ ಆ ಜರ್ಜರಿತ ಶರೀರದಲ್ಲೂ ಎಂಥ ಶಕ್ತಿ ಸಂಚರಿಸಿತ್ತು ಆಗ! ತಾಯ ಕರುಳೇ ಆ ಅಸ್ಥಿಪಂಜರದ ರೂಪದಲ್ಲಿ ಹೊರಗೆ ಬಂದು ತನ್ನೆದುರು ನಿಂತುಕೊಂಡ ಹಾಗೆ ತೋರುತ್ತಿತ್ತು.

ಮೂರು ಲೋಕಗಳನ್ನೂ ನಡುಗಿಸುವ ಹಾಗೆ ಅಕಟೋವಿಕಟವಾಗಿ ನರ್ತನಗೈಯುವ ಮಹಾಕಾಳಿಯ ಹಾಗೆ ನಿಂತಿತ್ತು ಆ ಮುದುಕಿ. ಬೆಳ್ಳಗೆ ಬಿಳಿಚಿಕೊಂಡ ಆ ತೆಳ್ಳಗಿನ ಮುಖದಲ್ಲಿ ಕೆಂಡದ ಹಾಗೆ ಹೊಳೆಯುತ್ತಿದ್ದ ಅವಳ ಕಣ್ಣುಗಳು!

"ಏ, ಹಿಡೀರ್‍ರ್ಯೋ ಈ ಮುದುಕಿನ್ನ. ಆ ಕಡೆ ಎಳೆದೊಯ್ಯಿರಿ!" ಎಂದು ಫೌಜುದಾರ ಆಜ್ಞಾಪಿಸಿದ.

"ಯಾವನೋ ಗಂಡಸು ನನ್ನ ಹಿಡಿಯೋನು? ಮೈಗೆ ಕೈಹಚ್ಚಿದರ ಕೊಂದುಬಿಟ್ಟೇನು!" ಎಂದು ಕರ್ಕಶವಾಗಿ ಮುದುಕಿ ಕೂಗುತ್ತಿದ್ದ ಹಾಗೇ ಇಬ್ಬರು ಪೋಲೀಸರು ಮುಂದೆ ಬಂದು ಅವಳನ್ನು ಹಿಡಿದು ಎಳೆಯತೊಡಗಿದರು. ಇನ್ನಿಬ್ಬರು ಸಿದ್ದವ್ವನನ್ನೂ ಒತ್ತಾಯದಿಂದ ಎಳೆದೊಯ್ದರು. ಕರಿಯಪ್ಪನನ್ನು ಹಿಡಿದುಕೊಂಡು ಬಾಗಿಲಿನ ಹೊರಗಡೆ ದೂಡಿದ್ದರು.

"ಏ, ನನ್ನ ಮುಟ್ಟಬ್ಯಾಡ್ರೋ ಮಂಗ್ಯಾ ಸೂಳೀಮಕ್ಕಳಾ! ನಿಮ್ಮ ಮನಿ ಹಾಳಾಗಲಿ. ನನ್ನ ಮಗನ್ನ ಒಯ್ಯಬ್ಯಾಡ್ರೋ!" ಎಂದು ಮುದುಕಿ ಆಕ್ರೋಶ ಮಾಡುತ್ತಿದ್ದ ಹಾಗೇ ಕೊಠಡಿಯ ಬಾಗಿಲು ಮೆಲ್ಲನೆ ತೆರೆದಂತಾಯಿತು.

ಹೊರಗಡೆ ನಡೆಯುತ್ತಿದ್ದುದೆಲ್ಲವನ್ನೂ ತಾಯಿಯ ಆಕ್ರೋಶವನ್ನು ಕೇಳಿ ಸಂಗಣ್ಣನಿಗೆ ತಡೆಯಲಾಗಲಿಲ್ಲವೇನೊ- ಆತ ಬಾಗಿಲನ್ನು ಸ್ವಲ್ಪ ಮಾತ್ರ ತೆರೆದು ಪಿಸ್ತೂಲನ್ನು ಅದರೊಳಗಿನಿಂದ ಗುರಿಯಿಟ್ಟು, ಗಂಭೀರ ಸ್ವರದಲ್ಲಿ ನುಡಿದ: "ಇವೊತ್ತು ನೀವೇನು ಮಾಡಿದರೂ ನನ್ನ ಹಿಡಿಯೂದು ಶಕ್ಯ ಇಲ್ಲ, ಫೌಜುದಾರರೆ. ನಿಮ್ಮ ಪ್ರಾಣ ಬೇಕಾಗಿದ್ದರ ಸುಮ್ಮನೆ ಹೋಗ್ರಿ.

ನಮ್ಮ ಅವ್ವನ್ನ ಬಿಡ್ರಿ ಮೊದಲು. ಎಲ್ಲರನ್ನೂ ಬಿಡ್ರಿ... ಇಲ್ಲಾಂದರ ಹಾರಿಸ್ತೀನಿ..."



ಪಿಸ್ತೂಲಿನ ತುದಿಯ ದರ್ಶನವಾಗುತ್ತಲೇ ಫೌಜುದಾರರೂ ತಮ್ಮ ಪಿಸ್ತೂಲನ್ನು ತೆಗೆದು ಕೈಯಲ್ಲಿ ಹಿಡಿದುಕೊಂಡರು. ಅದರ ನಳಿಗೆಯನ್ನು ಒತ್ತುತ್ತಿದ್ದ ಹಾಗೇ ಮುದುಕಿಯ ಮೈಯಲ್ಲಿ ಅದ್ಭುತವಾದ ಆವೇಶ ಬಂದಂತಾಯಿತು. ಇನ್ನು ತನ್ನ ಮಗನನ್ನು ಗುಂಡು ಹಾಕಿ ಕೊಲ್ಲುವರೆಂದು ಆಕೆ ಹುಚ್ಚು ಹಿಡಿದವರ ಹಾಗೆ ಅರಚಿಕೊಂಡು ತನ್ನನ್ನು ಹಿಡಿದು ನಿಂತಿದ್ದ ಪೋಲೀಸರನ್ನು ಕೊಡವಿ ರಭಸದಿಂದ ನುಗ್ಗಿದಳು. ಗುಂಡು ಹಾಕಿ ಸಂಗಣ್ಣನ ಕೈಯಲ್ಲಿದ್ದ ಪಿಸ್ತೂಲನ್ನು ಕೆಳಕ್ಕೆ ಕೆಡಹಬೇಕೆಂಬ ಉದ್ದೇಶದಿಂದ ಫೌಜುದಾರರು ನಳಿಗೆಯನ್ನೊತ್ತುತ್ತಲೇ ಅಡ್ಡ ಬಂದ ಮುದುಕಿಯ ಬಲಗಡೆಯ ಎದೆಯ ಮೇಲೆ ಗುಂಡು ತಾಕಿತು. ತನಗೆ ಗುಂಡು ಹೊಡೆದುದೂ ಆಕೆಗೆ ಒಮ್ಮೆಲೇ ತಿಳಿಯಲಿಲ್ಲ. "ಅಯ್ಯೋ, ನನ್ನ ಮಗನ್ನ ಕೊಂದರೇನೋ ಈ ರಾಕ್ಷಸರು" ಎಂದು ಕಿರಿಚಿಕೊಂಡು ಆಕೆ ನೆಲಕ್ಕುರುಳಿದಳು.

ಅಕಸ್ಮಾತ್ತಾಗಿ ಬದಲಾದ ಸನ್ನಿವೇಶವನ್ನು ಕಂಡು ಸಂಗಣ್ಣನ ಮೈಮೇಲಿನ ಎಚ್ಚರ ತಪ್ಪಿಹೋದಂತಾಯಿತು. ಅವನಿಗರಿಯದಂತೆಯೇ ಅವನ ಕೈಯಿಂದ ಪಿಸ್ತೂಲು ಕೆಳಗೆ ಬಿದ್ದಿತು. ಬಾಗಿಲನ್ನು ದೂಡಿ ಹೊರಕ್ಕೆ ಬಂದು ಆತ

ತಾಯಿಯ ಶರೀರವನ್ನು ಎತ್ತಿ ತೊಡೆಯ ಮೇಲೆ ಹಾಕಿಕೊಂಡ. "ಅಯ್ಯೋ ಅವ್ವಾ, ಏನು ಹುಚ್ಚು ಕೆಲಸಾ ಮಾಡಿದೆಯವ್ವಾ! ನೀನ್ಯಾಕ ಬಂದಿ ನಡುವೆ? ಅಯ್ಯೋ..."ಎನ್ನುತ್ತಾ ಆಕೆಯ ತಲೆಯ ಮೇಲೆ ಮುಖವನ್ನು ಇರಿಸಿ ಹಸು-ಮಗುವಿನಂತೆ ಬಿಕ್ಕತೊಡಗಿದ.

"ನನ್ನ ಮಗನೇ, ಸಂಗಾ, ಸಂಗಣ್ಣಾ, ಅಂತೂ ನೀ ಉಳಿದೆಲ್ಲ-ಅಷ್ಟು ಸಾಕಪ್ಪಾ ಕಂದಾ. ನಾ ಏನು ಇಂದು ನಾಳೆ ಹೋಗುವಾಕೀ ಇದ್ದೆ. ಇಂದs ಹೋಗ್ತೀನಿ. ನೀ ಉಳಿದೆಯಲ್ಲ .... ಸಾಕು. ಸಿದ್ದವ್ವ .... ಬಸುರಿ ..... ಮೊಮ್ಮಗ್ನನ್ನ ನೋಡಿ ಕಣ್ಮುಚ್ಚಬೇಕಂತಿದ್ದೆ... ಆಗಲಿಲ್ಲ.... ಸಂಗಾ .... ಸಂಗಣ್ಣಾ ....." ಎಂದು ಮುದುಕಿ ತೊದಲುತ್ತಿದ್ದಂತೆಯೆ ನಾಲಗೆ ನಿಂತುಬಿಟ್ಟಿತು. ಒಂದೆರಡು ಕ್ಷಣಗಳ ಕಾಲ ಅವಳ ಕಣ್ಣ ಬೊಂಬೆಗಳೆರಡೂ ಗರಗರನೆ ತಿರುಗಿ ಅನಂತರ ಸ್ಥಿರವಾಗಿ, ಶೂನ್ಯವಾಗಿ ನಿಂತುಬಿಟ್ಟವು. "ಅಯ್ಯೋ ಅವ್ವಾ, ಅಯ್ಯೋ...." ಎಂದು ಸಂಗಣ್ಣ ದನಿ ತೆಗೆದು ಅಳತೊಡಗಿದ. "ನನ್ನ ಉಳಿಸಬೇಕಂತ ನೀ ಪ್ರಾಣ ಕೊಟ್ಟೆಯಲ್ಲ ನನ್ನವ್ವಾ! ಅಯ್ಯೋ. ನನ್ನ ಅವ್ವನ್ನ ಗುಂಡುಹಾಕಿ ಕೊಂದರಲ್ಲೋ.... ಈ ಪೋಲೀಸರು... ಈ ಫೌಜುದಾರ.... ಈ ಸರಕಾರ... ನನ್ನ ಅವ್ವ.... ನನ್ನ ಮುದುಕಿ ಅವ್ವ.... ಜ್ವರಾ ಬಂದು ನರಳತಾ ಬಿದ್ದಿದ್ದ ನನ್ನ ಅವ್ವ.... ನನ್ನ ನೋಡಿದಳು... ನೋಡಿ ಕಣ್ಣು ಮುಚ್ಚಿದಳು.... ಇಲ್ಲ.... ಆಕೆ ಸಾಯಲಿಲ್ಲ. ಈ ಫೌಜುದಾರ ಕೊಂದ ಅವ್ವನ್ನ ...... ಗುಂಡು ಹಾಕಿ ಕೊಂದ!"

ಎಲ್ಲವೂ ಮಿಂಚಿನ ಹಾಗೆ ನಡೆದುಹೋಗಿತ್ತು. ಮುದುಕಿ ಅಡ್ಡವಾಗಬಹುದೆಂದು ಫೌಜುದಾರ ಭಾವಿಸಿರಲಿಲ್ಲ. ಯಾರನ್ನಾದರೂ ಹೊಡೆಯಬೇಕೆಂಬ ಉದ್ದೇಶವೂ ಅವರದಾಗಿರಲಿಲ್ಲ. ಅಕಸ್ಮಾತ್ತಾಗಿ ಆಗಬಾರದ ಘಟನೆ ಆಗಿಹೋಗಿತ್ತು. ಅದಕ್ಕಾಗಿ ಅವರಿಗೂ ವಿಷಾದವಾಗದಿರಲಿಲ್ಲ. ಸಂಗಣ್ಣನ ತಂದೆಯನ್ನೂ ಪತ್ನಿಯನ್ನೂ ಬಿಟ್ಟುಬಿಡುವಂತೆ ಪೋಲೀಸರಿಗೆ ತಿಳಿಸಿ, ಸಂಗಣ್ಣನ ಹತ್ತಿರ ಬಂದು "ಏಳು ಸಂಗಣ್ಣಾ, ಆಗಬಾರದ್ದು ಆಗಿಹೋಯ್ತು. ಮಣ್ಣುಗೂಡುವತನಕ ನಿನ್ನ ಬಿಡತೇವಪ್ಪ. ಅಲ್ಲಿಯ ತನಕಾ ಒಯ್ಯುವದಿಲ್ಲ" ಎಂದು ಫೌಜುದಾರರು ಹೇಳುತ್ತಿದ್ದಂತೆಯೆ ಸಂಗಣ್ಣ ಅವರನ್ನು ಕ್ರೂರವಾಗಿ ದೃಷ್ಟಿಸುತ್ತಾ-"ನಡೀರಿ. ಎಲ್ಲಾ ಮುಗಿದs ಹೋಯ್ತು. ಇನ್ನೇನು ಮಣ್ಣು ಕೊಡೂದು, ಮಣ್ಣು!" ಎಂದ.

8

ಬಲಗೈಯ ಬೆರಳುಗಳಿಗೆ ಎಡಗೈಯ ಬೆರಳುಗಳನ್ನು ಹೆಣೆದು ಎರಡು ಕೈಗಳನ್ನೂ ಮೇಲಕ್ಕೆತ್ತಿ ಒಂದು ಸಲ ಆಕಳಿಸಿದಳು ಹೇಮಾ. ಇತ್ತ ವಿಶ್ವನಾಥ ಸೈಕ್ಲೊಸ್ಟೈಲ್ ಯಂತ್ರಕ್ಕೆ ಮಸಿ ಹಚ್ಚುವ ತನ್ನ ಕಾಯಕವನ್ನು ನಿಲ್ಲಿಸಿ, ಪಕ್ಕದಲ್ಲಿ ಬಿದ್ದುಕೊಂಡಿದ್ದ ಕಾಗದದ ತುಂಡಿನಿಂದ ಕೈಗಳನ್ನೊರಸಿಕೊಂಡು ತನ್ನ ಜತೆಗಾತಿಯ ಕಡೆಗೆ ಹೊರಳಿ ನೋಡಿದ. ಕಾಗದ ಹಾಕಿ ಹಾಕಿ, ಯಂತ್ರದ ಮುಚ್ಚಳವನ್ನೆತ್ತಿ ಇಳಿಸಿ ಅವಳ ಕೈಗಳೆರಡೂ ಸೋತುಹೋಗಿದ್ದುವು. ರಾತ್ರಿಯೆಲ್ಲ ನಿದ್ರೆಯಿಲ್ಲದೆ ದುಡಿದುದರಿಂದ ಅವಳ ಕಣ್ಣುಗಳೆರಡೂ ಕೆಂಪಗಾಗಿದ್ದುವು. ಹಲವಾರು ಗಂಟೆಗಳ ಸತತ ಶ್ರಮದಿಂದಾಗಿ ಅವಳ ಮುಖ ಕೆಂಪೇರಿದ್ದಿತು.

ಪೆಟ್ಟಿಗೆಯಲ್ಲಿನ ಕೊನೆಯ ಸಿಗರೇಟನ್ನು ಹೊತ್ತಿಸುತ್ತ ಆತ ಅವಳನ್ನು ಅಕ್ಕರೆಯಿಂದ ನಿಟ್ಟಿಸಿ ನೋಡಿದ. ನೋಡಿದ ಹಾಗೆಲ್ಲ ಅವಳ ಬಗೆಗೆ ಅಭಿಮಾನ ತುಂಬಿ ಬರುತ್ತಿತ್ತು. ಕಳೆದ ತಿಂಗಳು ಬೆಳಗಾವಿಯನ್ನು ಬಿಟ್ಟು ತಮ್ಮ ತಂಡವನ್ನು ಕೂಡಿಕೊಂಡಂದಿನಿಂದ ಎಷ್ಟು ಉತ್ಸಾಹದಿಂದ ದುಡಿಯುತ್ತಿದ್ದಳಾಕೆ! ಕರಪತ್ರಗಳನ್ನು ಹೊರಡಿಸುವುದಕ್ಕಾಗಿಯೆ ಇಲ್ಲಿ ಅಡವಿಯೊಳಗಿನ ಲಂಬಾಣಿಗಳ ತಾಂಡೆಯಲ್ಲಿ ಅವರ ನೆರವಿನಿಂದ ಒಂದು ಗುಡಿಸಲನ್ನು ತೆಗೆದುಕೊಂಡು ಬೀಡುಬಿಟ್ಟಂದಿನಿಂದ ಹೇಮಾ ಹಗಲಿರುಳೂ ಕೆಲಸ ಮಾಡುತ್ತ ಬಂದಿದ್ದಳು. ತಂಡದವರು ದಿನವೂ ನಡೆಸುತ್ತಿದ್ದ ಕಾರ್ಯಕಲಾಪಗಳ ಅದ್ಭುತ ಕತೆಯನ್ನೆಲ್ಲ ಆತ ಬರೆದು ತೆಗೆಯುತ್ತಿದ್ದ. ಅನಂತರ ಪ್ರತಿ ತೆಗೆಯುವ ಕಾರ್ಯ. ದಿನವೂ ಸಾವಿರಾರು ಪ್ರತಿಗಳನ್ನು ತೆಗೆಯಬೇಕಾಗುತ್ತಿತ್ತು. ಕಟ್ಟಿಗೆ ಹೊರೆ ಹೊತ್ತು ಊರೂರು ತಿರುಗುವ ನಂಬಿಕೆಯ ಲಂಬಾಣಿಗಳೊಂದಿಗೆ ಅವುಗಳನ್ನು ಕಳುಹಿಸಿಕೊಡಬೇಕಾಗುತ್ತಿತ್ತು.

ಬಾಳಪ್ಪ, ಸಂಗಣ್ಣ ಸೆರೆಮನೆಗೆ ಹೋದರೂ ಗುಂಪಿನ ಬಲವೇನೂ ಕಡಿಮೆಯಾಗಿರಲಿಲ್ಲ. ದಿನ ಕಳೆದಂತೆಲ್ಲ ಹೊಸ ಹೊಸ ಜನ ಬಂದು ಸೇರಿಕೊಳ್ಳುತ್ತಿದ್ದರು. ಕಲ್ಲಾಪುರದ ಸೀಮೆಯಲ್ಲಿ ಪೋಲೀಸರ ಕಾವಲು ಬಲಗೊಂಡಿದ್ದರಿಂದ ಗುಂಪು ಈಗ ಪಶ್ಚಿಮಕ್ಕೆ ತಿರುಗಿ ಆ ತಾಲೂಕಿನಲ್ಲಿ ಕಾರ್ಯ ಸಾಗಿಸಿದ್ದಿತು. ತಾವು ಆ ಕಡೆಗೆ ಬರುವುದಕ್ಕೆ ಮೊದಲೇ ಅಲ್ಲಿ ಕೆಲಸ ಸಾಗಿಸಿದ್ದ ಹುರುಪಿನ ಬಂಟರನೇಕರು ತಮ್ಮನ್ನು ಕೂಡಿಕೊಂಡಿದ್ದರು. ಒಂದು ತಿಂಗಳಿನ ಅವಧಿಯಲ್ಲಿ ನೂರಾರು ಕಾರ್ಯಗಳನ್ನು ಮಾಡಿ ಮುಗಿಸಲಾಗಿದ್ದಿತು. ಹಳ್ಳಿ ಹಳ್ಳಿಗಳನ್ನು ಸುತ್ತಿ, ಚಾವಡಿಗಳನ್ನು ಸುಟ್ಟು,

ಗೌಡ ಕುಲಕರ್ಣಿಯರ ದಫ್ತರುಗಳನ್ನು ನಾಶಗೊಳಿಸಲಾಗಿದ್ದಿತು. ಅನೇಕ ಕಡೆಗಳಲ್ಲಿ ಕತ್ತಿ ಮೊದಲಾದ ಆಯುಧಗಳನ್ನೂ ಕಸಿದುಕೊಳ್ಳಲಾಗಿದ್ದಿತು. ಅಂಚೆಯ ಕಚೇರಿಗಳನ್ನು ಸುಡಲಾಗಿದ್ದಿತು. ಆಡಳಿತ ಯಂತ್ರವನ್ನು ಸುತ್ತುಕಡೆಯಿಂದಲೂ ಮುರಿದು ಹಾಕಲು ಅಖಂಡ ಹೋರಾಟ ನಡೆದಿತ್ತು.

ಆ ಹೋರಾಟದಲ್ಲಿ ಸಹಾಯಕವಾಗುವ ಹಾಗೆ ತಾವು ಕರಪತ್ರಗಳನ್ನು ಹೊರಡಿಸಬೇಕಾಗಿದ್ದಿತು. ಆಗಸ್ಟ್ ತಿಂಗಳಿನಲ್ಲಿ ಚಳವಳಿಯ ಬಗ್ಗೆ ಜನತೆಯಲ್ಲಿ ಎಂಥಾ ಉತ್ಸಾಹವಿದ್ದಿತೋ ಅದೇ ಕೊನೆಯುವರೆಗೂ ಉಳಿಯುವಂತೆ ಮಾಡಲು ಈ ಬಗೆಯ ಪ್ರಚಾರಕಾರ್ಯ ಅಗತ್ಯವಾಗಿದ್ದಿತು. ನಲವತ್ತು ಐವತ್ತು ಜನರನ್ನೊಳಗೊಂಡ ಆ ಗುಂಪಿನಲ್ಲೆಲ್ಲ ಹೆಚ್ಚಾಗಿ ಓದಿದವರೆಂದರೆ ತಾವಿಬ್ಬರೇ. ಮಿಕ್ಕವರೆಲ್ಲ ಹಳ್ಳಿಯವರು. ಹೊಲದಲ್ಲಿ ದುಡಿಯುವ ರೈತರು. ಅವರ ಉತ್ಸಾಹ ಉಕ್ಕೇರುವಂತೆ ಮಾಡಲು, ಚಳವಳಿಗಾರರಿಗೆ ಜನತೆಯಿಂದ ಸಕಲ ವಿಧದ ಸಹಾಯ ದೊರೆಯುವಂತೆ ಮಾಡಲು ತಾವಿಬ್ಬರೂ ದುಡಿಯಬೇಕಾಗಿತ್ತು. ಪಟ್ಟಣದಲ್ಲಿ ಬೆಳೆದು, ಪುಣೆಯಂಥ ಮಹಾನಗರದಲ್ಲಿ ಕಾಲೇಜಿನಲ್ಲಿ ಕಲಿಯುತ್ತಿದ್ದ ಯುವತಿಯಾದರೂ ಆಕೆಗೆ ಈ ಲಂಬಾಣಿ ತಾಂಡೆಯಲ್ಲಿನ ವಿಲಕ್ಷಣ ಜೀವನ ಕೊಂಚವೂ ಬೇಸರವನ್ನುಂಟುಮಾಡಲಿಲ್ಲ. ಅದರ ಮುಖಂಡನಾದ ಭೀಮಸಿಂಗನೂ ಶೇಖರನ ಗುಂಪಿನವರಲ್ಲೊಬ್ಬನಾಗಿದ್ದು ಅವರಿಗೆ ಎಲ್ಲ ರೀತಿಯಲ್ಲೂ ನೆರವಾಗುತ್ತಿದ್ದರಿಂದ ಅಲ್ಲಿ ಕರಪತ್ರದ ಕಚೇರಿಯನ್ನೇರ್ಪಡಿಸಲೂ ಅನುಕೂಲವಾಗಿದ್ದಿತು. ಅವನ ಹೇಳಿಕೆಯ ಮೇರೆಗೆ ಆಕೆಯು ಲಂಬಾಣಿ ಹೆಂಗಸರಂಥ ವೇಷವನ್ನೇ ಧರಿಸಬೇಕಾಗಿ ಬಂದಿತ್ತು. ಬಣ್ಣಬಣ್ಣಗಳ ಬಟ್ಟೆಗಳಿಂದ ಸಿದ್ಧವಾದ ಆ ನಿಲುವಂಗಿ! ಅಗಲವಾದ ದಂತದ ಕೈಬಳೆ! ತಮ್ಮ ವೇಷಧಾರಣೆ ಮಾಡುವ ಈ ಸುಶಿಕ್ಷಿತ ಯುವತಿಯ ಬಗ್ಗೆ ಲಂಬಾಣಿ ಹೆಂಗಸರಿಗೆಲ್ಲ ಆತ್ಮೀಯತೆ ಹೆಚ್ಚಿತು.

ಅಡವಿಯಲ್ಲಿ ವಾಸಿಸುವ ಆ ಲಂಬಾಣಿಗಳೊಂದಿಗೆ ಹೇಮಾವತಿ ಅಷ್ಟು ಬೇಗ ಬೆರೆತು ಹೋದುದು ವಿಶ್ವನಾಥನಿಗೆ ಆಶ್ಚರ್ಯವನ್ನುಂಟುಮಾಡದಿರಲಿಲ್ಲ. ಮೊದಲಿನಿಂದಲೂ ಆಕೆಯ ಬಗ್ಗೆ ಅವನಿಗಿದ್ದ ಅಭಿಮಾನ ಒಂದು ತಿಂಗಳಿನ ಸತತ ಸಹವಾಸದಿಂದ ಗಾಢವಾದ ವಿಶ್ವಾಸಕ್ಕೆ ತಿರುಗಿದ್ದಿತು.

ಸಿಗರೇಟಿನ ಹೊಗೆಯನ್ನುಗುಳುತ್ತ ಆತ ಗುಡಿಸಲಿನ ಹುಲ್ಲಿನ ಗೋಡೆಗೊರಗಿ ಕುಳಿತುಕೊಂಡ. ತನ್ನಂತೆಯೇ ದಣಿದಿದ್ದಳು ಹೇಮಾ.

"ನಿದ್ದೆ ಬಂತೇ ಹೇಮಾ?" ಎಂದನಾತ, ಪ್ರೀತಿಯಿಂದ ಅವಳ ಮುಖವನ್ನು ನಿಟ್ಟಿಸುತ್ತ.

ತುಂಬ ದಣಿವಾಗಿದ್ದರೂ ಅವಳ ಮುಖದ ಮೇಲಿನ ಮೋಹಕ ನಗೆ ಮಾಸಿರಲಿಲ್ಲ. "ನಿನಗೆ ಬಂದಿಲ್ಲವೇ?" ಎಂದು ಕೇಳಿದಳು.

ಪಕ್ಕದಲ್ಲಿದ್ದ ಟ್ರಂಕಿನ ಮೇಲಿಟ್ಟ ಗಡಿಯಾರದಲ್ಲಿ ಗಂಟೆಯ ಮುಳ್ಳು ಮೂರರ ಅಂಕಿಯನ್ನು ದಾಟಿ ಹೋಗಿತ್ತು. ವಿಶ್ವನಾಥ ಆ ಸೈಕ್ಲೋಸ್ಟೈಲ್ ಯಂತ್ರವನ್ನು ಬದಿಗೆ ಇಟ್ಟು ತನ್ನ ಗುಡಿಸಲಿಗೆ ಬಂದು ಹಾಸಿಗೆಯ ಮೇಲೆ ಶರೀರವನ್ನು ಒರಗಿಸಿದ.

ಕಣ್ಣು ಮುಚ್ಚಿದ್ದರೂ ಕಣ್ಣ ಬೊಂಬೆಗಳೆದುರಿಗೆ ಹೇಮಾವತಿಯ ಮುಖವೇ ಮೂಡಿದಂತಾಗುತ್ತಿತ್ತು. ಅವಳ ಇನಿದನಿ ಮತ್ತೆ ಮತ್ತೆ ಕಿವಿಗಳಿಗೆ ಬಿದ್ದಂತೆ ಭಾಸವಾಗುತ್ತಿತ್ತು. ತಾವಿಬ್ಬರೂ ಕೂಡಿ ಕಳೆದ ಈ ಒಂದು ತಿಂಗಳಿನ ಅವಧಿಯಲ್ಲಿ ಅವಳ ಬಗ್ಗೆ ಅವನಲ್ಲಿ ಗಾಢ ಅನುರಾಗ ಬೆಳೆದುಬಿಟ್ಟಿತ್ತು. ತನ್ನ ಹಾಗೇ ಅವಳಲ್ಲಿಯೂ ತನ್ನ ಬಗ್ಗೆ ಅನುರಾಗ ಹುಟ್ಟಿರಬಹುದೇ ಎಂದು ಆತ ಯೋಚಿಸಿ ಯೋಚಿಸಿ ಬಳಲಿದ ದಿನಗಳೂ ಇದ್ದುವು. ಹೇಮಾ ಅವನೊಂದಿಗೆ ತುಂಬ ಸಲುಗೆಯಿಂದ ವರ್ತಿಸುವಳು. ಪರಸ್ಪರರನ್ನು ಸಂಬೋಧಿಸುವಾಗ ಏಕವಚನವನ್ನುಪಯೋಗಿಸುವುದಂತೂ ಎಂದೋ ಆರಂಭವಾಗಿಹೋಗಿತ್ತು. ಯಾವ ಬಗೆಯ ಸಂಕೋಚಕ್ಕೂ ಆಸ್ಪದ ಕೊಡದೆ ಆಕೆ ಅವನೊಂದಿಗೆ ಮುಕ್ತವಾಗಿ ವರ್ತಿಸುತ್ತಿದ್ದಳು. ಎಂಟು ದಿನಗಳಿಗೆ ಹಿಂದೆ ತಮ್ಮಿಬ್ಬರಲ್ಲಿ ಆ ಬಗ್ಗೆ ನಡೆದ ಮಾತುಕತೆಯೆಲ್ಲ ಮತ್ತೆ ಅವನಿಗೆ ನೆನಪಾಯಿತು.

ರಾತ್ರಿ ಹನ್ನೊಂದು ಹನ್ನೊಂದೂವರೆ ಗಂಟೆ ಆಗಿರಬಹುದು ಆಗ. ಇಬ್ಬರೂ ಸುಮಾರು ಎರಡು ನೂರು ಕರಪತ್ರಗಳನ್ನು ಅಚ್ಚುಮಾಡಿ ಮುಗಿಸಿ ಆಗಿತ್ತು. ಅಕಸ್ಮಾತ್ತಾಗಿ ತಾನು ಪ್ರಶ್ನೆ ಮಾಡಿದ್ದ:

"ನಿನಗೆ ವಯಸ್ಸೆಷ್ಟು ಹೇಮಾ, ಈಗ?"

ಆ ಪ್ರಶ್ನೆಯಿಂದ ಆಕೆಗೆ ನಗು ಬಂದುಬಿಟ್ಟಿತ್ತು. ಆಕೆ ತುಂಟತನದಿಂದ ನಗುತ್ತಾ - "ಯಾಕೆ? ಸಿನಿಮಾ ನಟಿಯರಿಗೆ ಕೇಳುವ ಹಾಗೆ ಕೇಳ್ತೀಯಲ್ಲ? ನನ್ನ ವಯಸ್ಸು ತಗೊಂಡೇನು ಮಾಡ್ತೀ ನೀನು?" ಎಂದಿದ್ದಳು.

"ಏನಿಲ್ಲ. ಸುಮ್ಮನೆ ಕೇಳಿದೆ."

"ಇರಬಹುದು. ಹದಿನೆಂಟು ಆಗಿರಬಹುದು."

"ಈ ವಯಸ್ಸಿನಾಗ ಇಂಥಾ ಜಾಗದೊಳಗ, ಇಂಥಾ ರಾತ್ರಿಯೊಳಗ ನನ್ನಂಥ ತರುಣನ ಸಂಗಡ ಕೆಲಸ ಮಾಡ್ತಾ ಇರುವಾಗ ನಿನಗೆ ಏನೂ ಅನ್ನಿಸುವುದಿಲ್ಲೇನು?"ಎಂದು ಹೆದರುತ್ತಲೇ ಕೇಳಿದ್ದ.

ಅವಳ ಮುಖದಲ್ಲಿ ನಗೆ ಕ್ಷಣಕಾಲ ಮಾಯವಾಗಿ ಅದರ ಸ್ಥಳವನ್ನು ಗಾಂಭೀರ್ಯ ಆಕ್ರಮಿಸಿಕೊಂಡಂತೆ ತೋರಿಬಂದಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದು ಆಕೆ ನುಡಿದಳು.

"ನೀ ಕೇಳೂದು ನನಗರ್ಥ ಆಯ್ತು, ವಿಶ್ವನಾಥ. ಆದರೆ ನನ್ನ ವಯಸ್ಸಿನ ಬೇರೆ ಹುಡುಗಿಯರಿಗೂ ನನಗೂ ಇರುವ ಭೇದವನ್ನು ನೀ ಮರೀಬಾರದು. ನನ್ನ ಮಟ್ಟಿಗೆ ಹೇಳಬೇಕಾದರ,ಈ ಚಳವಳಿಯೊಳಗ ಇರೂತನಕ ನಾ ಹೆಣ್ಣು ಅನ್ನೂದನ್ನೇ ಮರೆತು ಇರ್ತೀನಿ. ಈಗ ನನ್ನ ಕಣ್ಣಿಗೆ ನೀನು ಬರೀ ಗಂಡಸಲ್ಲ, ನಾನು ಬರೀ ಹೆಂಗಸಲ್ಲ. ಈಗ ನಡದಿರೋದು ಯುದ್ಧ. ಈ ಯುದ್ಧದಾಗ ಭಾಗವಹಿಸಿದವರು ನಾವಿಬ್ಬರು ಸೈನಿಕರು. ಅಷ್ಟೇ. ಅರ್ಥ ಆಯ್ತೋ ಇಲ್ಲೋ ನಿನಗೆ?"

9

ಶೇಖರನ ಗುಂಪಿಗೆ ಹೊಸದಾಗಿ ಸೇರಿದ ಹುರುಪಿನ ಯುವಕರಲ್ಲಿ ಬಸವಣ್ಣೆಪ್ಪನೂ ಒಬ್ಬ. ಆತನಿಗೆ ಸುಮಾರು 30ರ ವಯಸ್ಸಿರಬಹುದು. ಹಳ್ಳಿಯೂರಿನಲ್ಲಿ ಬೇಸಾಯ ಮಾಡುತ್ತ ಜೀವನ ಸಾಗಿಸುತ್ತಿದ್ದವ ಚಳವಳಿಗಳಲ್ಲೂ ಭಾಗವಹಿಸುತ್ತಿದ್ದು ಮೂರು ಸಲ ಸೆರೆಮನೆಯನ್ನೂ ಕಂಡುಬಂದಿದ್ದ. ಕಾಂಗ್ರೆಸ್ಸಿನ ಶಿಸ್ತಿಗೊಳಪಟ್ಟು ಸತ್ಯಾಗ್ರಹ ಮಾಡಿ ಕಾರಾಗೃಹಕ್ಕೆ ಹೋಗುತ್ತಿದ್ದನಾದರೂ ಅವನಿಗೆ ಆ ವಿಷಯದಲ್ಲಿ ಅಂಥ ಆಸಕ್ತಿಯೇನೂ ಇರಲಿಲ್ಲ. ಬರೀ ಸೆರೆಮನೆಗೆ ಹೋಗುವುದರಿಂದ ಯಾವ ಮಹಾ ಕಾರ್ಯವನ್ನು ಸಾಧಿಸಿದಂತಾಯಿತೆಂದು ಆತ ವಾದಿಸುತ್ತಿದ್ದ. ಸರಕಾರದ ಆಡಳಿತ ಯಂತ್ರವನ್ನು ಮುರಿದುಹಾಕದೆ ಕೇವಲ ಜೈಲುಗಳನ್ನು ತುಂಬುವುದರಿಂದ ಸ್ವಾತಂತ್ರ್ಯ ಬರುವುದಸಾಧ್ಯವೆಂದು ಅವನ ಭಾವನೆಯಾಗಿದ್ದಿತು. ಅಂತೆಯೆ, 'ಚಲೇ ಜಾವ್' ಚಳವಳಿಯ ಕಹಳೆ ಮೊಳಗುತ್ತಲೇ ಆತ ಅತ್ಯುತ್ಸಾಹದಿಂದ ಹೋರಾಟಕ್ಕೆ ಧುಮುಕಿದ್ದ. ತಮ್ಮೂರಿನ ಹಾಗೂ ಸುತ್ತುಮುತ್ತಲಿನ ಹಳ್ಳಿಯ ಇಪ್ಪತ್ತು ಇಪ್ಪತ್ತೈದು ಬಂಟರನ್ನು ಕೂಡಿಸಿಕೊಂಡು ಸುತ್ತುಮುತ್ತಲಿನ ಪ್ರದೇಶದಲ್ಲಿ ಸರಕಾರದ ವಿರುದ್ಧ ಬಂಡು ಹೂಡಿದ್ದ. ಶೇಖರನಿಗೂ ಅವನಿಗೂ

ಮೊದಲಿನಿಂದಲೂ ಗೆಳೆತನವಿದ್ದಿತು. ಕಲ್ಲಾಪುರದಿಂದ ಶೇಖರನ ಗುಂಪಿನವರು ತಮ್ಮ ಊರಿಗೆ ಬಂದಾಗ ಎಲ್ಲರೂ ಕೂಡಿ ಪ್ರಬಲವಾದ ಸೇನೆಯೊಂದನ್ನು ಕಟ್ಟಿ ಸುಸಂಘಟಿತ ರೀತಿಯಲ್ಲಿ ಕೆಲಸ ಮಾಡಬೇಕೆಂದು ನಿರ್ಧರಿಸಿದ್ದ. ಅದರಂತೆಯೆ ಈಗ ಬಸವಣ್ಣೆಪ್ಪನ ಹಳ್ಳಿಯೇ ಆ ಸಂಯುಕ್ತ ಪಡೆಯ ಕೇಂದ್ರಸ್ಥಳವಾಗಿದ್ದಿತು.

ಹಳ್ಳಿಯಿಂದ ತುಸು ದೂರದಲ್ಲಿದ್ದ ತೋಟವೊಂದರಲ್ಲಿ ದೊಡ್ಡದೊಂದು ಗುಡಿಸಲಿನಲ್ಲಿ ಗುಂಪಿನವರ ಬಿಡಾರಕ್ಕೇರ್ಪಾಟಾಗಿದ್ದಿತು. ಗುಂಪಿನ ಆಯುಧಗಳನ್ನು, ಇನ್ನಿತರ ಸಾಮಗ್ರಿಗಳನ್ನು ಅಲ್ಲಿಯೇ ಇಡಲಾಗಿತ್ತು. ಅವುಗಳನ್ನು ಕಾಯುವುದಕ್ಕಾಗಿ ಪಹರೆಯವರನ್ನೂ ನಿಯಮಿಸಲಾಗಿದ್ದಿತು.

ಬೆಳಗಿನ ಹತ್ತು ಗಂಟೆಯಾಗುತ್ತ ಬಂದಿತ್ತು. ಮುನ್ನಾದಿನದ ರಾತ್ರಿ ಒಂದು ಕೆಲಸ ತೀರಿಸಿ ಬಂದಿದ್ದರಾದುದರಿಂದ ಗುಂಪಿನವರಾರಿಗೂ ನಿದ್ರೆಯಿರಲಿಲ್ಲ. ಬೆಳಗಿನ ಜಾವದಲ್ಲಿ ಬಂದು ಮಲಗಿಕೊಂಡಿದ್ದ ಶೇಖರನಿಗೆ ಆಗ ತಾನೆ ಎಚ್ಚರವಾಗಿದ್ದಿತು. ಬಸವಣ್ಣೆಪ್ಪ ಹಾಗೂ ಇತರರು ಗುಡಿಸಲಿಗೆ ಬಂದು ಸೇರಿದ ಮೇಲೆ ಅಂದಿನ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಯಿತು.

"ಮೂರು ಗಂಟೆಗೆ ಸರಿಯಾಗಿ ನಾವಲ್ಲಿ ಇರಬೇಕು ಬಸವಣ್ಣೆಪ್ಪ. ಸ್ವಲ್ಪನೂ ಹೆಚ್ಚು ಕಡಮೆ ಆಗಬಾರದು. ಎರಡು ಗಂಟೆಗೆಲ್ಲಾ ಇಲ್ಲಿಂದ ಎಲ್ಲರೂ ಹೊರಟುಬಿಡಬೇಕು. ಮೂರೂವರೆಗೆ ಮಿಲಿಟರಿ ಬಸ್ಸು ಬರುತ್ತೈತಿ ಅಲ್ಲಿಗೆ. ಅಷ್ಟರೊಳಗಾಗಿ ನಾವು ಎರಡೂವರೆ ಮೈಲು ದೂರ ಬಂದಿರಬೇಕು" ಎಂದ ಶೇಖರ.

"ಎಲ್ಲಾ ವ್ಯವಸ್ಥಾ ಮಾಡಿದ್ದೀನಿ ಶೇಖರಪ್ಪ. ಏನೂ ಚಿಂತೀ ಮಾಡಬ್ಯಾಡ."

"ನಮ್ಮ ಕಾರ್ಯಕ್ರಮದೊಳಗೆಲ್ಲಾ ಇವತ್ತಿಂದು ಬಹಳ ದೊಡ್ಡ ಕೆಲಸ. ಬಹಳ ಗಂಡಾಂತರದ ಕೆಲಸ. ನಮ್ಮವರಾರಿಗೂ ಒಂದು ಕೂದಲೂ ಕೊಂಕದ ಹಾಂಗ ಅದನ್ನ ನಾವು ಸಾಧಿಸಬೇಕು. ಝಟ್‌ಪಟ್ ಅಂತ ಮುಗಿದು ಹೋಗಬೇಕು. ಮುಖ್ಯ ಅಂದ್ರ ಹಿಂಸೆಗೆ ಅವಕಾಶವಿಲ್ಲದ ಹಾಂಗ ಕೆಲಸ ನಡೀಬೇಕು. ಇದs ಬಹಳ ಕಷ್ಟ..." ಎಂದ ಶೇಖರಪ್ಪ.

ಅದು ಜನವರಿ ತಿಂಗಳ ಒಂದು ದಿನ. ಹಳ್ಳಿಗರಿಂದ ಸರಕಾರ ಕಂದಾಯ ವಸೂಲು ಮಾಡುವ ಕಾಲ. ಸುತ್ತುಮುತ್ತಲಿನ ಇಪ್ಪತ್ತೇಳು ಹಳ್ಳಿಗರ ಕಂದಾಯವನ್ನೆಲ್ಲ ಆ ಕೇಂದ್ರದ ಮೂಲಕ ವಸೂಲು

ಮಾಡಲಾಗುತ್ತಿದ್ದಿತು. ಹಳ್ಳಿಗಳ ಗೌಡ ಕುಲಕರ್ಣಿಯವರೆಲ್ಲ ಅಲ್ಲಿ ದಿನವೂ ಒಟ್ಟುಗೂಡುವವರು. ಬೇರೆ ಬೇರೆ ರೈತರು ಬಂದು ಅಲ್ಲಿ ತಮ್ಮ ಕಂದಾಯವನ್ನೊಪ್ಪಿಸಿ ಹೋಗುವವರು. ಬಸವಣ್ಣೆಪ್ಪನ ಹಳ್ಳಿಯಿಂದ ನಾಲ್ಕು ಮೈಲು ದೂರದಲ್ಲಿದ್ದ ಆ ಹಳ್ಳಿಯ ಚಾವಡಿಗೆ ದೊಡ್ಡದೊಂದು ಕಚೇರಿಯ ಸ್ವರೂಪ ಬಂದಿದ್ದಿತು. ಆರು ಜನ ಬಂದೂಕುಧಾರಿ ಪೋಲೀಸರು ಯಾವಾಗಲೂ ಅಲ್ಲಿ ಕಾವಲು ನಡೆಸುತ್ತಿದ್ದರು. ದಿನವೂ ವಸೂಲಾದ ಹಣವನ್ನೆಲ್ಲ ತೆಗೆದುಕೊಂಡು ಬೆಳಗಾವಿಗೆ ಸಾಗಿಸಲು ಮಿಲಿಟರಿ ಬಸ್ಸೊಂದು ಬರುತ್ತಿತ್ತು-ಮಧ್ಯಾಹ್ನ ಮೂರುವರೆ ಗಂಟೆಗೆ.

ಆ ಕಂದಾಯದ ಕೇಂದ್ರವನ್ನು ಮುತ್ತಿ ಅಲ್ಲಿನ ಹಣವನ್ನು ಅಪಹರಿಸಬೇಕೆಂದು ಶೇಖರನ ಗುಂಪು ಯೋಚನೆ ಹೂಡಿತ್ತು. ಹತ್ತು ಹದಿನೈದು ದಿನಗಳಿಗೆ ಮೊದಲೇ ಆ ಬಗೆಗೆ ಅವಶ್ಯವಿರುವ ವಿವರಗಳೆಲ್ಲವನ್ನು ಸಂಗ್ರಹಿಸಲಾಗಿದ್ದಿತು. ಅಲ್ಲಿ ಕಾವಲು ನಡೆಸುವ ಪೋಲೀಸರು, ಒಳಗಡೆ ವಿರಮಿಸುವ ಪೋಲೀಸರು,ಚಾವಡಿಯಲ್ಲಿ ಗೌಡ ಕುಲಕರ್ಣಿಯರು ಕುಳಿತುಕೊಳ್ಳುತ್ತಿದ್ದ ಪದ್ಧತಿ, ಹಣ ಒಯ್ಯಲು ಮೋಟಾರು ಬರುವ ಸಮಯ, ಹೊರಡುವ ಸಮಯ, ಅದರಲ್ಲಿ ಕಾವಲಿಗಿರುವ ಸೈನಿಕರ ಸಂಖ್ಯೆ ಮುಂತಾದ ವಿವರಗಳನ್ನೆಲ್ಲ ತಿಳಿದುಕೊಳ್ಳಲಾಗಿದ್ದಿತು. ಚಳವಳಿಗೆ ಅನುಕೂಲವಾಗಿದ್ದ ಕೆಲವು ಗೌಡ ಕುಲಕರ್ಣಿಯವರನ್ನು ಉಪಾಯವಾಗಿ ಒಲಿಸಿಕೊಂಡು ದಾಳಿ ನಡೆದಾಗ ಗಲಭೆ ಮಾಡದೆ ಸುಮ್ಮನಿರಲು ಸೂಚಿಸಲಾಗಿದ್ದಿತು. ಕಣ್ಣು ಮುಚ್ಚಿ ಕಣ್ಣು ತೆರೆಯುವುದರೊಳಗಾಗಿ ಎಲ್ಲವೂ ನಡೆದು ಹೋಗಬೇಕಾಗಿದ್ದಿತು.

ಅದೇ ದಿನ ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಶೇಖರಪ್ಪನೂ ಶಂಕರಪ್ಪ ಮಾಸ್ತರರೂ ತಮ್ಮ ಕೆಲವರು ಜೊತೆಗಾರರೊಂದಿಗೆ ಲಂಬಾಣಿ ತಾಂಡೆಗೆ ಬಂದರು. ಎಲ್ಲರೂ ಏನೋ ಒಂದು ಅವಸರದಲ್ಲಿದ್ದ ಹಾಗೆ ತೋರುತ್ತಿದ್ದಿತು. ವಿಶ್ವನಾಥನಿಗೆ ಆ ಅವಸರ ಅರ್ಥವಾಗಲಿಲ್ಲ.

"ಏನಾಯ್ತು ಶೇಖರಣ್ಣಾ? ಪೋಲೀಸರು ಹಿಂಬಾಲಿಸುತ್ತಿದ್ದಾರೋ ಏನು?" ಎಂದು ಕೇಳಿದ.

"ಇಲ್ಲ. ಈಗಂತೂ ನಮ್ಮ ಹಿಂದೆ ಇಲ್ಲ ಅವರು. ಆದರೂ ಯಾವಾಗ ನಾವು ಅವರ ಕೈಗೆ ಸಿಗುವೆವೋ ಅನ್ನುವ ನಿಯಮ ಇಲ್ಲ. ಅದಕ್ಕೇ ಬಸವಣ್ಣೆಪ್ಪನ ಹಳ್ಳಿಯನ್ನು ಬಿಟ್ಟು ಹೊರಟದ್ದು. ಈ ರಾತ್ರಿಯೆಲ್ಲ

ನಡೆದು ಕಲ್ಲಾಪುರಕ್ಕ ಹೋಗಬೇಕು."

ಗೊತ್ತುಮಾಡಿದ ಹೊತ್ತಿಗೆ ಸರಿಯಾಗಿ-ಎಂದರೆ ಮಧ್ಯಾಹ್ನ ಮೂರು ಗಂಟೆಗೆ ಶೇಖರನ ಗುಂಪಿನ ಹನ್ನೆರಡು ಜನ ಸೈನಿಕರು ಹಳ್ಳಿಯ ರೈತರಂಥ ವೇಷದಲ್ಲಿಯೆ ಕೇಂದ್ರದ ಹತ್ತಿರ ಬಂದರು. ಮೋಟಾರು ಬರುವ ಸಮಯ ಸಮೀಪಿಸಿತ್ತು. ವಸೂಲಾದ ಕಂದಾಯದ ಹಣವನ್ನೆಲ್ಲ ಒಟ್ಟುಗೂಡಿಸಿ ಲೆಕ್ಕಮಾಡುವ ಕೆಲಸ ನಡೆದಿದ್ದಿತು. ಆಗಾಗ ಒಬ್ಬಿಬ್ಬರು ಹಳ್ಳಿಗರು ಚಾವಡಿಯೊಳಕ್ಕೆ ಹೋಗಿ ತಮ್ಮ ಕಂದಾಯ ಸಲ್ಲಿಸಿ ಬರುವುದೂ ನಡೆದಿದ್ದಿತು.

ಚಾವಡಿಯ ಕಟ್ಟೆಯ ಮೇಲೆ ಇಬ್ಬರು ಪೋಲೀಸರು ಬಂದೂಕುಗಳನ್ನು ಹಿಡಿದು ನಿಂತುಕೊಂಡಿದ್ದರು. ಇನ್ನುಳಿದ ನಾಲ್ವರು ತಮ್ಮ ಬಂದೂಕುಗಳನ್ನು ಕೂಡಿಸಿ ಇಟ್ಟು ಗೋಡೆಗೊರಗಿ ವಿರಮಿಸುತ್ತಿದ್ದರು. ಉದ್ದವಾದ ಚಾವಡಿಯ ಗೋಡೆಗುಂಟ ಗೌಡ ಕುಲಕರ್ಣಿಯರು ಕುಳಿತು ಹಣ ವಸೂಲು ಮಾಡುವ ಕೆಲಸ ಸಾಗಿಸಿದ್ದರು.

ಮೊದಲೇ ಗೊತ್ತಾದಂತೆ ಶೇಖರಪ್ಪ ಮತ್ತು ಬಸವಣ್ಣೆಪ್ಪ ಇಬ್ಬರನ್ನುಳಿದು ಮಿಕ್ಕವರೆಲ್ಲ ಒಬ್ಬೊಬ್ಬರಾಗಿ ಚಾವಡಿಯನ್ನು ಸೇರಿದರು. ಅದುವರೆಗೂ ದೂರ ನಿಂತುಕೊಂಡಿದ್ದ ಶೇಖರ, ಬಸವಣ್ಣೆಪ್ಪ ಇಬ್ಬರೂ ಒಡನೆಯೆ ಬಂದು



ಕಟ್ಟೆಯನ್ನೇರಿದರು. ತಾನು ಕಂಬಳಿಯಲ್ಲಿ ಮರೆಮಾಡಿಕೊಂಡಿದ್ದ ಕೈಬಾಂಬನ್ನು ಹಠಾತ್ತಾಗಿ ನೆಲಕ್ಕೆಸೆದ ಶೇಖರಪ್ಪ. ಕಾವಲು ನಡೆಸುತ್ತಿದ್ದ ಪೋಲೀಸರಿಬ್ಬರೂ ಹೌಹಾರಿ ಸ್ಥಂಭೀಭೂತರಂತೆ ನಿಂತಿದ್ದ ಹಾಗೇ ಅವರನ್ನು ಹಿಡಿದು ಅವರ ಬಂದೂಕುಗಳನ್ನು ಕಸಿದುಕೊಳ್ಳಲಾಯಿತು. ಅದೇ ಸಮಯದಲ್ಲಿ ಒಳಗಡೆ ಇದ್ದ ಗುಂಪಿನ ಜನರು ಪಿಸ್ತೂಲುಗಳನ್ನು ಕೈಯಲ್ಲಿ ಹಿಡಿದು, ಒಳಗಿದ್ದ ಪೋಲೀಸರನ್ನು ಸುಮ್ಮನಾಗಿಸಿ ಅವರ ಬಂದೂಕುಗಳನ್ನು ಕಿತ್ತುಕೊಂಡರು. ಒಂದೆರಡು ನಿಮಿಷಗಳೊಳಗಾಗಿ ಕೈಗೆ ಸಿಕ್ಕಿದ ಹಣವನ್ನೆಲ್ಲ ಲೂಟಿಮಾಡಿದ್ದೂ ಆಯಿತು. ಆ ಗೊಂದಲದಲ್ಲಿ ಕೆಲವರು ಗೌಡ ಕುಲಕರ್ಣಿಯರು ತಮ್ಮ ಹತ್ತಿರ ಇದ್ದ ಕಂದಾಯದ ಹಣವನ್ನು ತಮ್ಮ ಜೇಬಿಗೇ ಬಿಟ್ಟು ಕೂಗಿಕೊಳ್ಳುತ್ತ ಓಡಿಹೋದರು. ಕೆಲಸವನ್ನು ಕೊನೆಗಾಣಿಸಿ ಗುಂಪಿನ ಜನರೂ ಒಂದೆರಡು ನಿಮಿಷಗಳಲ್ಲಿ ಅಲ್ಲಿಂದ ಮಾಯವಾದರು. ಪೋಲೀಸರು ಏನನ್ನೂ ಮಾಡಲಾರದೆ ಕೈಕೈ ಹಿಸುಕಿಕೊಳ್ಳುತ್ತ ನಿಂತಿದ್ದರು.

ಅವರು ಹೊರಟುಹೋಗಿ ಹದಿನೈದು ನಿಮಿಷಗಳಾದ ಮೇಲೆ ಮಿಲಿಟರಿ ಮೋಟಾರು ಅಲ್ಲಿಗೆ ಬಂದಿತು. ಲೂಟಿಯಾದ ಸಮಾಚಾರ ಗೊತ್ತಾಗುತ್ತಲೇ ಇನ್ನು ತಮ್ಮ ಮೇಲೆ ಎಲ್ಲಿ ದಾಳಿಯಾಗುವುದೋ ಎಂದು ಹೆದರಿದರು! ಆ ಸೈನಿಕರೂ ಮೋಟಾರನ್ನು ವಾಯುವೇಗದಿಂದ ಓಡಿಸಿಕೊಂಡು ಬೆಳಗಾವಿಗೆ ಹೊರಟು ಹೋದರು.

10

ಒಂದೆರಡು ಗಂಟೆಗಳ ಕಾಲ ಅವರು ಬೇರೆ ಬೇರೆ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರು. ಕರಪತ್ರಗಳಿಗೆ ಅಗತ್ಯವಿದ್ದ ವಿವರಗಳೂ ದೊರೆತವು. ಕಬ್ಬಿನ ಹಾಲು, ಕಬ್ಬಿನ ಹೊರೆ ಹೊತ್ತುಕೊಂಡು ಸ್ಟೇಶನ್ನಿಗೆ ಹೋಗಿ, ಅಲ್ಲಿ ಕಾವಲಿದ್ದ ಪೋಲೀಸರಿಗೆ ಆಸೆ ತೋರಿಸಿ ಅವರು ಕಬ್ಬು ತಿನ್ನುತ್ತಿದ್ದಾಗ ಅವರ ಬಂದೂಕುಗಳನ್ನೆತ್ತಿಕೊಂಡು, ಸೀಮೆಯೆಣ್ಣೆಯನ್ನು ಉಗ್ಗಿ ಸ್ಟೇಶನ್ನಿಗೆ ಬೆಂಕಿ ಹಚ್ಚಲ್ಪಟ್ಟ ಅದ್ಭುತ ಕತೆಯೂ ತಿಳಿದುಬಂದಿತು.

"ಸ್ಟೇಶನ್ನಿನೊಳಗ ಯಾರನ್ನೂ ಬಿಡೂದಿಲ್ಲವಲ್ಲ ಈಗ? ಗುಂಪಿನವರನ್ನ ಹ್ಯಾಗೆ ಬಿಟ್ಟರು?" ಎಂದಳು ಹೇಮಾ.

"ಗಾಡಿ ಬರುವ ವೇಳೆಗೆ ಹೋದರೆ ಬಿಡ್ತಾರೆ. ಅದರೊಳಗ ಕಬ್ಬು ಮಾರುವ ಜನ ಅಂದರ ಸಂಶಯ ಇರುವುದಿಲ್ಲ. ಪೋಲೀಸರಿಗೆ ಕಬ್ಬಿನ

ಆಸೆ. ಗಾಡಿ ಬರುವುದರೊಳಗಾಗಿ ಕೆಲಸ ತೀರಿಸಿ ಎಲ್ಲರೂ ಪರಾರಿ!"

"ಎಷ್ಟು ಮಂದಿ ಹೋಗಿದ್ದರು ಆ ಕೆಲಸಕ್ಕೆ?"

"ಇಪ್ಪತ್ತು ಮಂದಿ."

"ಎಷ್ಟು ಗಂಟೆಗೆ?"

"ಮಧ್ಯಾಹ್ನ ಮೂರಕ್ಕೆ."

"ಅಂದರೆ? ಎರಡೂ ಕೆಲಸ ಒಂದೇ ಹೊತ್ತಿಗೆ ಆದುವೋ ಏನು?"

"ಹೌದು. ಒಂದು ತಂಡದವರು ಈ ಕೆಲಸ, ಇನ್ನೊಂದು ತಂಡದವರು ಆ ಕೆಲಸ ಹಂಚಿಕೊಂಡಿದ್ದರು."

"ಇನ್ನುಮ್ಯಾಲ ಪೋಲೀಸರ ಬಂದೋಬಸ್ತಿ ಬಹಳ ಆಗಬಹುದು ಹಾಗಾದರೆ."

"ಹೌದು, ಸತಾರಾ ಕಡೆಯಿಂದ ಸ್ಪೆಶಲ್ ಪೋಲೀಸರನ್ನ ಕರೆಸಿದ್ದಾರಂತೆ."

"ಅಂತೂ ನಾಳಿನ ನಮ್ಮ ಕರಪತ್ರಕ್ಕೆ ಎರಡು ಅದ್ಭುತ ಕತೆ ಸಿಕ್ಕ ಹಾಗಾಯ್ತು!" ಎಂದು ಹೇಮಾ ಅಭಿಮಾನ ಬೆರೆತ ದನಿಯಲ್ಲಿ ಹೇಳಿದಳು.

ಶೇಖರ ಹೇಳಿದ:

"ಇನ್ನ ಎರಡು-ಮೂರು ದಿನಕ್ಕ ನಾನು ಕೊಲ್ಲಾಪುರ ಹೋಗ ಬೇಕಾಗೈತಿ."

"ಕೊಲ್ಲಾಪುರಕ್ಕೆ ಯಾಕೆ?" ಹೇಮಾ ಕೇಳಿದಳು,

"ನಾಳಿನ ಕರಪತ್ರದೊಳಗ ಹಾಕಲ್ಲ ಅಂತ ಮಾತುಕೊಟ್ಟರ ಹೇಳ್ತೀನಿ" ಎಂದು ಶೇಖರ ನಗುತ್ತ ನುಡಿದ.

"ಓ. ಅಂಥಾ ಗುಟ್ಟೇನು?"

"ಹೌದು.ಕರ್ನಾಟಕದ ಎಲ್ಲ ಕಾರ್ಯಕರ್ತರ ಗುಪ್ತ ಸಭಾ ಕೂಡ್ತೈತಿ."

"ಗುಟ್ಟಾಗಿಡಬೇಕಾದ ವಿಷಯವೇ ಅದು. ನಮ್ಮ ಅಪ್ಪ ಬರ್ತಾರೇನು?" ಎಂದು ಕೇಳಿದಳು ಹೇಮಾ.

"ಬರ್ತಾರ ಅಂತ ಸುದ್ದಿ. ಶಾಮರಾಯರು ಮುಂಬಯಿ ಬಿಟ್ಟು ಹೊರಡೋದು ಇದು ಮೊದಲನೇ ಸರೆ ಅಂತ ಕಾಣತೈತಿ."

"ನಾನೂ ಕೊಲ್ಲಾಪುರಕ್ಕ ಬರಬೇಕಂತೇನಿ, ಶೇಖರಣ್ಣ".

"ಯಾಕ?"

"ಏನೂ ಕೆಲಸ ಮಾಡದೇ ಸುಮ್ಮನೆ ಕೂತಿರುವ ಈ ಮುಖಂಡ

ರನ್ನೆಲ್ಲಾ ತರಾಟೆಗೆ ತಗೊಂಡು ಬಿಡ್ತೀನಿ."

"ಅವರ ಮ್ಯಾಲೆ ಯಾಕ ಸಿಟ್ಟು, ಹೇಮಕ್ಕಾ? ಮುದುಕರಾಗ್ತಾ ಬಂದಾರ. ಸ್ಟೇಶನ್ ಸುಡೋದು, ಹಪ್ತೆ ಲೂಟಿ ಮಾಡೋದು ಇಂಥಾ ಕೆಲಸ ಅವರಿಂದ ಆದೀತೆ?"

"ಹೌದೂ, ನಾಳೆ ಸ್ವಾತಂತ್ರ್ಯ ಬಂದ ಮೇಲೆ ಮೂಗು ಮ್ಯಾಲೆ ಮಾಡಿಕೊಂಡು ಮುಖಂಡರಾಗಿ ಮೆರೆಯುವವರು ಅವರೇ ಅಲ್ಲೇನು?"

"ಮೆರೆಯಲೇಳು ಹೇಮಕ್ಕಾ. ಅವರೇ, ಸುಖ ಉಣ್ಣಲಂತೆ. ನಮ್ಮ ಪಾಲಿಗೆ ಇದಾಳಲ್ಲ ನಮ್ಮ ಭೂಮಿತಾಯಿ. ಆಕೆ ಇರುವ ತನಕ ನಮಗೇನು ಚಿಂತಿ?" ಎಂದ ಶೇಖರ.

"ಆ ಭೂಮಿ ಆದರೂ ನಿಮ್ಮಲ್ಲಿ ಎಷ್ಟು ಮಂದಿಗೆ ಅದ?"

"ಕೆಲವರಿಗೆ ಐತಿ. ಕೆಲವರಿಗೆ ಇಲ್ಲ. ಆದರೂ ನಮ್ಮ ದುಡಿತ ನಮಗೈತಲ್ಲ? ನಮ್ಮ ತೋಳಿನಾಗ ಶಕ್ತಿ ಇರುವ ತನಕ ಯಾವ ಚಿಂತೀನೂ ನಮಗಿಲ್ಲ ಹೇಮಕ್ಕ. ದುಡಿದು ಹೊಟ್ಟೆ ಹೊರೆಯೋದೇನು ದೊಡ್ಡದು?"

ಹಳ್ಳಿಗರ ಆತ್ಮವಿಶ್ವಾಸ, ಕಾಯಕ, ಶ್ರದ್ಧೆಗಳೇ ಮೂರ್ತಿವೆತ್ತಂತಿದ್ದ ಶೇಖರನನ್ನು ಅಭಿಮಾನಪೂರ್ಣ ದೃಷ್ಟಿಯಿಂದ ನಿರುಕಿಸುತ್ತ ಹೇಮಾ ನುಡಿದಳು: "ಹಿಂದೂಸ್ಥಾನಕ್ಕ ಸ್ವಾತಂತ್ರ್ಯ ಬಂದರೆ ನಿಮ್ಮಂಥ ಬಂಟರಿಂದಲೇ ಬರಬೇಕು ಶೇಖರಣ್ಣ. ಇದೇನು ಹೊಗಳಿಕೆಯ ಮಾತು ಅಂತ ತಿಳೀಬ್ಯಾಡ. ಹಳ್ಳಿಯ ರೈತರ ಶಕ್ತಿಯ ಮ್ಯಾಲ ವಿಶ್ವಾಸ ಇದ್ದಷ್ಟು ನನಗ ಇನ್ನ್ಯಾರ ಮ್ಯಾಲೂ ಇಲ್ಲ."

"ನಿನ್ನ ಧೈರ್ಯದ ಮುಂದೆ ನಮ್ಮದೆಲ್ಲಾ ಏನು ಬಿಡು, ಹೇಮಕ್ಕಾ. ಕಾಲೇಜಿನಾಗ ಕಲೀತಿದ್ದವಳು ಸುಖವಾಗಿ ಇರೂದನ್ನ ಬಿಟ್ಟು ಇಲ್ಲಿ ಇಂಥಾ ಜಾಗದೊಳಗ ಈ ಲಂಬಾಣಿಗರ ಅರಿವೆ ಹಾಕ್ಕೊಂಡು ಹಗಲೂ-ರಾತ್ರಿ ಕೆಲಸ ಮಾಡ್ತಾ ಇದ್ದೀಯಲ್ಲ! ಇದೇನು ಸಣ್ಣ ಕೆಲಸ ಏನು?"

"ಏನು ದೊಡ್ಡ ಕೆಲಸವೊ ನಾ ಮಾಡೋದು! ನಮ್ಮಪ್ಪ ಇಷ್ಟು ದೊಡ್ಡ ಮುಖಂಡರಾದರೂ ಏನೂ ಮಾಡದೆ ಕೂತು ದೇಶಕ್ಕೆ ದ್ರೋಹ ಮಾಡಿದರು. ನನ್ನ ಈ ಸಣ್ಣ ಕೆಲಸದಿಂದ ಸ್ವಲ್ಪವಾದರೂ ಕಡಿಮೆ ಯಾದೀತೇನು ಆ ದ್ರೋಹ?"

"ಅದು ದ್ರೋಹ ಅನ್ನೂದನ್ನ ನಾ ಒಪ್ಪುವುದಿಲ್ಲ. ಹೋಗಲಿ ಬಿಡು. ಹೊತ್ತಾಗ್ತಾ ಬಂತು. ನಾವು ಹೊರಡತೇವಿನ್ನು. ಶನಿವಾರ ರಾತ್ರಿ

ಬೆಳಗಾವಿಯೊಳಗಿರ್ತೇವೆ. ನೀವು ಅಲ್ಲಿಗೇ ಬರ್‍ರಿ ದೇಸಾಯರ. ರಾತ್ರಿಯ ಗಾಡಿಗೆ ಹೊರಡೂದು ಕೊಲ್ಲಾಪುರಕ್ಕ. ಗೊತ್ತಾಯ್ತೇನು?" ಎಂದು ಹೇಳಿ ಶೇಖರ ಮೇಲಕ್ಕೆದ್ದ. ಉಳಿದವರೂ ಎದ್ದು ಹೊರಡುವ ಸಿದ್ದತೆಗೆ ತೊಡಗಿದರು.

ಕಲ್ಲಾಪುರದಿಂದ ಉತ್ತರಕ್ಕೆ ಹತ್ತು ಮೈಲುಗಳ ದೂರ ಒಂದು ಹಳ್ಳಿಯ ಹತ್ತಿರ ಶೇಖರ ತನ್ನ ಗುಂಪಿನವರೊಂದಿಗೆ ಬಿಡಾರ ಹೂಡಿದ್ದ. ಕಬ್ಬಿನ ತೋಟವೊಂದರಲ್ಲಿ ರಾತ್ರಿಯನ್ನೆಲ್ಲ ಕಳೆದುದಾಗಿತ್ತು. ಹಗಲನ್ನೂ ಅಲ್ಲಿಯೇ ಕಳೆದು ರಾತ್ರಿಯಾದ ಮೇಲೆ ಮುಂದೆ ಪಯಣ ಬೆಳೆಸಬೇಕೆಂದು ನಿರ್ಧರಿಸಲಾಗಿದ್ದಿತು.

ಆ ತೋಟದ ಒಡೆಯನಾದ ಸೂರನಗೌಡ ಆ ಹಳ್ಳಿಯ ಪ್ರತಿಷ್ಠಿತ ವ್ಯಕ್ತಿ. ಸುತ್ತುಮುತ್ತಲಿನ ಇಪ್ಪತ್ತು ಹಳ್ಳಿಗಳಲ್ಲೆಲ್ಲ ದೊಡ್ಡ ಧನಿಕನೆಂದು ಹೆಸರು ಗಳಿಸಿದ್ದ. ಅವನಿಗೂ ಶೇಖರನಿಗೂ ಮೊದಲಿನಿಂದಲೂ ಪರಿಚಯ. ಅಂತೆಯೆ, ಅಂದು ಅವರೆಲ್ಲ ಅಲ್ಲಿ ತಂಗಿದ್ದರು.

ಗುಂಪಿನವರೆಲ್ಲ ಉಪಾಹಾರಕ್ಕಾರಂಭಿಸಿದ ಮೇಲೆ ಗೌಡ ಸಹಜವಾಗಿ ಮಾತು ತೆಗೆದ. "ಈಚೀಚೆಗೆ ಪೋಲೀಸ್ ಬಂದೋಬಸ್ತಿ ಬಹಳ ಆಗೈತಪ್ಪ ಶೇಖರಣ್ಣ. ಬೆಳಗಾಯ್ತು ಅಂದರ ಲಾರಿಗಳ ಓಡಾಟ ಸುರು ಆಗಿರತೈತಿ...."

"ಇನ್ನೇನು ಕೆಲಸ ಮಾವ? ನಮ್ಮಂಥವರನ್ನ ಹಿಡಿಯುತ್ತ ತಿರುಗೋದೆ ಅಲ್ಲೇನು?" ಎಂದ ಶೇಖರ. ಸೂರನಗೌಡರನ್ನು ಆತನು ಮಾವ ಎಂದು ಸಂಬೋಧಿಸುವುದೇ ವಾಡಿಕೆಯಾಗಿದ್ದಿತು. ಗೌಡನ ಮಗಳು ನೀಲವ್ವನನ್ನು ಶೇಖರನಿಗೆ ಕೊಡುವ ಮಾತು ಬೇರೆ ಒಮ್ಮೆ ಬಂದಿದ್ದಿತು. ಆದರೂ ಅದರಿಂದಾಗಿ ಆತ ಶೇಖರನಿಗೆ ಮಾವನಾಗಿರಲಿಲ್ಲ. ಆ ಪ್ರಸ್ತಾಪ ಬರುವುದಕ್ಕೆ ಮೊದಲಿನಿಂದಲೂ ಶೇಖರ ಸಲುಗೆಯಿಂದ ಗೌಡನನ್ನು 'ಮಾವ' ಎಂದು ಕರೆಯುತ್ತಿದ್ದ.

"ಪೋಲೀಸರ ಬಂದೋಬಸ್ತಿನಿಂದ ನಮಗ ಜೀವನs ಬ್ಯಾಡಾಗುವ ಹಾಂಗ ಆಗೈತಿ ನೋಡು ಶೇಕ್ರಣ್ಣ. ಅದರಾಗ ಮೊನ್ನೆ, ಇಪ್ಪತ್ತಾರನೇ ತಾರೀಖಿನ ದಿನ ಈ ಸೀಮೆಯೊಳಗಿನ ಚಾವಡಿ ಸುಟ್ಟಾಗಿಂದ ಹದ್ದು ಎರಗಿದಂಗ ಮಾಡತಾರ."

"ನಮ್ಮ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮ, ಮಾವ ಅದು. ಒಂದೇ ದಿನದೊಳಗ ಇಪ್ಪತ್ತಾರು ಊರಿನ ಚಾವಡಿ ಎಲ್ಲಾ ಭಸ್ಮ

ಆಯಿತು!"

"ಚಲೋ ಕೆಲಸ ಮಾಡಿದಿರಿ. ನೀವೆಲ್ಲಾ ಬಹದ್ದೂರ ಮಂದಿ. ಆಗಲಿ. ಮಧ್ಯಾಹ್ನಕ್ಕ ಮನೀಗೇ ಬರ್‍ರಿ ಊಟಕ್ಕ" ಎಂದು ನುಡಿದು ಸೂರನಗೌಡ ಎದ್ದು ನಿಂತ.

"ಮನೀಗ್ಯಾಕ ಮಾವ? ಇಲ್ಲಿಗೇ ಕಳಿಸಿಬಿಡಲ್ಲ ಊಟಾ?"

"ಕಳಿಸ್ತಿದ್ದೆ. ಆದರ ನಮ್ಮ ಮುದುಕಿಗೆ ಗಾಂಧೀ ಮಂದಿ ಅಂದರ ಬಹಳ ಪ್ರೀತಿ. ನೀವು ಬಂದಿರೋದು ಗೊತ್ತಾದ ಕೂಡಲೆ ಇವೊತ್ತು ಹೋಳಿಗೆ ಮಾಡ್ತಿನಿ ಅಂದಳು. ಎಲ್ಲರೂ ಮನೀಗೇ ಬಂದು ಆಕೆಯ ಕಣ್ಣ ಮುಂದೆ ಉಂಡರ ಚಂದ. ಅವಳಿಗೂ ಆನಂದ ಆದೀತು..."

"ಆಗಲಿ ಗೌಡರೆ, ಅದರಾಗೇನಂತೆ! ಬರ್‍ತೀವಿ ನಡೀರಿ" ಎಂದು ಗುಂಪಿನವರಲ್ಲೊಬ್ಬ ನುಡಿದ.

"ಬರ್‍ರಿ ಹಾಂಗಾದರೆ, ಬಿಸಿಲು ಏರೂದರೊಳಗಾಗಿ ಎಲ್ಲಾ ಬಂದುಬಿಡಿ" ಎಂದು ಹೇಳಿ ಗೌಡ ಹೊರಟುಹೋದ.

ಅವರ ಮನೆಗೆ ಹೋಗುವುದೇ, ಬೇಡವೆ ಎಂದು ಶೇಖರ ಯೋಚನೆಗೊಳಗಾದ. ಪೋಲೀಸರ ತಿರುಗಾಟ ಬೇರೆ ಎಡೆಬಿಡದೆ ನಡೆದಿದೆ. ಯಾವಾಗ ಲಾರಿಗಳಲ್ಲಿ ಪೋಲೀಸ್ ಪಾರ್ಟಿ ಬಂದುಬಿಟ್ಟೀತೆಂಬ ಬಗ್ಗೆ ನಿಯಮವೇನೂ ಇಲ್ಲ. ಇಂಥ ಸಂದರ್ಭಗಳಲ್ಲಿ ಹಗಲುಹೊತ್ತಿನಲ್ಲಿ ಇಪ್ಪತ್ತೆರಡು ಜನ ಸೇರಿ ಗೌಡರ ಮನೆಗೆ ಊಟಕ್ಕೆ ಹೋಗುವುದು ಜಾಣತನದ ಕೆಲಸವಂತೂ ಆಗಲಾರದು ಎಂದು ಅವನ ಚುರುಕುಬುದ್ಧಿ ವಾದಿಸಿತು. ಹೋಳಿಗೆ ಊಟ ಹೊಡೆಯುವ ಆಸೆಯಿಂದ ಅಲ್ಲಿಗೆ ಹೋಗಿ ಸಿಕ್ಕಿಬಿದ್ದರೆ? ಬಿಸಿಲು ಬಲಿಯುತ್ತ ಬಂದ ಹಾಗೆ ಗುಂಪಿನವರೆಲ್ಲ ಹೊರಡುವ ಆತುರವನ್ನು ತೋರಿದ್ದರಿಂದ, "ನೀವು ನಡೀರಿ. ನಾ ಬರ್‍ತೇನಿ ತುಸು ತಡೆದು" ಎಂದು ಹೇಳಿದ. ತಾನು ಬಾವಿಯ ಕಟ್ಟೆಯ ಮೇಲೆ ಕದಲದೆ ಕುಳಿತಿದ್ದ.

ಅವನ ಬಗೆಗಣ್ಣೆದುರು ಆಗಸ್ಟ್ 10ರಿಂದ ಇದುವರೆಗೆ ನಡೆದ ಘಟನೆಗಳು ಸುಳಿದು ಹೋದುವು. ಜೊತೆಗೆ ತನ್ನ ಕುಟುಂಬದ ಪರಿಸ್ಥಿತಿಯೂ ನೆನಪಾಯಿತು. ಹೊಲದ ಮೇಲಿನ ಸಂಕಟ, ಸ್ವಾಮಿಗಳ ಕೃಪೆಯಿಂದ ತಪ್ಪಿ ಹೋಗಿದ್ದರೂ ಆ ವರ್ಷ ಮಳೆಯೇ ಬೀಳದ ಕಾರಣ ಆಹಾರಧಾನ್ಯಗಳ ಅಭಾವ ಅವನ ಮನೆಯ ಜನರನ್ನು ಕಂಗೆಡಿಸಿದ್ದಿತು.

ಅತ್ತಿಗೆ ಗೌರವ್ವ ಬೇರೆ ಜ್ವರದಿಂದ ಹಾಸಿಗೆ ಹಿಡಿದಿದ್ದಳು. ಎಂಥ

ಜ್ವರವೋ ಏನೋ. ಹದಿನೈದು ದಿನಗಳಿಂದ ಬಿಟ್ಟೂಬಿಡದೆ ಬಾಧಿಸುತ್ತಿತ್ತು. ಆಕೆಗೆ ಔಷಧ ಕೊಡಿಸಲು ಗತಿಯಿರಲಿಲ್ಲ. ಬಿದ್ದುಕೊಂಡವಳು ಹಾಗೇ ಬಿದ್ದುಕೊಂಡಿದ್ದಳು. ಮನೆಗೆಲಸಗಳನ್ನೆಲ್ಲ ಮುದುಕಿ ತಾಯಿಯೊಬ್ಬಳೇ ಮಾಡಬೇಕಾಗುತ್ತಿತ್ತು. ಅದರೊಂದಿಗೆ ಹೊಲದ ಕೆಲಸ. ಲಿಂಗಣ್ಣ ತುಂಬ ಇಳಿದುಹೋಗಿದ್ದ. ಚಿಂತೆಯ ಬೈರಿಗೆ ಅವನ ಎದೆಯನ್ನು ಕೊರೆಯುತ್ತಿತ್ತು.

ಇಂಥ ಕಷ್ಟಗಳನ್ನೆಲ್ಲ ಎದುರಿಸಬೇಕಾಗಿ ಬಂದರೂ ತಾಯಿಯ ಧೈರ್ಯ ಅಳಿದಿರಲಿಲ್ಲ. ಇದ್ದುದರಲ್ಲೇ ಅದೊಂದು ಸಮಾಧಾನದ ವಿಷಯವಾಗಿತ್ತು. ಮನೆತನಕ್ಕೊದಗಿದ ಈ ಸಂಕಟಕಾಲದಲ್ಲಿ ಬೆಳೆದ ಮಗನಾದ ತಾನು ಎಲ್ಲಾದರೂ ದುಡಿದು ಸಂಸಾರದ ಗಾಡಿಗೆ ಹೆಗಲು ಕೊಡಬೇಕಾದುದು ಅಗತ್ಯವಾಗಿತ್ತು. ಅದರ ಅರಿವು ತನಗೂ ಇಲ್ಲದಿಲ್ಲ. ಆದರೇನು ಮಾಡುವುದು? ಈಗ ಹೋರಾಟವನ್ನು ಅರ್ಧಕ್ಕೇ ತೊರೆದು ತಾನು ಹಳ್ಳಿಗೆ ಹೋಗುವುದು ಸಾಧ್ಯವಿಲ್ಲ. ಹೋದರೂ ತಾನು ಅಲ್ಲಿ ಉಳಿಯುವಂತಿಲ್ಲ. ಒಡನೆಯೇ ಪೋಲೀಸರು ಬಂದು ಹಿಡಿದುಕೊಂಡು ಹೋಗುವರು. ಆ ಮಾತು ಬೇರೆ. ತನಗಿನ್ನೂ ಮದುವೆಯಾಗಿಲ್ಲ. ಅದೂ ಒಂದು ಅನುಕೂಲವೇ ಆಯಿತು. ಇಲ್ಲವಾದರೆ ಇನ್ನೊಂದು ಹೊಟ್ಟೆಗೆ ಕೂಳು ಹಾಕುವ ಹೊಣೆಗಾರಿಕೆಯೂ ಅಣ್ಣನ ತಲೆಯ ಮೇಲೇ ಬೀಳುತ್ತಿತ್ತು!

"ಶೇಕ್ರಣ್ಣಾ"

ತನ್ನ ಹಿಂಬದಿಯಿಂದ ಕೇಳಿ ಬಂದ ಕೂಗು ಅವನನ್ನು ಎಚ್ಚರಿಸಿತು. ಹೊರಳಿ ನೋಡಿದ. ಹದಿನೈದು ಹದಿನಾರು ವರ್ಷದ ಹುಡುಗಿಯೊಬ್ಬಳು ನಿಂತಿದ್ದಳು.

ಶೇಖರ ಎದ್ದುನಿಂತು "ಏನವ್ವಾ, ನೀನ್ಯಾರು?" ಎಂದು ಕೇಳಿದ.

"ನಾನು ಗೌಡರ ಮಗಳು ನೀಲವ್ವ. ನಿನಗೊಂದು ಸುದ್ದಿ ತಿಳಿಸಾಕ ಬಂದೀನಿ. ಮೊದಲು ಇಲ್ಲಿಂದ ಹೊರಟುಬಿಡಪ್ಪ ನೀನು" ಎಂದಳಾಕೆ.

"ಯಾಕವ್ವ? ಏನಾಯ್ತು?"

"ಘಾತ ಆಯ್ತಣ್ಣ. ಮೊದಲು ಹೊರಟುಬಿಡು ಇಲ್ಲಿಂದ."

"ಮನಿಗೆ ಊಟಕ್ಕ ಕರದಾರಲ್ಲವ್ವ. ಆಗಲೆ ನಮ್ಮವರೆಲ್ಲಾ ಹೋಗಿದ್ದಾರೆ. ನಾನೂ ಈಗ ಬರ್ತಿದ್ದೆ" ಎಂದು ಶೇಖರ ವಿಸ್ಮಯದಿಂದ ಕೇಳಿದ.

"ನೀ ಹಿಂದೆ ಉಳಿದದ್ದೇ ನೆಟ್ಟಗಾಯ್ತಣ್ಣ. ದೇವರೇ ಕಾಯ್ದ. ನಮ್ಮಪ್ಪ ಸರಕಾರಕ್ಕ ಪಿತೂರಿ ಆಗಿದಾನ. ಅಲ್ಲಿ ಮನಿಯೊಳಗ ನಿಮ್ಮನ್ನ ಊಟಕ್ಕ

ಕೂಡ್ರಿಸಿ ಹಿಡಿಸಬೇಕಂತ ಮಾಡಿದ್ದ. ಇಷ್ಟೊತ್ತಿಗೆ ಪೋಲೀಸರು ಊರ ಸಮೀಪಕ್ಕ ಬಂದಿದ್ದಾರು. ನೀ ಏಳು. ಸಾಮಾನು ತಕ್ಕೊಂಡು ಹೊರಡು ಮೊದಲು" ಎಂದಳು ನೀಲವ್ವ.

ಶೇಖರನಿಗೆ ವಜ್ರಾಘಾತವಾದಂತಾಯಿತು. ಆ ಹುಡುಗಿಯ ಮಾತುಗಳನ್ನು ಒಮ್ಮೆಲೆ ನಂಬುವುದಕ್ಕೂ ಆಗಲಿಲ್ಲ. ಸೂರನಗೌಡ - ತಮ್ಮೊಂದಿಗೆ ಅಷ್ಟೊಂದು ಆತ್ಮೀಯತೆಯಿಂದ ವರ್ತಿಸುವ ಸೂರನಗೌಡ - ತನ್ನಿಂದ 'ಮಾವ' ಎಂದು ಕರೆಸಿಕೊಳ್ಳುವ ಸೂರನಗೌಡ-ಇಂಥ ವಿಶ್ವಾಸಘಾತದ ಕೆಲಸಕ್ಕೆ ಕೈಹಾಕಬಲ್ಲನೆಂಬ ವಿಚಾರ ನಂಬಲಸಾಧ್ಯವಾದುದೇ ಆಗಿದ್ದಿತು. ಆದರೂ ಅವನ ಸ್ವಂತ ಮಗಳು, ಸರಳ ಮನಸ್ಸಿನ ಆ ಹಳ್ಳಿಯ ಹುಡುಗಿ ಸುಳ್ಳು ಹೇಳುವಳೆಂದು ಭಾವಿಸಲೂ ಸಾಧ್ಯವಿರಲಿಲ್ಲ. ಅವಳ ಆ ತಿಳಿಯಾದ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಅಸತ್ಯದ ಛಾಯೆ ಕೊಂಚವೂ ಕಾಣಿಸುತ್ತಿರಲಿಲ್ಲ. ತನ್ನನ್ನು ಎಚ್ಚರಿಸುವುದಕ್ಕಾಗಿಯೆ ಆಕೆ ಮನೆಯನ್ನು ಬಿಟ್ಟು ಇಲ್ಲಿಗೆ ಧಾವಿಸಿ ಬಂದಿರುವಳೆಂಬುದನ್ನು ನೆನೆದುಕೊಂಡಾಗ ಅವನಿಗೆ ಎದೆ ತುಂಬಿ ಬರದಿರಲಿಲ್ಲ. ಆತ ಅವಸರವಸರವಾಗಿ ಗುಡಿಸಲಿನೊಳಸೇರಿದ. ಆಯುಧಗಳನ್ನು ಅಲ್ಲಿಗೆ ತಂದಿರಲಿಲ್ಲವಾದುದರಿಂದ ಆ ಬಗ್ಗೆ ವಿವಂಚನೆಗೊಳಗಾಗಬೇಕಾದ ಅಗತ್ಯವಿರಲಿಲ್ಲ. ಅಂಗಿಯ ಜೇಬಿನಲ್ಲಿ ರಿವಾಲ್ವರ್ ಭದ್ರವಾಗಿತ್ತು. ಕಂಬಳಿಯನ್ನೆತ್ತಿಕೊಂಡು ಹೊರಗೆ ಬಂದ. ನೀಲವ್ವ ಇನ್ನೂ ಅಲ್ಲಿಯೇ ನಿಂತಿದ್ದಳು.

"ನಿನಗೆ ಹ್ಯಾಂಗ ತಿಳೀತವ್ವಾ ಸುದ್ದಿ?"

"ನಿನ್ನೆ ನಮ್ಮನಿಗೆ ಯಾವನೋ ಒಬ್ಬ ಸಾಹೇಬ ಬಂದಿದ್ದ. ಅಗನೂ ಅಪ್ಪ ಮಾತಾಡುತ್ತಿದ್ದಾಗ ನಾನು ಪಡಸಾಲೆಯೊಳಗ ಹುಣಿಸೀಹಣ್ಣು ಸುಲೀತಿದ್ದೆ. ಪಿತೂರಿ ಆಗಿ ಹಿಡಕೊಡಬೇಕಂತ ಆ ಸಾಹೇಬ ಹೇಳಿದ. ಅಪ್ಪ ಮೊದಲು ಒಪ್ಪಲಿಲ್ಲ. ಆದರs ಆ ಸಾಹೇಬ ಏನೇನೋ ಹೇಳಿ ಹೆದರಿಸಿ ಬೆದರಿಸಿ ಒಪ್ಪಿಸಿದ. ಇವೊತ್ತು ಹಿಡೀಬೇಕಂತ ಮಸಲತ್ತು ಆಗಿತ್ತು. ನೀವು ಬಂದ ಸುದ್ದಿ ತಿಳಿದ ಗಳಿಗೆಗೇ ನಾ ಇಲ್ಲಿ ಬಂದು ತಿಳಿಸಬೇಕಂತ ಮಾಡಿದ್ದೆ. ಆದರs ಬೆಳಗಿನಾಗ ಬರಾಕಾಗಲಿಲ್ಲ. ಈಗ ತೋಟದಾಗಿನ ಬಸವಣ್ಣಗ ಹೋಳಿಗೆ ನೈವೇದ್ಯ ತರುವ ನೆಪಾ ಮಾಡಿ ಬಂದುಬಿಟ್ಟೆ. ತಗೋ ಈ ಹೋಳಿಗೆ. ಹಾದಿಯೊಳಗ ತಿನ್ನು" ಎಂದು ನುಡಿದು ಆಕೆ ಕೈಯಲ್ಲಿ ಹಿಡಿದಿದ್ದ ಗಂಟನ್ನು ಮುಂದೆ ಮಾಡಿದಳು.

ಶೇಖರನಿಗೆ ಅದನ್ನು ಸ್ವೀಕರಿಸಲು ಮನಸ್ಸು ಒಡಂಬಡದಾಯಿತು. ಅಲ್ಲಿ-ಸೂರನಗೌಡ ಒಡ್ಡಿದ ಬಲೆಯಲ್ಲಿ-ಸಿಕ್ಕಿಬಿದ್ದು ತನ್ನ ಇಪ್ಪತ್ತೊಂದು ಜನ ಅನುಯಾಯಿಗಳು ಪೋಲೀಸರ ಕೈವಶವಾಗುವುದರಲ್ಲಿದ್ದಾರೆ. ಈ ಭೀಕರ ಮೋಸದಿಂದ ಅವರನ್ನುಳಿಸಿಕೊಳ್ಳಲು ಯಾವ ದಾರಿಯೂ ಇಲ್ಲವೆ?

"ನಮ್ಮ ಮಂದೀನೆಲ್ಲಾ ಅವರ ಕೈಯಾಗ ಬಿಟ್ಟು ನಾ ಒಬ್ಬನs ಹ್ಯಾಂಗ ಹೋಗಲಿ?"

"ಒಬ್ಬನಾದರೂ ಉಳಿದರ ದೊಡ್ಡದಲ್ಲೇನಣ್ಣ? ನಿನ್ನ ಮ್ಯಾಲs ಅವರಿಗೆ ಕಣ್ಣು. ನಿನ್ನ ಹಿಡೀಬೇಕಂತs ಇದೆಲ್ಲಾ ಮಾಟಾ ಮಾಡ್ಯಾರ. ನಿನ್ನ ಮ್ಯಾಲ ಒಂದು ಸಾವಿರ ರೂಪಾಯಿ ಇನಾಮು ಇಟ್ಟಾರಂತ. ಹೌದೇ ಅಣ್ಣಾ?"

"ಹೌದವ್ವ. ಬಹಳ ಉಪಕಾರ ಮಾಡಿದೆ ನೀ ಇಲ್ಲಿಗೆ ಬಂದು ಈ ಸುದ್ದಿ ತಿಳಿಸಿ. ಈ ಜನ್ಮದಾಗ ಎಂದೆಂದೂ ಮರೆಯೋದಿಲ್ಲ ನಿನ್ನ!"

"ಮರೆಯೋದಿಲ್ಲವೇನಣ್ಣ?" ಎಂದು ಹರ್ಷದಿಂದ ಕೇಳಿದಳು ನೀಲವ್ವ. ಅವನ ಮಾತಿನಿಂದಾಗಿ ಅವಳ ಮುಗ್ಧ ಮುಖವೆಲ್ಲ ಸಂತಸದಿಂದ ಅರಳಿದ್ದಿತು.

"ಬರ್ತೀನವ್ವಾ ಹಾಂಗಾದರs" ಎಂದು ಶೇಖರ ಆಕೆಯನ್ನು ಕಣ್ತುಂಬಾ ನೋಡಿ, ಆಕೆ ಕೊಟ್ಟ ಗಂಟನ್ನು ಕೈಲಿ ಹಿಡಿದುಕೊಂಡು ಹೊರಟುಬಿಟ್ಟ.

ಅಕಸ್ಮಾತ್ತಾಗಿ ಅವನಿಗೆ ವಿಶ್ವನಾಥ ಹೇಮಾವತಿಯರ ನೆನಪಾಯಿತು. ಅವರೂ ಇಂಥ ಬಲೆಗೆ ಸಿಕ್ಕಿಹಾಕಿಕೊಂಡಿರುವರೆ? ಎಂದು ಚಿಂತಿಸುತ್ತ ಭರದಿಂದ ಸಾಗಿದ್ದ.

ಆದರೆ ದ್ರೋಹಿಗಳು ಒಡ್ಡಿದ ಬಲೆಗೆ ಬೀಳಬೇಕಾದ ಸಂದರ್ಭವೇನೂ ಬಂದಿರಲಿಲ್ಲ ವಿಶ್ವನಾಥ-ಹೇಮಾವತಿಯರಿಗೆ. ಆದರೆ ಸುತ್ತುಮುತ್ತಲಿನ ಪ್ರದೇಶದಲ್ಲೆಲ್ಲ ಪೋಲೀಸರು ಹರಡಿದ್ದ ಬಲೆಯಿಂದ ಉಪಾಯವಾಗಿ ಹೊರಬಿದ್ದು ಸುರಕ್ಷಿತವಾಗಿದ್ದ ಒಂದು ಸ್ಥಳವನ್ನು ಸೇರಿಕೊಳ್ಳಬೇಕಾದ ಕಠಿಣ ಪ್ರಸಂಗ ಬಂದೊದಗಿದ್ದಿತು.

ಆ ದಿನ ರಾತ್ರಿ ಕೊಳ್ಳದಲ್ಲಿದ್ದ ಹಾಳು ಗುಡಿಯೊಂದರಲ್ಲಿ ಹೇಮಾ ಮತ್ತು ವಿಶ್ವನಾಥರು ತಂಗಬೇಕಾಗಿ ಬಂದಿತು. ಕೊಳ್ಳದ ಆಚೆ ಈಚೆ ಉನ್ನತವಾದ ಗುಡ್ಡಗಳ ಸಾಲು ತಲೆಯೆತ್ತಿ ನಿಂತಿದ್ದುವು. ಉತ್ತರ ದಿಕ್ಕಿನ ಗುಡ್ಡದ ಮೇಲಿನಿಂದ ದೊಡ್ಡ ಝರಿಯೊಂದು ಹರಿದು ನೂರಾರು ಅಡಿಗಳ

ಮೇಲಿಂದ ಕೆಳಗಡೆ ಕೊಳ್ಳಕ್ಕೆ ಧುಮುಕುತ್ತಿದ್ದಿತು. ಆಗತಾನೆ ಮೇಲಕ್ಕೇರಿ ಬಂದ ಅರ್ಧಚಂದ್ರನ ಪ್ರಕಾಶದಲ್ಲಿ ಆ ಪುಟ್ಟ ತಡಸಲಿನ ನೃತ್ಯವನ್ನು ಕಂಡು ಇಬ್ಬರೂ ಮೋಹಿತರಾಗಿ ನಿಂತುಕೊಂಡಿದ್ದರು.

ಚಳಿ ಹೆಚ್ಚಾಗುತ್ತಲೂ ವಿಶ್ವನಾಥ "ಹೇಮಾ, ಏಳು. ಗುಡಿಯೊಳಗೆ ಹೋಗೋಣ" ಎಂದ.

ನೂರಾರು ವರ್ಷಗಳ ಹಿಂದೆ ಕಟ್ಟಲಾಗಿದ್ದ ಆ ಗುಡಿ ಹೆಸರಿಗೆ ಮಾತ್ರ ಗುಡಿಯಾಗಿದ್ದಿತು. ಒಳಗೆ ದೇವರ ಮೂರ್ತಿ ಯಾವುದೂ ಇರಲಿಲ್ಲವಾದರೂ ಒಂದಾನೊಂದು ಕಾಲಕ್ಕೆ ಅಲ್ಲಿ ಮೂರ್ತಿಯಿದ್ದ ವಿಚಾರವನ್ನು ಸಾರಲೆಂದೋ ಏನೋ, ಒಳಭಾಗದಲ್ಲಿ ಗರ್ಭಗುಡಿ ಬೀಳದೆ ಉಳಿದುಕೊಂಡಿತ್ತು. ಎಡಗಡೆಗೂ ಬಲಗಡೆಗೂ ಎರಡು ಕಿಟಿಕಿಗಳಿದ್ದುವು. ಆ ಕಿಟಕಿಗಳಿಂದಲೂ, ಎದುರಿನ ಬಾಗಿಲಿನಿಂದಲೂ ಚಂದ್ರನ ಬೆಳಕು ಹರಿದುಬಂದು ಗುಡಿಯ ಒಳಭಾಗವನ್ನೆಲ್ಲಾ ಬೆಳಗಿಸಿದ್ದಿತು. ಆದರೆ ದೂಳು ತುಂಬಿದ ಆ ಹಾಳು ಗುಡಿಯಲ್ಲಿ, ಇಂಥ ಕಾಡಿನ ಮಧ್ಯದಲ್ಲಿನ ಕೊಳ್ಳದಲ್ಲಿ, ತಣ್ಣಗಿನ ನೆಲದ ಮೇಲೆ ಮಲಗಿಕೊಳ್ಳುವುದು ಮಾತ್ರ ದುಸ್ಸಾಧ್ಯವಾದ ಕೆಲಸವಾಗಿತ್ತು.

ವಿಶ್ವನಾಥನಿಂದ ಐದಾರು ಅಡಿಗಳ ದೂರ ಕಂಬಳಿಯೊಳಗಡೆ ದೇಹವನ್ನು ಅಡಗಿಸಿ, ನಡುಗುತ್ತಿದ್ದ ಹಲ್ಲುಗಳನ್ನು ಬಿಗಿಯಾಗಿ ಹಿಡಿದುಕೊಂಡು ಹೇಮಾ ಮಲಗಿಕೊಂಡಿದ್ದಳು.

ಅರ್ಧ ತಾಸು ಕಳೆದಿರಬಹುದು. ಹೇಮಾ ನಿದ್ರೆ ಹೋದ ಹಾಗೆ ತೋರುತ್ತಿತ್ತು. ವಿಶ್ವನಾಥ ಗುಡಿಯನ್ನು ಬಿಟ್ಟು ಹೊರಗೆ ಬಂದ. ಮೊದಲಿಗಿಂತ ಶೋಭಾಯಮಾನವಾಗಿತ್ತು-ಆ ಚಂದ್ರಮನ ಬೆಳಕು. ಕನಸಿನ ದೇವತೆಗಳು ಕುಣಿಯುವ ಹಾಗೆ ಆ ತಡಸಲು ಕಂಡಿತು.

ಆದರೆ ಅದೇನು? ಅಲ್ಲಿ ಕೆಳಗಡೆ ಮನುಷ್ಯಾಕೃತಿಯೊಂದು ನೀರು ಕುಡಿಯುತ್ತಿದ್ದಂತೆ ಕಂಡಿತು. ವಿಶ್ವನಾಥನ ಬಲಗೈ ತಾನಾಗಿಯೆ ಜೇಬಿಗೆ ನುಗ್ಗಿ ಪಿಸ್ತೂಲನ್ನು ಹಿಡಿದುಕೊಂಡಿತು. ತನ್ನೆಡೆಗೇ ಬರುತ್ತಿದ್ದ ಆ ವ್ಯಕ್ತಿ ತಕ್ಷಣ ಒಂದು ಗಿಡದ ಮರೆಗೆ ಸರಿಯಿತು. "ಯಾರವರು? ಈ ಕಡೆ ಬರ್ರಿ" ಎಂದು ದೊಡ್ಡ ದನಿಯಲ್ಲಿ ಕೂಗಿದ. ಆ ವ್ಯಕ್ತಿ ಇವನ ಹತ್ತಿರವೇ ಬಂದಿತು.

"ಯಾರು? ಸಂಗಣ್ಣಾ!" ವಿಶ್ವನಾಥ ಆನಂದದಿಂದ ಉದ್ಗಾರ ತೆಗೆದ.

ಎರಡು ವರ್ಷ ಸಶ್ರಮ ಶಿಕ್ಷೆ ಹೊಂದಿ ಹಿಂಡಲಗಿಗೆ ಹೋದ ಸಂಗಣ್ಣ

ಇಲ್ಲಿ, ಈ ಕೊಳ್ಳದಲ್ಲಿ ಒಮ್ಮಿಂದೊಮ್ಮೆಲೆ ಭೆಟ್ಟಿಯಾಗುವುದೆಂದರೇನು! ಎಲ್ಲವೂ ವಿಲಕ್ಷಣವೆ. ಓಂಡಲಗಿಯ ಗೋಡೆಗಳ ಮೇಲಿನಿಂದ ಹಾರಿ ಆಕಾಶದಲ್ಲಿ ನಡೆದು ಇಲ್ಲಿಗೆ ಬಂದಿಳಿದನೇನೊ ಎಂದುಕೊಂಡ ವಿಶ್ವನಾಥ.

ಸಂಗಣ್ಣ ಉತ್ಸಾಹದಿಂದ ನೆಗೆಯುತ್ತ ಬಂದು ವಿಶ್ವನಾಥನನ್ನು ಗಟ್ಟಿಯಾಗಿ ತಬ್ಬಿಕೊಂಡ-ಜಟ್ಟಿಗಳ ಪದ್ಧತಿಯಂತೆ. "ಯಾರೋ ಸಿ.ಐ.ಡಿ. ಗಳು ನನ್ನ ನೋಡಿದ್ದರೆಂದು ತಿಳಿದಿದ್ದೆ. ನೀವು ಅಂತ ಗೊತ್ತಾಗುತ್ತಲೇ ಎಷ್ಟು ಆನಂದ ಆಯ್ತು ಅಂತೀರಿ! ಪೋಲೀಸರು ಎಲ್ಲಾ ಕಡೆಗೂ ತುಂಬಿ ಬಿಟ್ಟಾರಂತ ಹೌದೇನ್ರಿ?"

ಅವನನ್ನು ಕಟ್ಟೆಯ ಬಳಿ ಕರೆದುಕೊಂಡು ಬಂದು ವಿಶ್ವನಾಥ ಕುಳಿತುಕೊಂಡ. "ಕೂಡ್ರು ಸಂಗಣ್ಣ, ನೀ ಕೇಳಿದ ಸುದ್ದಿ ನಿಜ. ಮೀನುಗಳನ್ನು ಹಿಡಿಯೂದಕ್ಕ ಜಾಲಗಾರ ದೊಡ್ಡ ಬಲೆ ಬೀಸಿದಂತೆ ಸರಕಾರ ಪೋಲೀಸರ ಬಲೆ ಬೀಸಿದೆ. ಎಲ್ಲಿ ನೋಡಿದರೂ ಪೋಲೀಸರು. ನಾವೂ ನಿನ್ನ ಹಾಗೇ ಅವರ ಕಣ್ಣು ತಪ್ಪಿಸಿ ತಿರುಗುತ್ತಾ ಇಲ್ಲಿಗೆ ಬಂದಿದ್ದೇವೆ. ನಿನ್ನ ಸುದ್ದಿ ಏನು ಸಂಗಣ್ಣ? ಜೇಲಿನಿಂದ ಪಾರಾಗಿ ಬಂದೆಯೋ ಏನು?"

"ಹೌದು. ಮೊದಲಿನಿಂದಲೂ ಅದೇ ಹಂಚಿಕೆಯೊಳಗಿದ್ದೆ. ಪ್ರಸಂಗ ಕೈಗೆ ಬಂದಾಗ ಪಾರಾಗಿಬಿಟ್ಟೆ."

"ನೀವು ಎಲ್ಲಿಗೆ ಹೋಗಬೇಕಂತ ಮಾಡಿದ್ದೀರಿ?"

"ಸ್ವಾಮಿಗಳ ಮಠಕ್ಕೆ ಹೋಗಿ ಹೇಮಾವತಿಯನ್ನ ಅಲ್ಲಿ ಬಿಟ್ಟು, ನಾ ಬೆಳಗಾವಿಗೆ ಹೋಗಬೇಕಂತ ವಿಚಾರ ಮಾಡಿದ್ದೆ."

11

ಮಠದ ಪಡಸಾಲೆಯ ಗೋಡೆಯ ಮೇಲೆ ನೇತಾಡುತ್ತಿದ್ದ ಗಡಿಯಾರದಲ್ಲಿ ಹನ್ನೆರಡು ಗಂಟೆಯಾದುದು ಕಂಡುಬಂದಾಗ ಕೀರ್ತಿನಾಥ ಹಾಗೂ ಬಾಬಾಸಾಹೇಬರು ಮೇಲಕ್ಕೆ ಎದ್ದರು. ಎದುರಿಗಿನ ವೇದಿಕೆಯ ಮೇಲೆ ಗಂಭೀರ ಮುದ್ರೆಯಿಂದ ಮಂಡಿಸಿದ್ದ ಸ್ವಾಮೀಜಿಯವರೂ ಮೇಲಕ್ಕೆದ್ದರು.

"ಅಂತೂ ತಾವು ಯಾವುದಕ್ಕೂ ಒಪ್ಪುವದಿಲ್ಲ ಅಂದ ಹಾಗಾಯ್ತು. ತಮ್ಮ ಇಚ್ಛೆ. ನಾವು ಬೇರೆ ಉಪಾಯವಿಲ್ಲದೆ ತಮ್ಮನ್ನು ಬಂಧಿಸ ಬೇಕಾಗುವುದು" ಎಂದ ಕೀರ್ತಿನಾಥ.

"ಶಿವನ ಮನಸ್ಸಿದ್ದರೆ ಅದೂ ಆಗಲಿ. ನಮಗೇನೂ ದು:ಖವಿಲ್ಲ"

ಎಂದರು ಸ್ವಾಮೀಜಿ.

"ತಾವು ಇಂಥ ಹಟ ಯಾಕೆ ಹಿಡೀಬೇಕು ಅನ್ನೋದೇ ನನಗ ತಿಳೀಲೊಲ್ಲದು ಸ್ವಾಮೀಜಿ. ತಮ್ಮಂಥವರು ಜೇಲಿಗೆ ಹೋದರೆ ಮಠದ ಮರ್ಯಾದೆಗೆ ಕುಂದಲ್ಲವೇನು?" ಎಂದರು ದೇಸಾಯರು.

ಎದ್ದುಬಿಟ್ಟಿದ್ದ ಸ್ವಾಮೀಜಿ ಪುನಃ ಕುಳಿತುಕೊಂಡು, ದೃಢ ಸ್ವರದಲ್ಲಿ ನುಡಿದರು: "ಈ ಮಠದ ಇತಿಹಾಸ ಏನು ಅನ್ನೋದನ್ನ ನೀವು ಮರೆತಂತಿದೆ ದೇಸಾಯರೆ. ಮೊದಲಿನಿಂದಲೂ ಸ್ವಾತಂತ್ರ್ಯಪ್ರಿಯ ಮಠ ನಮ್ಮದು. ಕಿತ್ತೂರು ದೇಸಾಯರ ಗುರುಪೀಠ ಇದು. ಈ ಸರಕಾರಕ್ಕ ವಿರುದ್ಧವಾಗಿ ಕತ್ತಿ ಹಿರಿದು ನಿಂತ ಚೆನ್ನಮ್ಮರಾಣಿ ಈ ಮಠದ ಭಕ್ತೆಯಾಗಿದ್ದಳು. ಜೇಲಿಗೆ ಹೋಗುವದರಿಂದ ಪೀಠದ ಮರ್ಯಾದೆ ಹೋಗುವದಕ್ಕೆ ಬದಲಾಗಿ ಹೆಚ್ಚಾಗುವದು. ನಮ್ಮ ಪೂಜ್ಯ ಗುರುಗಳ ಪವಿತ್ರ ಆತ್ಮಗಳಿಗೂ ಸಂತೋಷವಾಗುವುದು."

"ಒಂದು ಸುದ್ದಿ ತಿಳಿಸಿಬಿಟ್ಟರೇನಾಗುತೈತಿ ಸ್ವಾಮೀಜಿ? ನಮಗ ಹೆಚ್ಚಿಗೇನೂ ಬೇಡ. ವಿಶ್ವನಾಥ ಮತ್ತು ಆ ಹುಡುಗಿ ಎಲ್ಲಿದಾರ ಅನ್ನೂದನ್ನ ತಿಳಿಸಿದರ ಸಾಕು, ತಮಗೆ ಹೆಚ್ಚು ತೊಂದರೆ ಕೊಡದೆ ಹೊರಟು ಹೋಗುತ್ತೇವೆ. ಅವ ನನಗ ಒಬ್ಬನೇ ಮಗ. ಚಳವಳಿಯೊಳಗ ಅವಗ ಏನು ಘಾತ ಆಗ್ತದೋ ಅಂತ ಚಿಂತಿ" ಎಂದರು ದೇಸಾಯರು.

ದೇಸಾಯರ ಹೃದಯದಲ್ಲಿ ನಡೆದ ಕೋಲಾಹಲದ ಕಲ್ಪನೆ ಸ್ವಾಮೀಜಿಯವರಿಗಿದ್ದಿತಾದರೂ ಆ ಸಮಯಕ್ಕೆ ಅವರ ಬಗ್ಗೆ ಕನಿಕರ ಬರಲಿಲ್ಲ. ಬಾಳಿನುದ್ದಕ್ಕೂ ತಪ್ಪು ದಾರಿ ತುಳಿಯುತ್ತ ಬಂದು, ಸರಕಾರದ ಬಾಲ ಹಿಡಿದುಕೊಂಡು, ಚಳವಳಿಗಳಿಗೆಲ್ಲ ವಿರೋಧ ಮಾಡುತ್ತ ದಿವಾನ್ ಬಹದ್ದೂರ್ ಪದವಿಗಾಗಿ ಹಾತೊರೆದು ಕುಳಿತಿದ್ದ ಆ ವ್ಯಕ್ತಿ, ಸ್ವಾಮಿಗಳಲ್ಲಿ ಯಾವ ಬಗೆಯ ಅನುಕಂಪವನ್ನೂ ಹುಟ್ಟಿಸಿರಲಿಲ್ಲ; ಅಂಥವರ ಬಗ್ಗೆ ಅವರಿಗೆ ಮರುಕ ಬರುವುದೂ ಸಾಧ್ಯವಿರಲಿಲ್ಲ. ಅಂತೆಯೇ ಬೇಸರದ ದನಿಯಲ್ಲಿ ನುಡಿದರು: "ಮಗನ್ನ ಹುಡುಕುವುದಕ್ಕಾಗಿ ನೀವು ನಡೆಸಿರುವ ಈ ಪ್ರಯತ್ನಗಳು ಒಂದೂ ನಮ್ಮ ಮನಸ್ಸಿಗೆ ಬರುವದಿಲ್ಲ. ಆತ ಇಲ್ಲಿಗೆ ಬಂದೂ ಇಲ್ಲ. ಬಂದಿದ್ದರೂ ನಾವು ನಿಮಗೆ ತಿಳಿಸುತ್ತಿರಲಿಲ್ಲ. ಸ್ವಾತಂತ್ರ್ಯದ ಸೈನಿಕರಿಗೆ ವಿಶ್ವಾಸಘಾತ ಮಾಡುವಷ್ಟು ಅಧಃಪತನ ಹೊಂದಿಲ್ಲ ಈ ಪೀಠ. ಇನ್ನು ನೀವು ಮಲಗಿಕೊಳ್ಳಲು ಹೋಗಿರಿ. ಹೆಚ್ಚು ಮಾತನಾಡಿ ಉಪಯೋಗವಿಲ್ಲ."

ದೇಸಾಯರು ತಲೆತಗ್ಗಿಸಿಕೊಂಡು ಹೊರಟುಹೋದರು. ಸ್ವಾಮೀಜಿಯ ದಿವ್ಯ ತೇಜಸ್ಸಿನೆದುರಿಗೆ ಮತ್ತೆ ಎದುರಾಗಿ ನಿಲ್ಲುವುದು ಸಾಧ್ಯವಿರಲಿಲ್ಲ. ಕೀರ್ತಿನಾಥನಿಗೂ ನಿರಾಶೆಯಾಗಿದ್ದಿತಾದರೂ ಕೊನೆಯ ಸಲ ಪ್ರಯತ್ನ ಮಾಡೋಣವೆಂದುಕೊಂಡು "ದಯಮಾಡಿ ನಮ್ಮನ್ನ ಕ್ಷಮಿಸಿ ಸ್ವಾಮೀಜಿ, ನಾಳೆ ಮುಂಜಾನೆ ನಾವು ತಮ್ಮನ್ನು ಅರೆಸ್ಟ್ ಮಾಡ ಬೇಕಾಗುವುದು" ಎಂದ.

"ಯಾವ ಕಾರಣದಿಂದ ಬಂಧಿಸುತ್ತೀರಿ?"

"ಚಳವಳಿಗಾರರಿಗೆ ಆಶ್ರಯ ಕೊಟ್ಟ ಆಧಾರದ ಮೇಲೆ."

"ಅದಕ್ಕೆ ಸಾಕ್ಷಿಗಳಿದ್ದಾರೆಯೋ?"

"ಸಾಕ್ಷಿಗಳು ಬೇಕೇಬೇಕು ಅಂತೇನೂ ಇಲ್ಲ. ನಾವು ನಿಮ್ಮನ್ನು ಡೆಟಿನ್ಯೂ ಆಗಿ ಇಡಬಹುದು"ಎಂದು ನುಡಿದು, ಆತ ತನ್ನ ಮಾತಿನಿಂದ ಸ್ವಾಮೀಜಿಯವರ ಮುಖದ ಮೇಲೆ ಉಂಟಾಗಬಹುದಾದ ಬದಲಾವಣೆಯನ್ನು ಗುರುತಿಸಲೆಂದು ಅವರನ್ನೇ ಸೂಕ್ಷ್ಮ ದೃಷ್ಟಿಯಿಂದ ನಿರುಕಿಸುತ್ತಿದ್ದ.

ವೇದಿಕೆಯಿಂದಿಳಿದು ಸ್ವಾಮೀಜಿ ಒಂದೆರಡು ಸಲ ಪಡಸಾಲೆಯಲ್ಲಿ ತಿರುಗಾಡಿದರು. ಅನಂತರ ಕೀರ್ತಿನಾಥನ ಹತ್ತಿರ ಬಂದು, ಅವನ ಭುಜದ ಮೇಲೆ ಬಲಗೈಯನ್ನಿಟ್ಟು ಶಾಂತಸ್ವರದಲ್ಲಿಯೇ ನುಡಿದರು: "ನೀವು ನಿಮಗೆ ತಿಳಿದಂತೆ ಮಾಡಬಹುದು. ನಾವು ಏನನ್ನೂ ಹೇಳಬಯಸುವುದಿಲ್ಲ. ಆಗಲಿ. ಈಗ ಮಲಗಿಕೊಳ್ಳಲು ಹೋಗಿರಿ. ಇವತ್ತು ನಮ್ಮ ಅತಿಥಿಗಳು ನೀವು. ಸುಖವಾಗಿ ವಿಶ್ರಾಂತಿ ತೆಗೆದುಕೊಳ್ಳಿರಿ. ಬೆಳಗ್ಗೆ ನಾಲ್ಕು ಗಂಟೆಯ ಮೇಲೆ ಯಾವಾಗ ಬೇಕಾದರೂ ನಮ್ಮನ್ನು ಬಂಧಿಸಬಹುದು."

ಬೆಳಗಿನ ಜಾವದಲ್ಲಿ ಅವರನ್ನು ಬಂಧಿಸುವುದೇ ಬೇಡವೇ ಎಂದು ಯೋಚಿಸುತ್ತಲೇ ಆತ ಹಾಸಿಗೆಯ ಮೇಲೆ ಹೊರಳಾಡುತ್ತಿದ್ದ. ಬೆಳಗಿನ ಐದು ಗಂಟೆಗೆ ಐವತ್ತು ಜನ ಪೋಲೀಸರು ಅಲ್ಲಿಗೆ ಬರಬೇಕೆಂದು ಮೊದಲೇ ತಿಳಿಸಿಯಾಗಿದ್ದಿತು. ಅವರು ಬಂದ ಮೇಲೆ ಏನನ್ನು ಮಾಡುವುದು, ಫೌಜುದಾರರಿಗೆ ಏನು ಹೇಳುವುದು ಎಂದು ಯೋಚಿಸುತ್ತಿದ್ದಾಗ ಅವನಿಗೆ ಯಾವಾಗ ನಿದ್ರೆ ಬಂದಿತೋ ತಿಳಿಯಲಿಲ್ಲ.

ಆ ಪ್ರಕಾರ ಬೆಳಗಿನ ಜಾವದಲ್ಲಿ ಪೋಲೀಸರು ಬಂದು ಮಠದ ಹತ್ತಿರ ಗಿಡಗಳ ಕೆಳಗೆ ವಿರಮಿಸಿ ಆಜ್ಞೆಗಾಗಿ ಕಾಯುತ್ತಿದ್ದರು. ಫೌಜುದಾರ

ಮಠದೊಳಗೆ ಪ್ರವೇಶಿಸಿ ಸಾಹೇಬರನ್ನು ಎಚ್ಚರಿಸತೊಡಗಿದ.

ಅದೇ ಸಮಯಕ್ಕೆ ಆ ಊರಿನ ಬಳಿ ಬಂದ ಸಂಗಣ್ಣ, ವಿಶ್ವನಾಥ ಮತ್ತು ಹೇಮಾ ಒಮ್ಮೆಲೇ ಊರನ್ನು ಪ್ರವೇಶಿಸುವುದು ಉಚಿತವೇ ಅಲ್ಲವೇ ಎಂದು ಚರ್ಚಿಸುತ್ತ ಅಗಸೆಯ ಹತ್ತಿರ ನಿಂತಿದ್ದರು.

ಊರಿನ ಅಗಸೆಯಿಂದ ಎಡಗಡೆಗೆ ತಿರುಗಿದರೆ ಎರಡು ಫರ್ಲಾಂಗ್ ದೂರದಲ್ಲಿ ಗಿಡಗಳ ಮರೆಯಲ್ಲಿ ಮಠವಿರುವುದು. ಬೆಳಗಿನ ಜಾವದ ಮಬ್ಬು ಕತ್ತಲೆಯಲ್ಲಿ ಹೇಗೋ ಕಾಲುದಾರಿಯನ್ನು ಹುಡುಕಿಕೊಂಡು ವಿಶ್ವನಾಥ ಮುಂದೆ ಸಾಗಿದ. ಮಠದ ಹಿಂದುಗಡೆಗಿದ್ದ ಪತ್ರಿಯ ಬನದ ಹತ್ತಿರ ಹಾಯ್ದು ಬಂದು, ಒಂದೆರಡು ಕ್ಷಣ ಅಲ್ಲಿಯೇ ನಿಂತುಕೊಂಡು ಸುತ್ತಲೂ ದೃಷ್ಟಿ ಓಡಿಸಿದ. ಕತ್ತಲೆಯಲ್ಲಿ ಏನೂ ಗೋಚರವಾಗುವಂತಿರಲಿಲ್ಲ. ಮತ್ತೆ ಮುಂದೆ ಸಾಗಿ, ಮಠದ ಪಕ್ಕದಲ್ಲಿದ್ದ ಗಿಡಗಳ ಬಳಿ ಬರುತ್ತಿದ್ದ ಹಾಗೆಯೆ ಒಮ್ಮೆಲೆ ಕೂಗು ಕೇಳಿಸಿತು.

"ಹಾಲ್ಟ್!"

ಅಪರಿಚಿತ ಆಕೃತಿಯೊಂದು ನಡೆದು ಬರುತ್ತಿದ್ದುದನ್ನು ಗುರುತಿಸಿ ಪೋಲೀಸನೊಬ್ಬ ಬಂದೂಕನ್ನೆತ್ತಿ ಹಿಡಿದು ಪ್ರಶ್ನಿಸಿದ.

ಒಂದು ಕ್ಷಣ ನಿಂತಲ್ಲಿಯೆ ನಿಂತಿದ್ದ ವಿಶ್ವನಾಥ. ಗಿಡದ ಅಡಿಯಲ್ಲಿ ಪೋಲೀಸರಿರುವುದಂತೂ ಗೊತ್ತಾದ ಹಾಗಾಯಿತು. ಇನ್ನೇನು ಮಾಡುವುದು ಅವರ ಕೈಯಿಂದ ಹೇಗೆ ಪಾರಾಗುವುದು ಎಂದು ಯೋಚಿಸುತ್ತಿದ್ದ ಹಾಗೆ ಮತ್ತೆ ಪೋಲೀಸ ಕೂಗಿದುದು ಕೇಳಿಸಿತು:

"ಯಾರದು ?"

ಯಾವ ಉತ್ತರವನ್ನೂ ಕೊಡಲರಿಯದ ವಿಶ್ವನಾಥ ಗೊಂದಲದಲ್ಲಿ ಬಿದ್ದು ಬಂದ ದಾರಿಯಿಂದ ಓಡತೊಡಗಿದ. ಒಡನೆಯೇ ಗುಂಡು ಹಾರಿದ ಸದ್ದು ಕೇಳಿಬಂದಿತು. ಅದರಿಂದಾಗಿ ಆತ ಇನ್ನೂ ದಿಗಿಲುಗೊಂಡು ಕಾಲುದಾರಿಯನ್ನು ಬಿಟ್ಟು, ಕಾಲು ಎಳೆದತ್ತ ಧಾವಿಸತೊಡಗಿದ.

ಆತ ಬಹುದೂರ ಹೋಗಲು ಸಾಧ್ಯವಾಗಲಿಲ್ಲ. ಮೊದಲನೆಯ ಗುಂಡು ಗುರಿ ತಪ್ಪಿಹೋದೊಡನೆ ಪೋಲೀಸ ಎರಡನೆಯ ಸಲ ಸರಿಯಾಗಿ ಗುರಿಹಿಡಿದು ಗುಂಡುಹಾರಿಸಿದ್ದ. ಪತ್ರಿಯ ಬನದಲ್ಲಿ ಹಾಯ್ದು ಓಡುತ್ತಿದ್ದ ವಿಶ್ವನಾಥ ಒಮ್ಮೆಲೆ ನೆಲಕ್ಕುರುಳಿದ-ಗುಂಡು ಅವನ ಬೆನ್ನಿಗೆ ತಾಕಿದ್ದಿತು.

ಗುಂಡು ಹಾರಿದ ಸದ್ದು ಕೇಳಿಸುತ್ತಲೂ ಮಠದಲ್ಲಿ ಮಲಗಿಕೊಂಡಿದ್ದ

ಸ್ವಾಮಿಗಳು, ದೇಸಾಯಿಯವರು, ಕೀರ್ತಿನಾಥ ಮತ್ತು ಅವನನ್ನೆಬ್ಬಿಸಲು ಹೋಗಿದ್ದ ಫೌಜುದಾರರು ಧಾವಿಸಿ ಬಂದರು. "ಯಾರು? ಯಾರವರು? ಗುಂಡು ಹಾರಿಸಿದವರಾರು?" ಎಂದು ವಿಚಾರಣೆಗಾರಂಭವಾಯಿತು. ಫೌಜುದಾರರ ಕೈಯಲ್ಲಿದ್ದ ಟಾರ್ಚು ಸುತ್ತುಮುತ್ತಲಿನ ಪ್ರದೇಶವನ್ನೆಲ್ಲ ಬೆಳಗಿಸತೊಡಗಿತು. ಅಗಸೆಯ ಹತ್ತಿರ ವಿಶ್ವನಾಥನ ಸಿಳ್ಳು ಕೇಳಿಸುವುದನ್ನೇ ಕಾಯುತ್ತ ನಿಂತಿದ್ದ ಹೇಮಾ ಸಂಗಣ್ಣ ಇಬ್ಬರಿಗೂ ಗುಂಡು ಹಾರಿದ ಸದ್ದು ಕೇಳಿಸಿದಾಗ ಗಾಬರಿಯಾಗದಿರಲಿಲ್ಲ.

"ಏನಾಯ್ತಪ್ಪಾ ಸಂಗಣ್ಣ, ಯಾರು ಗುಂಡು ಹಾರಿಸಿದರು? ಪೋಲೀಸರು ಬಂದಾರೋ ಏನೋ, ವಿಶ್ವನಾಥನಿಗೇನಾಯಿತೊ!" ಎಂದು ಕಳವಳದಿಂದ ನುಡಿದಳು ಹೇಮಾ. ಅವಳ ಕತ್ತು ಬಿಗಿದು ಬಂದಿದ್ದಿತು, ಕಣ್ಣುಗಳೂ ಕಂಬನಿಗಳಿಂದ ತುಂಬಿಹೋಗಿದ್ದುವು.

ಮಠದ ಕಡೆಗೆ ಹೊರಟಿದ್ದವರಿಬ್ಬರೂ ಒಮ್ಮೆಲೆ ನಿಂತುಕೊಂಡರು. ಮುಂದೆ ಏನು ಮಾಡಬೇಕೆನ್ನುವುದು ತೋಚಲಿಲ್ಲ. ವಿಶ್ವನಾಥನನ್ನು ಪೋಲೀಸರ ಕೈಯಲ್ಲಿ ಬಿಟ್ಟು ಹಾಗೇ ಹೊರಟುಬಿಡಲು ಒಬ್ಬರಿಗೂ ಮನಸ್ಸಿರಲಿಲ್ಲ. ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ಅವನನ್ನು ಬಿಡಿಸಿ ತರಲೇಬೇಕೆಂದು ಸಂಗಣ್ಣ ನಿರ್ಧರಿಸಿ ಹೊರಡುತ್ತಿದ್ದ ಹಾಗೇ ಯಾರೋ ಅವನನ್ನು ಗಟ್ಟಿಯಾಗಿ ಹಿಡಿದು ಕೊಂಡಂತಾಯಿತು. ಆತ ಬಾಯಿ ತೆರೆಯುವಷ್ಟರಲ್ಲಿಯೆ ಆ ವ್ಯಕ್ತಿ ಮೆಲ್ಲಗಿನ ದನಿಯಲ್ಲಿ-"ನೀವಿಬ್ಬರೂ ಇಲ್ಲಿಂದ ಹೊರಟು, ಗುಡ್ಡದಾಗಿನಿಂದ ಹಾದು ಗೋಕಾವಿಯ ಕಡೆ ನಡೀರಿ. ನಾ ಅವರನ್ನ ಬೆಳಗಾವಿಯ ಹಾದಿಯ ಕಡೆ ಹೊರಳಿಸಿ ಬರ್ತೀನಿ" ಎಂದಿತು. ದನಿಯ ಮೇಲಿನಿಂದ ಆತ ಶೇಖರನೆಂಬುದು ತಿಳಿಯುತ್ತಲೂ ಅವರಿಗೆ ಅಂಥ ಪರಿಸ್ಥಿತಿಯಲ್ಲೂ ಕೊಂಚ ಸಮಾಧಾನವಾಗದಿರಲಿಲ್ಲ. ವಿಶ್ವನಾಥನನ್ನು ಬಿಡಿಸಿಕೊಳ್ಳಬೇಕೆಂಬ ಅಪೇಕ್ಷೆ ಬಲವಾಗಿದ್ದಿತಾದರೂ ಶೇಖರನ ಮಾತಿನಂತೆ ಅವರಿಬ್ಬರೂ ತಕ್ಷಣ ಹೊರಟುಬಿಡಬೇಕಾಗಿದ್ದಿತು. ಹೇಮಾವತಿಗೆ ಕರುಳು ಕೊರೆಯುತ್ತಿತ್ತು; ಸಂಗಣ್ಣನಿಗೆ ಹುಚ್ಚು ಹಿಡಿದಂತಾಗಿದ್ದಿತು.

ಫೌಜುದಾರನ ವೇಷ ಹಾಕಿ ಕೈಯಲ್ಲಿ ಪಿಸ್ತೂಲನ್ನು ಹಿಡಿದುಕೊಂಡಿದ್ದ ಶೇಖರ ಮತ್ತೊಂದು ಸಲ ನುಡಿದ: "ಹೊರಡಿರಿ ನೀವಿಬ್ಬರೂ, ಒಂದೆರಡು ಮೈಲು ದೂರ ನಡದರ ಒಂದು ಕಾಳಮ್ಮನ ಗುಡಿ ಸಿಗುತೈತಿ. ಅಲ್ಲಿ ಕೂತಿರ್ರಿ. ನಾ ಬರ್ತೀನಿ. ಹೂಂ ನಡೀರಿ-ತಡ ಮಾಡಬ್ಯಾಡ್ರಿ."

ಅವರು ದೂರ ಹೋಗುವ ವರೆಗೂ ಸುಮ್ಮನಿದ್ದು, ಶೇಖರ ಫೌಜುದಾರನ ಹಾಗೆ ಸೆಟೆದು ನಿಂತ. ಹೇಮಾವತಿಯನ್ನು ಶೋಧಿಸುತ್ತಿದ್ದ ಪೋಲೀಸರ ಟಾರ್ಚ್‌ನ ಬೆಳಕು ಅವನ ಮೇಲೆ ಸುರಿದು, ಆತ ಧರಿಸಿದ್ದ ಫೌಜುದಾರೀ ವೇಷವನ್ನು ತೋರಿಸುತ್ತಿತ್ತು. ಪೋಲೀಸರ ದೃಷ್ಟಿ ತನ್ನ ಮೇಲೆ ಬಿದ್ದುದು ತಿಳಿಯುತ್ತಲೂ ಆತ ದರ್ಪದ ದನಿಯಲ್ಲಿ ಕೂಗಿ ಹೇಳಿದ, ಹಿಂದುಸ್ಥಾನಿಯಲ್ಲಿ:

"ಅಲ್ಯಾಕ ಸಾಯ್ತೀರೋ! ಈ ಕಡೆ ಹೋದಳು ಆ ಹುಡುಗಿ, ಬೆಳಗಾವಿಯ ರಸ್ತೇದ ಗುಂಟ. ಹೂಂ, ಹೊರಡ್ರಿ ಆ ಕಡೆಗೆ. ಕ್ವಿಕ್ ಮಾರ್ಚ್!"

ಒಡನೆಯೆ ಎಲ್ಲ ಪೋಲೀಸರೂ ಬೆಳಗಾವಿಯ ರಸ್ತೆಗೆ-ಎಂದರೆ ಸಂಗಣ್ಣ ಹೇಮಾ ಹೊರಟ ದಿಕ್ಕಿನ ವಿರುದ್ಧ ದಿಶೆಗೆ ಓಡಿದರು. ಕೀರ್ತಿನಾಥ, ಫೌಜುದಾರ, ದೇಸಾಯಿ ಮುಂತಾದವರೆಲ್ಲ ವಿಶ್ವನಾಥನ ಹತ್ತಿರ ಇದ್ದುದರಿಂದ ವೇಷಧಾರಿ ಶೇಖರ ಉಪಯೋಗಿಸಿದ ತಂತ್ರ ಅವರಿಗೆ ತಿಳಿಯಲಿಲ್ಲ. ಕೆಲಸ ಮುಗಿದೊಡನೆ ಆತ ಅಲ್ಲಿಂದ ಜಾರಿಕೊಂಡು ಕಾಳಮ್ಮನ ಗುಡಿಯತ್ತ ನಡೆದ.

ಪತ್ರಿಯ ಬನದಲ್ಲಿ ಗುಂಡು ತಾಕಿ ಬಿದ್ದಿದ್ದ ವಿಶ್ವನಾಥ ಕೊನೆಯುಸಿರು ಬಿಡುವುದರಲ್ಲಿದ್ದ. ಬಾಬಾಸಾಹೇಬರಿಗೆ ಹುಚ್ಚು ಹಿಡಿದಂತಾಗಿದ್ದಿತು. ಒಂದು ರೀತಿಯಲ್ಲಿ ಅವರ ರಾಜನಿಷ್ಠೆಯ ಹುಚ್ಚು ತೊಲಗಿಹೋಗಿದ್ದಿತು. ಮಗನನ್ನು ಚಳವಳಿಯಿಂದ ಬಿಡಿಸಿ ಕರೆದುಕೊಂಡು ಹೋಗುವುದಕ್ಕಾಗಿ ತಾವು ನಡೆಸಿದ ಪ್ರಯತ್ನಕ್ಕೆ ಇಂಥ ಕಹಿಫಲ ದೊರೆಯಬಹುದೆಂದು ಅವರ ಕನಸುಮನಸಿನಲ್ಲೂ ಬಂದಿರಲಿಲ್ಲ. ಮಗನ ಮೇಲಿದ್ದ ಪ್ರೀತಿ ಮೋಹ, ಅಕ್ಕರೆ ತುಂಬಿ ಬಂದು ಅವರ ಕಣ್ಣುಗಳಿಂದ ಕಂಬನಿಯಾಗಿ ಹರಿಯುತ್ತಿತ್ತು. ಗದ್ಗದಿತವಾದ ದನಿಯಲ್ಲಿ ಅವರು ಆಕ್ರೋಶ ಮಾಡುತ್ತಿದ್ದರು.

"ಅಯ್ಯೋ ಮಗನೇ, ವಿಶ್ವನಾಥಾ, ಎಂಥ ನೀಚ ಕೆಲಸ ಮಾಡಿದೆ! ನಾನು ಪಾಪಿ! ನಾನೇ ನಿನ್ನ ಸಾವಿಗೆ ಕಾರಣವಾದಂತಾಯ್ತು. ನಿಮ್ಮನ್ನು ಹಿಡಿಯುವುದಕ್ಕೆಂತಲೇ ಆ ಪೋಲೀಸರನ್ನ ನಾನು ಕರೆಯಿಸಿದ್ದು. ನಿನ್ನನ್ನು ಹಿಡಿಸಿ ಮನೆಗೆ ಕರೆದೊಯ್ಯಬೇಕಂತ ಮಾಡಿದ್ದೆ. ಹೀಗಾದೀತೆಂದು ಯಾರು ತಿಳಿದಿದ್ದರು? ಅಯ್ಯೋ..."

ವಿಶ್ವನಾಥ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಅವನ ಶರೀರ

ಭೀಕರ ವೇದನೆಯನ್ನನುಭವಿಸುತ್ತಿತ್ತು. ಗುಂಡು ಬಡಿದಿದ್ದ ಸ್ಥಳವನ್ನು ಬಟ್ಟೆಯಿಂದ ಬಿಗಿದು ಕಟ್ಟಿದ್ದರೂ ರಕ್ತ ಧಾರಾಕಾರವಾಗಿ ಸುರಿಯುತ್ತಿತ್ತು. ಮೃತ್ಯುವಿಗೆ ಮೊದಲಿನ ಅರ್ಧ ಚೇತನಾವಸ್ಥೆಯಲ್ಲಿ ಆತ ತೂಗಾಡುತ್ತಿದ್ದ. ದೇಸಾಯಿಯವರ ಆಕ್ರೋಶದಲ್ಲಿ ಅವನಿಗೆಷ್ಟು ಅರ್ಥವಾಗುತ್ತಿದ್ದಿತೋ ಗೊತ್ತಿಲ್ಲ!



ತುಸು ಹೊತ್ತಿನ ಮೇಲೆ ವಿಶ್ವನಾಥ ಕಣ್ಣು ತೆರೆದ. ಸ್ವಾಮೀಜಿ ಹಾಗೂ ತನ್ನ ತಂದೆ ಕಣ್ಣಿಗೆ ಬಿದ್ದರು. ಅವರನ್ನು ನಿರುಕಿಸುತ್ತ ಒಂದೊಂದೇ ಶಬ್ದ ಉಚ್ಚರಿಸತೊಡಗಿದ:

"ಹೇಮಾ ಅವರ ಕೈಗೆ ಸಿಗಬಾರದು ಸ್ವಾಮೀಜಿ... ಶೇಖರನೂ ಸಿಗಬಾರದು. ಸಂಗಣ್ಣ ತಪ್ಪಿಸಿಕೊಂಡು ಬಂದಾನ ಜೇಲಿನಿಂದ. ಅವನ್ನ ಗೋಕಾವಿಗೆ ಕಳಿಸಬೇಕು...ಇನ್ನೂ ಕೆಲಸ ಬಹಳ ಅವ. ಸ್ವಾಮೀಜಿ...ಸ್ವಾತಂತ್ರ್ಯ ಬಂದ ಮೇಲೆ ಅದನ್ನ ಕಂಡು ಕಣ್ಣು ಮುಚ್ಚಬೇಕಂತ ಆಸೆ ಇತ್ತು...ಅದುವರೆಗೂ ಹೋರಾಡಬೇಕಾಗಿತ್ತು...ಆದರೆ ದೈವೇಚ್ಛೆ...ನಾ ಹೊರಟೆ... ಸ್ವಾಮೀಜೀ... ಹೋರಾಟ ಮುಂದೆ ಸಾಗಿಸಲು ತಿಳಿಸಿರಿ ಶೇಖರಣ್ಣಗ... ಅಪ್ಪಾ..."

"ಏನು ವಿಶ್ವನಾಥ?"

"ಕಣ್ಣೊಳಗೆ ನೀರು ತರಬೇಡಿರಿ ಅಪ್ಪ. ದೇಸಾಯರ ಮನೆತನಕ್ಕ

ಅದು ಶೋಭಿಸೂದಿಲ್ಲ... ನಾ ತೀರಿಕೊಂಡೆ ಅಂತ ಶೋಕಿಸ್ತಾ ಕೂಡ್ರಬೇಡಿ. ಧೈರ್ಯ ತಂದುಕೊಳ್ಳಿ... ಅಪ್ಪಾ....."

"ಇಲ್ಲಪ್ಪಾ. ಧೈರ್ಯ ಬಿಡೋದಿಲ್ಲ. ಈಗ ನನ್ನ ಕಣ್ಣು ತೆರೆದಾವ. ಇನ್ನುಮ್ಯಾಲ ನಾನೂ ನಿನ್ನ ಕೆಲಸಕ್ಕs ಬೀಳತೀನಿ. ಈ ಸರಕಾರ ನಮ್ಮ ದೇಶದಿಂದ ತೊಲಗುವ ತನಕ ಹೋರಾಡುತೀನಿ..."

ವಿಶ್ವನಾಥನ ಮುಖ ಆನಂದದಿಂದ ಅರಳಿದ ಹಾಗೆ ತೋರಿತು. "ಅಪ್ಪಾ, ನೀವು!..ನೀವು ಚಳವಳಿಗೆ ಸೇರ್ತೀರಾ? ಆಹಾ! ಹಾ! ಎಷ್ಟು ಚಲೋ ಆಯಿತು ಸ್ವಾಮಿಜಿ... ಎಷ್ಟು ಚಲೋ ಆಯಿತು! ಅಪ್ಪ ಸ್ವತಂತ್ರನಾದ! ಸ್ವಾಮಿಜಿ...ನನ್ನ ಕಿಸೇದೊಳಗ ಪಿಸ್ತೂಲು ಅದ...ತುಂಬಿದ ಪಿಸ್ತೂಲು...ಅಪ್ಪನಿಗೆ ಕೊಡಿರಿ ಅದನ್ನ. ನೀವೇ ಅಪ್ಪಣೆ ಮಾಡ್ರಿ ಅವಗೆ. ಇಂದಿನಿಂದ ನಮ್ಮ ಅಪ್ಪನೂ ಸ್ವಾತಂತ್ರ್ಯದ ಸೈನಿಕ...ಅಪ್ಪಾ....ಅಪ್ಪಾ.." ಎಂದು ನುಡಿಯುತ್ತ ಆತ ಆವೇಶದಿಂದ ಮೇಲಕ್ಕೆದ್ದ. ಎದ್ದುದೆಷ್ಟೋ ಅಷ್ಟೆ! ಅವನ ಶರೀರ ಒಂದು ಕ್ಷಣ ಹಾಗೇ ನೆಟ್ಟಗೆ ಕುಳಿತಿದ್ದಿತು. ಅನಂತರ ಹಠಾತ್ತಾಗಿ ಕೆಳಕ್ಕೆ ಬಾಗಿತು. ಅವನ ಪ್ರಾಣಪಕ್ಷಿ ಹಾರಿಹೋದುದನ್ನು ಗುರುತಿಸಿ ಸ್ವಾಮಿಜಿ ಮುಂದುವರಿದು ಆ ಬಾಗಿದ ಶಿರವನ್ನು ಹಾಸಿಗೆಯ ಮೇಲೊರಗಿಸಿದರು.

ಮಗನ ಕಳೇಬರವನ್ನು ಕೆಲಕಾಲ ದಿಙ್ಮೂಢರಂತೆ ದಿಟ್ಟಿಸುತ್ತಿದ್ದ ದೇಸಾಯರು ಎದ್ದುನಿಂತರು. ರಕ್ತದಿಂದ ತೊಯ್ದಿದ್ದ ಅವನ ಅಂಗಿಯ ಜೇಬಿನಲ್ಲಿ ಕೈಹಾಕಿ ಅದರೊಳಗಿನಿಂದ ಪಿಸ್ತೂಲನ್ನು ತೆಗೆದುಕೊಂಡರು. ಗಾಯದಿಂದ ಸುರಿಯುತ್ತಿದ್ದ ನೆತ್ತರಿನಿಂದ ಪಿಸ್ತೂಲು ರಂಜಿತವಾಗಿದ್ದಿತು. ಬಲಗೈಯಲ್ಲಿ ಅದನ್ನು ಹಿಡಿದುಕೊಂಡು ಸ್ವಾಮಿಜಿಯವರ ಪಾದಗಳಿಗೆ ಮಣಿದರು. ಅನಂತರ ಮೇಲಕ್ಕೆದ್ದು ಸೈನಿಕರ ಹಾಗೆ ಸೆಟೆದು ನಿಂತು ಪ್ರತಿಜ್ಞೆ ಸ್ವೀಕರಿಸುವಂಥ ಗಂಭೀರ ದನಿಯಲ್ಲಿ ನುಡಿದರು.

"ನಿನ್ನ ಕಡೆಯ ಮಾತಿನಂತೆ ನಾ ಸಾಯುವ ತನಕ ಸ್ವಾತಂತ್ರ್ಯಕ್ಕಾಗಿ ದುಡೀತೇನೆ ವಿಶ್ವನಾಥ. ಸ್ವಾಮಿಗಳ ಪಾದ ಮುಟ್ಟಿ ಪ್ರತಿಜ್ಞೆ ಮಾಡಿದ್ದೇನೆ. ನಿನ್ನ ಆತ್ಮಕ್ಕೆ ಸಮಾಧಾನ ಸಿಗಲಿ!"

ಇತ್ತ ಶೇಖರ, ಹೇಮಾ ಮತ್ತು ಸಂಗಣ್ಣ ಮೌನವಾಗಿ ದಾರಿತುಳಿಯುತ್ತಿದ್ದರು. ವಿಶ್ವನಾಥನ ಸಾವು ಆ ಮೂವರನ್ನೂ ಕಂಗೆಡಿಸಿತ್ತು. ಹೇಮಾ ಅತ್ಯಂತ ಕಷ್ಟದಿಂದ ತನ್ನ ಭಾವನೆಗಳನ್ನು ಬಿಗಿಹಿಡಿದುಕೊಂಡಿದ್ದಳು.

"ನಮ್ಮ ಗುಂಪಿನ ರತ್ನ ಕಳಚಿ ಹೋಯಿತು, ಸಂಗಣ್ಣ. ಪುಣ್ಯವಂತ ಅವ. ಮಾಡಿ ಮಡಿದ" ಎಂದು ಶೋಕಿಸಿದ ಶೇಖರ.

ಪುಟ್ಟ ಗುಡ್ಡವೊಂದನ್ನು ಹತ್ತಿ ಇಳಿದು ಅವರು ಕವಲುದಾರಿಯೊಂದರ ಬಳಿ ಬಂದಾಗ ಶೇಖರ ಹೇಳಿದ.

"ನಾವು ಹೀಗೆ ಮೂವರೂ ಕೂಡಿ ಹೋಗುವುದು ಸುರಕ್ಷಿತವಲ್ಲ, ಸಂಗಣ್ಣ. ನಿನ್ನ ಹೆಂಡತಿ ದಿನ ತುಂಬಿದ ಬಸುರಿ ಅಲ್ಲವೆ. ನೀನು ಗೋಕಾವಿಗೆ ಹೋಗು. ಹೇಮಾಳನ್ನೂ ಕರೆದುಕೊಂಡು ಹೋಗು. ನಾನು ಬೆಳಗಾವಿಗೆ ಹೋಗಿ ಅಲ್ಲಿಂದ ಕೊಲ್ಲಾಪುರದ ಕಾರ್ಯಕರ್ತರ ಸಭೆ ಮುಗಿಸಿಕೊಂಡು ಗೋಕಾವಿಗೇ ಬರತೇನಿ."

12

ಕೊಲ್ಲಾಪುರದ ಸಭೆಯಲ್ಲಿ ಶೇಖರ ಎಣಿಸಿಕೊಂಡಂತೆಯೇ ಆಯಿತು. ಬರೀ ಮಾತು. ಪರಸ್ಪರ ಆರೋಪ. ಮತ್ತೆ ಸತ್ಯಾಗ್ರಹ, ಸೆರೆಮನೆಗಳ ಪ್ರಸ್ತಾಪ. ಮರುದಿನ ಪುನಃ ಸಭೆ ಸೇರಿ ಅಂತಿಮ ನಿರ್ಣಯ ಕೈಕೊಳ್ಳಬೇಕು ಎಂದು ಯೋಚಿಸಿದ್ದರು. ಆದರೆ ಆ ಪ್ರಸಂಗ ಬರಲೇ ಇಲ್ಲ! ಪೋಲೀಸರಿಗೆ ಕಾರ್ಯಕರ್ತರ ಸಭೆಯ ವಿಚಾರ ತಿಳಿದುಬಂದು, ಅವರನ್ನೆಲ್ಲ ಬಂಧಿಸಿದರು. ಶೇಖರ ಮತ್ತಿತರ ಯುವಕರು ತಪ್ಪಿಸಿಕೊಂಡರು. ಅವರುಗಳು ಬೇರೆಡೆ ಸಭೆಸೇರಿ, ಇದುವರೆಗೆ ಕಾರ್ಯನಡೆಸಿದ ರೀತಿಯಲ್ಲೇ ಚಳವಳಿಯನ್ನು ಮುಂದುವರಿಸಬೇಕು. ಗಾಂಧೀಜಿಯವರ ಅಧಿಕೃತ ಪ್ರಕಟಣೆ ಹೊರಡದ ವಿನಾ ಯಾರೂ ಹೋರಾಟ ನಿಲ್ಲಿಸಕೂಡದೆಂದು ನಿರ್ಧರಿಸಿದರು.

ಇತ್ತ ಶೇಖರ ತಾಲೂಕಿನ ಸ್ಥಳದಿಂದ ನಾಲ್ಕು ಮೈಲು ದೂರದಲ್ಲಿರುವ ಒಂದು ಹಳ್ಳಿಯಲ್ಲಿ ತನ್ನ ಗುಂಪಿನವರನ್ನು ಕಲೆಹಾಕಿದ. ಗುಂಪಿನ ಸಂಘಟನೆಗೆ ಹೆಚ್ಚು ಗಮನವಿತ್ತ. ಅದರ ಪರಿಣಾಮವಾಗಿ, ಬಸವಣ್ಣೆಪ್ಪನ ಗುಂಪೂ ಸೇರಿದಂತೆ ಒಂದು ನೂರು ಜನರ ಪಡೆ ಸಿದ್ಧವಾಯಿತು! ಬಾಬಾಸಾಹೇಬರು, ವಿವಿಧ ರೀತಿಯಲ್ಲಿ ನೆರವಾಗುತ್ತಿದ್ದರು. ವಿಶ್ವನಾಥನೇ ತನ್ನ ತಂದೆಯ ರೂಪದಲ್ಲಿ ತಮಗೆ ಸಹಾಯ ಮಾಡುತ್ತಿದ್ದಾನೆಂದು ಗುಂಪಿನವರು ಭಾವಿಸಿದರು.

ಒಂದು ತಿಂಗಳಿನ ಅವಧಿಯಲ್ಲಿ ಆ ತಾಲೂಕಿನಲ್ಲೂ, ಅದರ ಸುತ್ತುಮುತ್ತಲಿನ ಪ್ರದೇಶಗಳಲ್ಲೂ ಸರಕಾರದ ಆಡಳಿತ ಯಂತ್ರ ಪೂರ್ಣವಾಗಿ ಕುಸಿದುಹೋಗಿದ್ದಿತು. ಪೋಲೀಸರ ಸಹಾಯವಿಲ್ಲದೆ ಯಾವುದೂ

ನಡೆಯದಾಗಿದ್ದಿತು. ಹಳ್ಳಿಗಳಂತೂ ಸರಕಾರದ ವಿರುದ್ಧ ಅಸಹಕಾರವನ್ನೇ ಸಾರಿದಂತಾಗಿದ್ದಿತು. ಗೌಡ ಕುಲಕರ್ಣಿಯವರಲ್ಲಿ ಯಾರೂ ರಾಜೀನಾಮೆ ಕೊಟ್ಟಿರಲಿಲ್ಲವಾದರೂ ಸರಕಾರದ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗಲು ಸಮರ್ಥರಾಗಿರಲಿಲ್ಲ. ಅವರ ಕಾಗದಪತ್ರಗಳನ್ನೆಲ್ಲ ಸುಟ್ಟುಬಿಡಲಾಗಿದ್ದಿತು. ಆಯುಧಗಳನ್ನು ಕಸಿದುಕೊಳ್ಳಲಾಗಿದ್ದಿತು. ಚಾವಡಿಗಳನ್ನು ಸುಡಲಾಗಿದ್ದಿತು. ಸರಕಾರಕ್ಕೆ ನೆರವಾಗಿ ಚಳವಳಿಗೆ ದ್ರೋಹ ಬಗೆಯುವವರ ಹೊಲಗಳನ್ನೆಲ್ಲ ನಾಶಗೊಳಿಸಲಾಗಿದ್ದಿತು.

ಪೋಲೀಸರಿಗೂ ಅಷ್ಟೆ. ಐದಾರು ತಿಂಗಳುಗಳಿಂದ ಹಳ್ಳಿಪಳ್ಳಿ ಗುಡ್ಡ ಬೆಟ್ಟ ತಿರುಗಿ, ನಿದ್ರೆಯಿಲ್ಲದೆ ವಿರಾಮವಿಲ್ಲದೆ ದುಡಿದು ಅವರೂ ಬೇಸರಗೊಂಡಿದ್ದುದು ಸ್ಪಷ್ಟವಾಗಿ ಗೊತ್ತಾಗುವಂತಿದ್ದಿತು. ಜನರ ಅಸಹಕಾರ, ವಿರೋಧ ಬೇರೆ. ಬಡ ಪೋಲೀಸರಿಗೆ ಬೇಸರ ಬಂದಿದ್ದುದು ನಿಜವಾದರೂ ಮೇಲಧಿಕಾರಿಗಳಲ್ಲಿ ಅನೇಕರಿಗೆ ಕೊಂಚವೂ ನಿರಾಶೆಯಾಗಿರಲಿಲ್ಲ. ಕೀರ್ತಿನಾಥನಂಥ ಮಹತ್ವಾಕಾಂಕ್ಷಿ ಅಧಿಕಾರಿಗಳು ಮುಂದೆ ದೊರೆಯ ಬಹುದಾದ ದೊಡ್ಡ ಸ್ಥಾನಗಳ ಮೇಲೆ ದೃಷ್ಟಿಯನ್ನಿರಿಸಿ ಹಟದಿಂದ ಕೆಲಸ ಮಾಡುತ್ತಿದ್ದರು. ಅಧಿಕಾರಿಗಳ ನಿರ್ಧಾರದಂತೆಯೇ ಚಳವಳಿಗಾರರ ನಿರ್ಧಾರವೂ ಅಷ್ಟೇ ಹಟದಿಂದ ಕೂಡಿತ್ತು. ಸಾವಿರಾರು ಜನ ಪೋಲೀಸರು ಬಂದರೂ ಸರಿಯೆ, ಆ ವಿಭಾಗವನ್ನೆಲ್ಲ ಅವರು ಸುತ್ತುಗಟ್ಟಿದರೂ ಸರಿಯೆ, ಹಲವಾರು ಜನರ ಪ್ರಾಣ ತೆಗೆದುಕೊಂಡರೂ ಸರಿಯೆ- ಎಂಥ ಪ್ರಸಂಗ ಬಂದರೂ ಹೋರಾಟವನ್ನು ನಿಲ್ಲಿಸದೆ ಮುಂದುವರಿಸುವುದೆಂದು ಅವರು ದೃಢ ಪ್ರತಿಜ್ಞೆ ಮಾಡಿದ್ದರು.

ಅವರೆಲ್ಲರೂ ಅಂದು ರಾತ್ರಿ ಆ ಹಳ್ಳಿಯಲ್ಲಿ ಬಿಡಾರ ಹೂಡಿದ್ದರು. ಮಾರನೆಯ ದಿನ ಬೆಳಗಿನ ಜಾವದಲ್ಲಿ ತಾಲೂಕು ಕಚೇರಿಯ ಮೇಲೆ ದಾಳಿ ನಡೆಸಬೇಕೆಂದು ಮೊದಲೇ ಗೊತ್ತಾಗಿದ್ದಿತು. ಅದು ಅತ್ಯಂತ ಮಹತ್ವದ ಹಾಗೂ ಗಂಡಾಂತರದ ಕೆಲಸವಾದುದರಿಂದ ಅದಕ್ಕಾಗಿ ಅಗತ್ಯವಿರುವ ಸಿದ್ಧತೆಗಳನ್ನೆಲ್ಲ ಮೊದಲೇ ಬಹು ಜಾಣತನದಿಂದ ಯೋಜಿಸಲಾಗಿದ್ದಿತು. ಆ ಸಮಯದಲ್ಲಿ ತಾಲೂಕಿನ ಸ್ಥಳದಲ್ಲಿ ಹೆಚ್ಚು ಜನ ಪೋಲೀಸರಿರಲಿಲ್ಲವೆಂಬ ವಿಷಯವೂ ಮೊದಲೇ ತಿಳಿದಿದ್ದಿತು. ಅಂತೆಯೇ, ದಾಳಿಯ ವಿಚಾರವನ್ನು ಗುಪ್ತವಾಗಿರಿಸಿ, ಅವರು ಅಲ್ಲಿ ಬಿಡಾರ ಹೂಡಿದ್ದರು.

ಗೊತ್ತಾದ ಮೇರೆಗೆ ಬೆಳಗಿನ ಜಾವದಲ್ಲಿ ಗುಂಪಿನವರೆಲ್ಲ ಎದ್ದು

ತಾಲೂಕಿನ ಸ್ಥಳದ ಕಡೆಗೆ ಸಾಗಿದರು. ಚಿಕ್ಕೆಗಳ ಬೆಳಕಿನಲ್ಲಿ ಕಾಲುದಾರಿ ಹಿಡಿದು ಇಬ್ಬಿಬ್ಬರಂತೆ ಸಾಲುಸಾಲಾಗಿ, ಅರ್ಧ ಮೈಲಿಯುವರೆಗೂ ಪುಟ್ಟದೊಂದು ದಂಡಿನ ಹಾಗೆ ನಡೆದಿತ್ತು ಆ ಗುಂಪು. ಎಲ್ಲರ ಕೈಯಲ್ಲೂ ಬಗೆಬಗೆಯ ಆಯುಧಗಳಿದ್ದುವು. ಎಲ್ಲರಿಗೂ ಮುಂದೆ ಪೈಲ್ವಾನ್ ಸಂಗಣ್ಣ ಹೆಗಲ ಮೇಲೆ ಒಂದು ರೈಫಲ್ ತೂಗಿ ಹಾಕಿಕೊಂಡು ಸೇನಾಪತಿಯಂತೆ ಠೀವಿಯಿಂದ ಅಡಿಯಿಡುತ್ತ ನಡೆದಿದ್ದ. ಹೇಮಾ, ಶೇಖರ, ಬಸವಣ್ಣೆಪ್ಪ ಮೊದಲಾದವರು ಅವನ ಹಿಂದಿನಿಂದ ನಡೆದು ಬರುತ್ತಿದ್ದರು.

ಅರ್ಧ ತಾಸಿನೊಳಗಾಗಿ ಎರಡು ಮೈಲು ಹಾದಿ ತುಳಿದು ಅವರು ತಾಲೂಕಿನ ಸ್ಥಳವನ್ನು ಸಮೀಪಿಸಿ ಮುಖ್ಯ ರಸ್ತೆಯ ಹತ್ತಿರ ಬಂದುಬಿಟ್ಟಿದ್ದರು. ಇನ್ನುಳಿದ ಎರಡು ಮೈಲುಗಳನ್ನೂ ಆ ರಸ್ತೆಯ ಮೇಲೇ ಹಾಯ್ದು ಕಳೆಯಬೇಕಾಗಿದ್ದಿತು. ಬೇರಾವ ದಾರಿಯೂ ಇರಲಿಲ್ಲ. ಗಂಡಾಂತರದ ಪ್ರದೇಶ ಬರುತ್ತಲೇ ಎಲ್ಲರೂ ಸದ್ದು ಮಾಡದೆ ಮೌನವಾಗಿ ನಡೆಯತೊಡಗಿದರು.

ಇನ್ನೇನು ಊರು ಹತ್ತಿರ ಬಂದುಬಿಟ್ಟಿತು-ಅಷ್ಟರಲ್ಲಿಯೇ ಎದುರಿನಿಂದ ಮೋಟಾರು ಲಾರಿಗಳು ಬರುವ ಸದ್ದು ಕೇಳಿಸತೊಡಗಿತು. ಒಂದೆರಡು ನಿಮಿಷಗಳಲ್ಲಿ ಅವುಗಳ ಪ್ರಖರ ಬೆಳಕೂ ಕಾಣಿಸಿತು. ಗುಂಪಿನವರೆಲ್ಲ ರಸ್ತೆಯನ್ನು ಬಿಟ್ಟು ಪಕ್ಕಕ್ಕೆ ಸರಿದು ಗಿಡಗಳ ಕೆಳಗೆ ನಿಂತುಕೊಂಡರು. ಶೇಖರ, ಬಸವಣ್ಣೆಪ್ಪ, ಹೇಮಾ ಮೂವರೂ ಒಂದೆಡೆ ಸೇರಿ ಲಾರಿಗಳು ಎಲ್ಲಿಂದ, ಏತಕ್ಕಾಗಿ ಬರುತ್ತಿರಬಹುದೆಂಬುದನ್ನು ಕುರಿತು ಯೋಚಿಸತೊಡಗಿದರು.

ಯೋಜಿತ ದಾಳಿಯ ಸುಳಿವು ಪೋಲೀಸರಿಗೆ ಹತ್ತಿದೆ-ಎಂದು ಶೇಖರನಿಗನ್ನಿಸಿತು. "ನಾವು ಇಲ್ಲಿಂದ ಹಿಂತಿರುಗಿ ಹೋಗಬೇಕು. ಇಂದು ಕೆಲಸ ಆಗೋ ಯೋಗ ಇಲ್ಲ" ಎಂದ. ಅದನ್ನು ಕೇಳಿ ಸಂಗಣ್ಣ ಹೇಳಿದ.

"ಇಷ್ಟು ಹುರುಪಿನಿಂದ ಇಲ್ಲೀತನಕ ಬಂದು ಹೀಂಗ ಹಿಂದ ಹೋಗೋದು ನನ್ನ ಮನಸ್ಸಿಗಂತೂ ಬರೂದಿಲ್ಲ."

ಅಂದು ಪೋಲೀಸಿನವರ ಗುಂಡಿಗೆ ಆಹುತಿಯಾಗಿ ಮಡಿದ ತನ್ನ ತಾಯಿಯ ಮೂರ್ತಿ ಅವನ ಕಣ್ಣ ಮುಂದೆ ನಿಂತು ಅವನನ್ನೂ ಹಣಾಹಣಿಗೆ ಹುರಿದುಂಬಿಸುತ್ತಿತ್ತು.

"ನಾನಂತೂ ಇಲ್ಲಿಂದ ಕದಲೂದಿಲ್ಲ!"

ಲಾರಿಗಳ ಬೆಳಕು ತೀರ ಹತ್ತಿರ ಬಂತು. ಯಾರು ಎಷ್ಟು ಹೇಳಿದರೂ

ಸಂಗಣ್ಣ ಕೇಳಲೊಲ್ಲ. ಅವನೇನಾದರೂ ಗುಂಡು ಹಾರಿಸಿದರೆ ಮೃತ್ಯುವಿಗೇ ಆಹ್ವಾನ ಕೊಟ್ಟಂತೆ.

"ನಡೀ ಸಂಗಣ್ಣಾ ನಡೀ. ಸಣ್ಣ ಹುಡುಗರ ಹಾಂಗ ಹಟ ಮಾಡಬೇಡಾ" ಎಂದು ಶೇಖರ ಅವನ ರಟ್ಟೆ ಹಿಡಿದು ಎಳೆದರೂ ಸಂಗಣ್ಣ ಕೊಸರಿಕೊಂಡು ರಸ್ತೆಗೆ ನುಗ್ಗಿದ. ರೈಫಲ್ ಎತ್ತಿ ಕೇವಲ 8 - 10 ಮಾರು ಸನಿಹದಲ್ಲಿದ್ದ ಲಾರಿಯ ಕಡೆಗೆ ಗುಂಡು ಹಾರಿಸತೊಡಗಿದ.

ಆ ಲಾರಿ ಒಮ್ಮೆಲೇ ನಿಂತುಕೊಂಡಿತು. ಅದರ ಬ್ರೇಕುಗಳ ಘೋರ ಗರ್ಜನೆಯ ಜತೆಯಲ್ಲೇ 'ಅಯ್ಯೋ' ಎಂಬ ಕರ್ಕಶ ಆರ್ತನಾದವೂ ಕೇಳಿಸಿತು. ಸಂಗಣ್ಣನ ಗುಂಡು ಯಾರನ್ನೋ ಆಹುತಿಯಾಗಿ ತೆಗೆದುಕೊಂಡದ್ದು ಸ್ಪಷ್ಟವಾಗಿದ್ದಿತು. "ಕೀರ್ತಿನಾಥನ ದನಿಯ ಹಾಗೆ ಕೇಳಿಸುತ್ತದಲ್ಲ ಶೇಖರಣ್ಣ?" ಎಂದಳು ಹೇಮಾ.

"ಏನೋ. ಇದ್ದರೂ ಇರಬಹುದು. ಫ್ರಂಟ್ ಸೀಟಿನಾಗ ಕೂತಿದ್ದನೋ ಏನೋ ಅವ!" ಎಂದು ಶೇಖರ ಹೇಳುತ್ತಿದ್ದ ಹಾಗೇ ಲಾರಿಯ ಕಡೆಯಿಂದ ಗುಂಡುಗಳ ಮಳೆ ಸುರಿಯಲಾರಂಭವಾಯಿತು.

ರೈಫಲ್ಲನ್ನೆತ್ತಿಕೊಂಡು ಒಂದೇ ಸಮನೆ ಗುಂಡು ಹಾರಿಸುತ್ತ ನಿಂತಿದ್ದ ಸಂಗಣ್ಣ ಹಠಾತ್ತಾಗಿ ನೆಲಕ್ಕುರುಳಿದ. "ಇಂದಿಗೆ ನನ್ನ ಪಣಾ ಮುಗಿದಂಗಾಯ್ತು. ಒಂದು ಜೀವಕ್ಕ ಒಂದು ಜೀವಾ ತಕ್ಕೊಂಡೆ. ಹಾ! ಹಾ! ಹಾ! ನನ್ನ ಅವ್ವಾ!..." ಎಂದು ಆತ ಕಿರಿಚಿಕೊಳ್ಳುವುದೂ ಕೇಳಿಸಿತು. ಇನ್ನು ಅವನ ಆಸೆ ಮುಗಿಯಿತೆಂದು ತಿಳಿದು ಗಿಡದ ಮರೆಗೆ ಅಡಗಿಕೊಂಡಿದ್ದವರೆಲ್ಲ ಓಡತೊಡಗಿದರು.

ಒಮ್ಮೆಲೆ ಬೆಳಕಿನ ಅಳವಿನಲ್ಲಿ ಬಂದ ಮೂರು ಆಕೃತಿಗಳು ಕಣ್ಣಿಗೆ ಬೀಳುತ್ತಲೇ ಪೋಲೀಸರು ಲಾರಿಯಿಂದಿಳಿದು ಗುಂಡು ಹಾರಿಸುತ್ತಾ ಓಡಿ ಬರತೊಡಗಿದರು.

ಶೇಖರ, ಹೇಮಾ, ಬಸವಣ್ಣೆಪ್ಪ ಮೂವರೂ ವಾಯುವೇಗದಿಂದ ಓಡುತ್ತಿದ್ದರು. ಇಳುಕಲನ್ನು ಬಿಟ್ಟು ಮುಂದೆ ಸಾಗಿದರೆ ಪುಟ್ಟ ಗುಡ್ಡವೊಂದನ್ನು ಸೇರಬಹುದಾಗಿತ್ತು. ಅಲ್ಲಿಯವರೆಗೆ ತಪ್ಪಿಸಿಕೊಂಡು ಹೋಗುವುದು, ಅದೂ ಜೀವಸಹಿತವಾಗಿ ಪಾರಾಗುವುದು ತೀರ ಕಷ್ಟಸಾಧ್ಯವಾದ ವಿಷಯವಾಗಿದ್ದಿತು. ಸಂಗಣ್ಣನ ಉದ್ರೇಕದಿಂದಾಗಿ ತಮ್ಮ ಗುಂಪಿಗೆಲ್ಲ ಇಂಥ ಗಂಡಾಂತರದ ಪ್ರಸಂಗ ಬಂದುದಕ್ಕಾಗಿ ಶೇಖರನಿಗೆ

ಬೇಸರವಾಗಿದ್ದಿತಾದರೂ ಆ ಸಂದರ್ಭದಲ್ಲಿ ಅವರಾರಿಗೂ ಆತನ ಬಗ್ಗೆ ಕೋಪವಿರಲಿಲ್ಲ. ಹೇಗಾದರೂ ಅಲ್ಲಿಂದ, ಆ ಪೋಲೀಸರಿಂದ ತಪ್ಪಿಸಿಕೊಂಡು ಹೋಗಿ ಕೆಲಸ ಮುಂದುವರಿಸುವುದೇ ಅವರೆಲ್ಲರ ಯೋಚನೆಯಾಗಿದ್ದಿತು.

ಹಿಂದಿನಿಂದ ಗುಂಡು ಹಾರಿಬರುತ್ತಿದ್ದವು. "ಏ, ನಿಲ್ರಿ. ಇಲ್ಲದಿದ್ದರ ಸಾಯ್ತೀರಿ ಎಲ್ಲರೂ" ಎಂದು ಫೌಜುದಾರನೊಬ್ಬ ಕೂಗುತ್ತಿದ್ದುದೂ ಕೇಳಿಬರುತ್ತಿತ್ತು.

ಓಡುತ್ತಿದ್ದ ಹಾಗೇ ಹೇಮಾ-"ಇನ್ನೇನು ಮಾಡೂದು ಶೇಖರಣ್ಣ, ನಾವೂ ಗುಂಡಿನಿಂದ ಉತ್ತರ ಕೊಡೋಣವೇನು?" ಎಂದಳು.

"ಬೇಡ. ಎಂಥ ಪ್ರಸಂಗ ಬಂದರೂ ನಮ್ಮ ತತ್ವವನ್ನು ಬಿಡೂಹಾಂಗಿಲ್ಲ ಆ ಸಂಗಣ್ಣ ಅದನ್ನ ಮುರಿದುಬಿಟ್ಟ.... ಹೂಂ...ಓಡು!"

"ಹೀಗೆ ಓಡಿಹೋಗೂದು ನನಗೂ ಸರಿಬರುವದಿಲ್ಲ. ಹೇಡಿತನ ಇದು, ಕೈಯೊಳಗ ಪಿಸ್ತೂಲು ಇಟ್ಟುಕೊಂಡು ಹೀಗೆ ಓಡೂದಂದರೇನು... ನೀವು ಹೋಗ್ರಿ ಬೇಕಾದರ... ನಾ ಅವರನ್ನ ಎದುರಿಸುತೀನಿ" ಎಂದು ನುಡಿದ ಹೇಮಾ ಪಿಸ್ತೂಲನ್ನೆತ್ತಿ ಹಿಂದೆ ತಿರುಗಿದಳು. ಒಡನೆಯೇ ಎದುರಿನಿಂದ ಒಂದು ಗುಂಡು ಸುಯ್ಯೆಂದು ಬೀಸಿ ಬಂದು ಅವಳ ಎಡತೋಳಿಗೆ ತಾಕಿತು.'ಅಯ್ಯೋ'ಎಂದು ಕೂಗಿಕೊಂಡರೂ ಆಕೆ ಪಿಸ್ತೂಲನ್ನು ಬಿಡಲಿಲ್ಲ. ಹತ್ತಿರದಲ್ಲಿದ್ದ ಗಿಡದ ಮರೆಗೆ ನಿಂತುಕೊಂಡು ಧಾವಿಸಿ ಬರುತ್ತಿದ್ದ ಪೋಲೀಸರ ಕಡೆಗೆ ಒಂದರ ಮೇಲೊಂದು ಗುಂಡು ಹಾರಿಸಿದಳು.

ಎದುರುತ್ತರ ಬಂದುದನ್ನು ಕಂಡು ಪೋಲೀಸರು ಒಂದೆರಡು ನಿಮಿಷ ತಡೆದು ನಿಂತುಕೊಂಡರು. ಹಾಗೇ ಮುಂದುವರಿಯುವುದು ಗಂಡಾಂತರದ್ದೆಂದು ತಿಳಿದು ಅಲ್ಲಲ್ಲಿ ಅವಿತುಕೊಂಡು ಮತ್ತೆ ಗುಂಡು ಹಾರಿಸತೊಡಗಿದರು.

ಓಡುತ್ತಿದ್ದ ಬಸವಣ್ಣೆಪ್ಪನೂ ಶೇಖರನೂ ಹೇಮಳ ಬಳಿ ಬಂದು ಕ್ಷಣಕಾಲ ದಿಙ್ಮೂಢರಾದಂತೆ ನಿಂತುಕೊಂಡಿದ್ದರು. ಮುಂದೆ ಏನು ಮಾಡಬೇಕೆಂಬುದೇ ಇಬ್ಬರಿಗೂ ಹೊಳೆಯುತ್ತಿರಲಿಲ್ಲ. ಮೊದಲು ಸಂಗಣ್ಣ, ಈಗ ಹೇಮಾ... ಅವರಿಬ್ಬರಿಗೂ ಕದನದ ಆವೇಶವೇರಿ, ಅವರನ್ನು ಆಹುತಿಯಾಗಿ ತೆಗೆದುಕೊಂಡಿದ್ದುದು ಸ್ಪಷ್ಟವಾಗಿದ್ದಿತು. ಹಿಂಸೆ ಮಾಡಕೂಡದೆಂಬ ತತ್ವ ಎಲ್ಲೋ ಮಾಯವಾಗಿತ್ತು, ಆ ಆವೇಶದ

ಅಮಲಿನಲ್ಲಿ.

"ಎಲ್ಲಿ ಬಡೀತು ಗುಂಡು ಹೇಮಾ?" ಎಂದ ಶೇಖರ, ಅವಳ ಪಕ್ಕದಲ್ಲಿ ಕುಳಿತುಕೊಂಡು.

"ಎಲ್ಲಾದರೂ ಬಡೀಲೊಲ್ಲದ್ಯಾಕೆ ಶೇಖರಣ್ಣ. ನೀವೀಗ ನನ್ನನ್ನ ನನ್ನ ಪಾಡಿಗೆ ಬಿಟ್ಟು ಇಲ್ಲಿಂದ ಪಾರಾಗಿ ಹೋಗ್ರಿ. ಹ್ಯಾಗೂ ನನ್ನ ಹತ್ತಿರ ಸಾಕಷ್ಟು ಗುಂಡು ಇದಾವೆ... ಒಂದು ತಾಸಿನ ತನಕ ಇವರನ್ನ ತಡೀತೇನೆ ನಾನು. ಅಷ್ಟರೊಳಗs ನೀವಿಬ್ಬರೂ ಗುಡ್ಡಾ ಇಳಿದು ಗೋಕಾವಿ ರಸ್ತೇಕ್ಕ ಹೋಗಿ ಮುಟ್ಟುತೀರಿ. ನಡೀರಿ. ಹೊರಡ್ರಿ. ಇಲ್ಲಿಂದ...."ಎಂದು ನುಡಿದು ಆಕೆ ಮತ್ತೆ ಗುಂಡು ಹಾರಿಸತೊಡಗಿದಳು.



ಆಕೆಯನ್ನು ಅಂಥ ಸ್ಥಿತಿಯಲ್ಲಿ ಬಿಟ್ಟು ಅಲ್ಲಿಂದ ಹೊರಡುವುದು ಸಾಧ್ಯವೇ ಇರಲಿಲ್ಲ. "ನೀನೇ ಹೊರಡು, ಹೇಮಕ್ಕ. ನೀವಿಬ್ಬರೂ ಹೋಗ್ರಿ. ನಾ ಇಲ್ಲಿ ಕೂತುಕೊಂಡು ಇವರನ್ನ ತಡೆದು ಹಿಡೀತೇನೆ" ಎಂದು ನುಡಿದು ಬಸವಣ್ಣೆಪ್ಪ ತನ್ನ ರಿವಾಲ್ವರನ್ನು ಎತ್ತಿದ.

"ನೀನೂ ಮರೀತೀಯೇನೋ ತತ್ವವನ್ನ?" ಎಂದ ಶೇಖರಪ್ಪ.

"ಇಂಥಾ ಹೊತ್ತಿನಾಗ ತತ್ವ ಎಲ್ಲಿ ಉಳಿಯಬೇಕು ಶೇಖರಣ್ಣಾ? ನೀವಿಬ್ಬರೂ ನಮ್ಮ ಗುಂಪಿಗೆ ಪ್ರಾಣ ಇದ್ದ ಹಾಂಗ. ಇಬ್ಬರೂ ಪಾರಾಗಿ

ಹೋಗಬೇಕು. ಹೇಮಕ್ಕಗೂ ಅಂಥ ಗಾಯ ಏನೂ ಆಗಿರಲಿಕ್ಕಿಲ್ಲ. ನೆಟ್ಟಗಾದಾಳು. ನೀವಿಬ್ಬರೂ ಕೆಲಸ ಮುಂದುವರಿಸಬೇಕು. ನಡೀರಿ" ಎಂದು ಆತ ಹೇಳುತ್ತಿದ್ದ ಹಾಗೇ ಒಮ್ಮೆಲೇ ಎರಡು ಗುಂಡು ಹಾರಿಬಂದುವು. ಗಿಡದ ಆಸರೆಯಿಂದ ಕೊಂಚ ಈಚೆಗೆ ಬಂದಿದ್ದ ಶೇಖರನ ಬಲ ತೊಡೆಗೆ ಒಂದು ಗುಂಡು ತಾಕಿತು. ಇನ್ನೊಂದು ಗುಂಡು 'ಬಸವಣ್ಣೆಪ್ಪನ' ಹಣೆಗೇ ಏಟು ಕೊಟ್ಟಿರಬೇಕು. ಆತ 'ಅವ್ವಾ!' ಎಂದು ಒಂದೇ ಒಂದು ಸಲ ಭೀಕರವಾಗಿ ಕೂಗಿ ಬಿದ್ದುಬಿಟ್ಟ. ಅವನ ಕೈಯಲ್ಲಿದ್ದ ರಿವಾಲ್ವರ್ ಕೆಳಗೆ ಬಿತ್ತು.

ಬಸವಣ್ಣೆಪ್ಪ ಮಡಿದುದು ಗೊತ್ತಾಗುತ್ತಲೇ ಶೇಖರನಿಗೂ ಆವೇಶ ಬಂದುಬಿಟ್ಟಿತು. ಅವನಿಗೆ ಗೊತ್ತಾಗದಂತೆ ಪಿಸ್ತೂಲು ಅವನ ಕೈಗೆ ಬಂದಿತು. ಅವನ ಶರೀರದಲ್ಲೆಲ್ಲ ಪ್ರವೇಶಿಸಿದ್ದ ಯಾವುದೋ ಒಂದು ಅದ್ಭುತ ಶಕ್ತಿ ಅವನಿಂದ ಗುಂಡು ಹಾರಿಸುವ ಕೆಲಸ ಮಾಡಿಸತೊಡಗಿತು.

ಎದುರಿನಿಂದ ಗುಂಡು ಬರುವುದು ನಿಂತು ಹೋಯಿತು. ಮತ್ತೆ ಪೋಲೀಸರು ಮರೆಯಲ್ಲಿ ಅಡಗಿಕೊಳ್ಳುತ್ತಿದ್ದಿರಬೇಕು.

"ಓಡು ಹೇಮಾ. ಇಲ್ಲಿಂದ ಪಾರಾಗಿ ಹೋಗೋಣ" ಎಂದು ನುಡಿದ ಶೇಖರ ಗುಂಡು ಹಾರಿಸುತ್ತಲೇ ಓಡತೊಡಗಿದ. ಅಷ್ಟು ಹೊತ್ತಿಗೆ ಅವರು ಗುಡ್ಡದ ಹತ್ತಿರ ಬಂದು ಬಿಟ್ಟಿದ್ದರು.

ಗುಡ್ಡದ ಏರು ಮುಗಿದು ಇಳುಕಲು ಪ್ರಾರಂಭವಾಗಿತ್ತು. ಹಿಂದಿನಿಂದ ಗುಂಡು ಹಾರುವುದೂ ಕೇಳಿಬರುತ್ತಿತ್ತು. ಇಳುಕಲನ್ನು ಮುಗಿಸಿ ಮುಂದುವರಿದರೆ ಗೋಕಾವಿಯ ದಾರಿ ಸಿಗುತ್ತದೆ; ಅದನ್ನು ಹಿಡಿದು ಪಾರಾಗಿ ಹೋಗಬಹುದು....ಕೊಂಚ ದೂರ ಹೋದ ಬಳಿಕ ಎದುರಿಗೆ ರಸ್ತೆಯ ಎಡಭಾಗದಲ್ಲಿ ಎಂಥದೊ ಒಂದು ವಾಹನ ನಿಂತುಕೊಂಡಿದ್ದ ಹಾಗೆ ಕಾಣಿಸಿತು.

ಇಬ್ಬರೂ ಒಮ್ಮೆಲೆ ನಿಂತುಕೊಂಡರು. ಮುಂದೆ ಎತ್ತ ಹೊರಳಬೇಕೆಂಬುದು ಹೊಳೆಯಲಿಲ್ಲ. ತಮ್ಮನ್ನು ಬಂಧಿಸಲೆಂದೇ ಆ ಪೋಲೀಸರು ಲಾರಿಯೊಂದಿಗೆ ಅಲ್ಲಿಗೆ ಬಂದು ದೀಪವನ್ನಾರಿಸಿ ಕತ್ತಲೆಯಲ್ಲಿ ಕುಳಿತಿರಬೇಕೆಂದು ಅವರಿಗನ್ನಿಸಿತು. ಅಂತೂ ಇಷ್ಟು ಹೊತ್ತು ಕಷ್ಟಪಟ್ಟು, ಗುಡ್ಡ ಏರಿ ಇಳಿದು ಓಡಿಬಂದುದೆಲ್ಲ ವ್ಯರ್ಥವಾಯಿತು ಹಾಗಾದರೆ! ಸತ್ತರೂ ಪೋಲೀಸರ ಕೈಗೆ ಸಿಗದೆ ಸಾಯಬೇಕು, ಸ್ವತಂತ್ರವಾಗಿಯೇ

ಸಾಯಬೇಕು ಎಂದುಕೊಂಡದ್ದು ವ್ಯರ್ಥವಾಯಿತು ಹಾಗಾದರೆ!

"ಯಾವುದೋ ಲಾರಿ ಶೇಖರಣ್ಣ. ಓಡಬೇಡ, ನಿಲ್ಲು" ಎಂದು ಹೇಮಾ ಕೊಂಚ ಗಟ್ಟಿಯಾಗಿಯೆ ಕೂಗಿದಳು.

"ಯಾರಪಾ ಅವರು 'ಶೇಖರಣ್ಣಾ' ಅನ್ನುವವರು?" ಎಂಬ ಕೂಗಿನೊಂದಿಗೆ ಎದುರಿನಿಂದ ಟಾರ್ಚ್‌ನ ಬೆಳಕು ತೂರಿಬಂದಿತು. ಎದೆಯ ಮೇಲೆ ಉರುಳುವುದರಲ್ಲಿದ್ದ ಭಾರೀ ಬಂಡೆ ದೂರ ಸರಿದು ಹೋದಂತಾಯಿತು ಶೇಖರನಿಗೆ. ಪರಿಚಿತವಾದುದಾಗಿತ್ತು ಆ ಧ್ವನಿ. ಅದು ತಮ್ಮ ಕಲ್ಲಾಪುರದ ಹಸನ್ ಸಾಬಿಯದು.

ಟಾರ್ಚ್‌ನ ಬೆಳಕಿನಲ್ಲಿ ಶೇಖರನನ್ನು ಕಂಡು ಹಸನ್ ಸಾಬಿ ಆತುರದಿಂದ ಅವನ ಬಳಿ ಬಂದ. ಆನಂದ ಆಶ್ಚರ್ಯಗಳಿಂದ ನಡುಗುವ ಧ್ವನಿಯಲ್ಲಿ "ಇಲ್ಯಾಕ ಶೇಖರಣ್ಣಾ? ಇಂಥಾ ಹೊತ್ತಿನಾಗ? ಇದೇನು ನಿಮ್ಮಿಬ್ಬರಿಗೂ ಗಾಯ ಆಗೇತಲ್ಲ?" ಎಂದ.

ನಡೆದುದೆಲ್ಲವನ್ನೂ ಸ್ವಲ್ಪದರಲ್ಲಿಯೆ ವಿವರಿಸಿದ ಮೇಲೆ ಶೇಖರ "ನೀನ್ಯಾಕಪಾ ಇಲ್ಲಿ? ಯಾರದು ಆ ಲಾರಿ?" ಎಂದ.

"ನಮ್ಮದ್ರs ನಮ್ಮದ್ರs ಇದ್ದ ಹಾಂಗs. ಗೌಡರ ಚೀಲ ಹಾಕ್ಕೊಂಡು ಹೊಂಟೀವಿ. ನಡೀರಿ. ಇಬ್ಬರೂ ಹತ್ತಿ ಮಲಗಿಕೊಂಡು ಬಿಡ್ರಿ ಮ್ಯಾಲ. ಪೋಲೀಸರು ಅದಾರೇನು ಹಿಂದ?"

"ಹೌದು. ಗುಡ್ಡಾ ಇಳೀತಿರಬಹುದು ಅವರು."

ಸಾಬಿಯ ಸಹಾಯದಿಂದ ಲಾರಿಯನ್ನೇರಿ ಇಬ್ಬರೂ ಚೀಲಗಳ ಮೇಲೆ ಮಲಗಿಕೊಂಡರು. ಟಾರ್ಚ್‌ನ ಬೆಳಕಿನಲ್ಲಿ ಗಾಯಗಳಿಗೆಲ್ಲ ಬಟ್ಟೆ ಕಟ್ಟಿದ್ದಾಯಿತು. ಲಾರಿ ಓಡತೊಡಗಿತು.

ಅತೀವ ವೇದನೆಯಿಂದಲೂ, ರಕ್ತಸ್ರಾವದಿಂದ ತಲೆದೋರಿದ ನಿಶ್ಯಕ್ತಿಯಿಂದಲೂ ನರಳುತ್ತ ಹೇಮಾ ಬಿದ್ದುಕೊಂಡಿದ್ದಳು. ಕಬ್ಬಿಣದ ಸರಳುಗಳಿಂದ ಯಾರೋ ತನ್ನ ಶರೀರದಲ್ಲೆಲ್ಲ ಚುಚ್ಚುತ್ತಿದ್ದ ಹಾಗನ್ನಿಸುತ್ತಿತ್ತು. ಗುಡ್ಡ ಏರಿ ಇಳಿದು ಧಾವಿಸಿ ಬಂದುದರ ಆಯಾಸ ಬೇರೆ. ಚೀಲಗಳ ಮೇಲೊರಗಿಕೊಂಡಿದ್ದ ಹಾಗೆ, ಮೇಲ್ಗಡೆ ಆಗಸದಲ್ಲಿ ಕಳಾಹೀನವಾಗಿ ಮಿನುಗುತಿದ್ದ ತಾರೆಗಳನ್ನು ಶೂನ್ಯ ದೃಷ್ಟಿಯಿಂದ ನಿರುಕಿಸುತ್ತಿದ್ದಳು.

"ಹೇಮಾ, ಬಹಳ ನೋವೇನು?" ಎಂದ ಶೇಖರ.

ಅವನ ಪ್ರಶ್ನೆಗೆ ಉತ್ತರವೀಯುವ ಸ್ಥಿತಿಯಲ್ಲಿರಲಿಲ್ಲ ಹೇಮಾ.

ನಿಧಾನವಾಗಿ ಅವಳ ಚೈತನ್ಯವೂ ಕುಗ್ಗುತ್ತಿತ್ತು. ಮೂರ್ಛೆಯ ಕೈ ಮೆಲ್ಲಮೆಲ್ಲನೆ ಅವಳ ಮುಖದ ಮೇಲೆ ಆಡಿ ಮೈಮರೆಸುತ್ತಿದ್ದ ಹಾಗಿದ್ದಿತು.

ಎಂದೂ ಧೈರ್ಯ ಕಳೆದುಕೊಂಡಿರದ ಶೇಖರ ತುಂಬಾ ಅಧೀರನಾದ. ಸಂಗಣ್ಣ ಹೋದ; ಬಸವಣ್ಣೆಪ್ಪ ಹೋದ; ಅವರಿಬ್ಬರನ್ನೂ ಹಿಂಬಾಲಿಸಿಕೊಂಡು ಹೋಗಿಬಿಡುವಳೇ ಹೇಮಾ ಕೂಡ? ಅವನಿಗೆ ತನ್ನ ನೋವೆಲ್ಲವೂ ಮರೆತುಹೋಯಿತು. ಅವಳ ತಲೆಗೂದಲಿನ ಮೇಲೆ ಅಕ್ಕರೆಯಿಂದ ಕೈ ಆಡಿಸುತ್ತ ಕೂಗಿ ಕರೆದ: "ಹೇಮಾ, ಮಾತಾಡು ಹೇಮಾ. ಎಚ್ಚರಿಲ್ಲವೇನಕ್ಕಾ?"

ಏರು ಇಳುಕಲುಗಳನ್ನು ತುಳಿಯುತ್ತ ಲಾರಿ ಭರದಿಂದ ಓಡುತ್ತಿತ್ತು. ಅದರೊಂದಿಗೆ ಸೃಷ್ಟಿಯೆಲ್ಲವೂ ತನ್ನಿಂದ ದೂರ ದೂರ ಓಡುತ್ತಿದ್ದ ಹಾಗೆ ತೋರುತ್ತಿತ್ತು, ಹೇಮಾಗೆ. ಅದೂ ಓಡುತ್ತಿದೆ ದೂರ ದೂರ; ಅವಳೂ ಓಡುತ್ತಿದ್ದಾಳೆ ದೂರ ದೂರ! ದೂರ-ಅಲ್ಲಿ...ಆ ಆಕಾಶದಲ್ಲಿ...ಲಕ್ಷಾವಧಿ ತಾರೆಗಳ ಬಳಗದಲ್ಲಿ ಕುಳಿತುಕೊಂಡು ತನ್ನನ್ನೇ ಕೈಮಾಡಿ ಕರೆಯುತ್ತಿದ್ದಾಳೆ ತನ್ನ ತಾಯಿ. ಚಿಕ್ಕಂದಿನಲ್ಲಿಯೇ ತನ್ನನ್ನು ಪರದೇಶಿಯನ್ನಾಗಿ ಮಾಡಿ ಹೋದ ತಾಯಿ... ಅದೋ... ಅಲ್ಲಿ... ಅವಳ ಸನಿಹದಲ್ಲೇ ಕುಲುಕುಲು ನಗುತ್ತ ಕುಳಿತಿದ್ದಾನೆ ವಿಶ್ವನಾಥ-ತನ್ನ ಪ್ರೀತಿಯ ವಿಶ್ವನಾಥ..ಹುತಾತ್ಮ ವಿಶ್ವನಾಥ...ಅವರೆಡೆಗೇ ಓಡುತ್ತ ಹೊರಟಿದ್ದಾಳೆ ಅವಳು!

"ಈಕೆಗೆ ಎಚ್ಚರದಪ್ಪಿದಾಂಗ ಕಾಣಸ್ತೈತಿ. ಗೋಕಾವಿಗೆ ಎಷ್ಟು ಗಂಟೇಕ್ಕ ಹೋಗಬಹುದು ನಾವು ಹಸನ್ ಸಾಬ್?" ಎಂದ ಶೇಖರ.

"ಒಂದು ತಾಸಾದರೂ ಬೇಕಲ್ಲ ಶೇಖರಣ್ಣ. ಆದರs ಅಲ್ಲಿಗೆ ಹೋಗಿ ಏನು ಮಾಡಬೇಕಂತ ಮಾಡಿದ್ದೀ? ಅಲ್ಲೂ ಪೋಲೀಸರು ಇರುವವರೇ ಅಲ್ಲ?"

"ಇದ್ದರೂ ಚಿಂತಿಲ್ಲ. ನಮ್ಮ ಮಿತ್ರ ಡಾಕ್ಟರೊಬ್ಬರಿದಾರ ಅಲ್ಲಿ. ಗುಪ್ತವಾಗಿ ಅವರ ಹತ್ತಿರ ಹೋದರ ಸಾಕು. ಈಕೇನ್ನ ನೆಟ್ಟಗೆ ಮಾಡಬಹುದು ಅವರು; ಜೀವ ಉಳಿಸಬಹುದು. ಆದರs ಅಲ್ಲಿಯ ತನಕ ಬದುಕಿರತಾಳೋ ಇಲ್ಲೋ ಅದs ಎದೆಗುದಿ ನನಗ. ಪಾಪ, ಮೊದಲs ಕೋಮಲ ಶರೀರ. ಅದರಾಗ ತೋಳಿಗೆ ಬಡಿದೈತಿ ಗುಂಡು. ಮೈಯಾಗಿನ ರಕ್ತ ಎಲ್ಲಾ ಹರಿದು ಹೋಗೈತೀ... ಸಾಬಣ್ಣಾ... ಹ್ಯಾಂಗ ಮಾಡೋದು ಇನ್ನು?" ಎಂದು ಶೇಖರ ಹಸು ಮಗುವಿನ ಹಾಗೆ ಬಿಕ್ಕತೊಡಗಿದ. ಅವನಿಗೆ ತಿಳಿಯದಂತೆಯೇ

ಅವನ ಕಣ್ಣಲ್ಲಿ ನೀರೂರಿತ್ತು. ಒಂದೆರಡು ಹನಿಗಳು ಉರುಳಿ ಹೇಮಾಳ ಮುಖದ ಮೇಲೆ ಬಿದ್ದುವು. ಆಕೆಗೆ ಕೊಂಚ ಎಚ್ಚರ ಬಂದಂತಾಯಿತು.

"ಅಳ್ತೀಯೇನಪ್ಪಾ ಶೇಖರಣ್ಣಾ?" ಎಂದಳು ಆಕೆ, ತೀರ ಮೆಲ್ಲಗಿನ ದನಿಯಲ್ಲಿ.

ಎಡಗೈಯಿಂದ ಕಂಬನಿಗಳನ್ನೊರೆಸಿಕೊಂಡು ಶೇಖರ ಗದ್ಗದ ಧ್ವನಿಯಲ್ಲಿ ನುಡಿದ: "ಇಲ್ಲ, ಹೇಮಾ. ಅಳೂದಿಲ್ಲ. ನೀ ನೆಟ್ಟಗಾದರ ನಾನ್ಯಾಕ ಅಳಬೇಕು?"

"ನಾ ನೆಟ್ಟಗಾಗೂದು? ಛೆ! ನಾನೇನೂ ಉಳಿಯುವ ಹಾಗಿಲ್ಲ."

"ಹಾಂಗೆಲ್ಲ ಮಾತನಾಡಬ್ಯಾಡ ಹೇಮಕ್ಕ, ಈಗ ಗೋಕಾವಿಗೆ ಹೋಗತೀವಿ. ಅಲ್ಲೊಬ್ಬ ನಮ್ಮ ಮಿತ್ರ ಡಾಕ್ಟರ್ ಇದಾರ. ಅವರು ನಿನ್ನ ತೋಳಿನಾಗಿನ ಗುಂಡು ತೆಗೆದು ನೆಟ್ಟಗ ಮಾಡತಾರ. ನನಗೂ ನೆಟ್ಟಗಾದೀತು. ಸ್ವಲ್ಪ ಶಕ್ತಿ ಬರುವ ತನಕಾ ಅಲ್ಲಿದ್ದು ಮತ್ತೆ ಗುಂಪು ಕೂಡಿಸೋಣ. ಮತ್ತೆ ಕೆಲಸ ಸುರು ಮಾಡೋಣ, ಇನ್ನೂ ಮುಗೀಲಿಲ್ಲ ನಮ್ಮ ಯುದ್ಧ ಹೇಮಾ! ಇನ್ನೂ ಮುಗೀಲಿಲ್ಲ..."

"ಇನ್ನೂ ಮುಗೀಲಿಲ್ಲ ನಮ್ಮ ಯುದ್ಧ! ಇನ್ನೂ ಮುಗೀಲಿಲ್ಲ! ನಿಜ ಶೇಖರಣ್ಣಾ, ನೀ ಹೇಳೂದು!"

ಹೇಮಾ ಸಾಬಣ್ಣನ ಕಡೆ ಕತ್ತು ತಿರುಗಿಸಿ-"ಊರಾಗ ಶೇಖರಣ್ಣನ ಮನೆಯವರು ನೆಟ್ಟಗಿದಾರೇನಪ್ಪಾ?" ಎಂದು ಕೇಳಿದಳು.

ಅವಳು ಮಾತನಾಡತೊಡಗಿದುದನ್ನು ಕಂಡು ಆನಂದಿತನಾಗಿದ್ದ ಸಾಬು ಆ ಪ್ರಶ್ನೆ ಕಿವಿಗೆ ಬೀಳುತ್ತಲೂ ಮತ್ತೆ ಜೋಲುಮುಖ ಮಾಡಿದ. "ಏನು ಹೇಳೂದವ್ವಾ? ಬರಬಾರದ ಬವಣೆ ಬಂದೈತಿ ಶೇಕ್ರಣ್ಣನ ಮನೆಯವರಿಗೆ! ನಿನ್ನೆ ಅವರ ಮನಿ ಜಪ್ತಿ ಮಾಡಿದರವ್ವಾ ಸರಕಾರದವರು! ಲಿಂಗಣ್ಣನ್ನ ಪೋಲೀಸರು ಹಿಡಕೊಂಡು ಹೋಗ್ಯಾರ."

"ಅವ್ವ ಬಹಳ ಚಿಂತೀ ಮಾಡ್ತಾಳೇನಪ್ಪ?" ಎಂದು ಕೇಳಿದ, ಶೇಖರ.

"ಚಿಂತಿ ಏನು ಆ ತಾಯಿಗೆ ಹೊಸದೇನಪ್ಪ, ಶೇಕರಣ್ಣ? ಇಂಥಾವು ಎಷ್ಟೋ ಕಾಡುವ ಕಾಲ ಬಂದಾವ ಆಕೆಗೆ. ಯಾವುದಕ್ಕೂ ಅಂಜಿ ಕೈಕಾಲು ಬಿಡುವಾಕೆ ಅಲ್ಲ ನಿಮ್ಮ ಅವ್ವ. ಆಕೆಯ ಧೈರ್ಯ ನೋಡಿದರ ಗಂಡಸರಾದ ನಮಗೂ ಬೆರಗಾಗುತೈತಿ. ಲಿಂಗಣ್ಣನ್ನ ಪೋಲೀಸರು ಹಿಡಿದೊಯ್ಯುತ್ತಿರಬೇಕಾದರ ಒಮ್ಮೆಯಾದರೂ ಅತ್ತಳು ಅಂತೀಯೇನು? 'ಅವನ್ನ ಒಯ್ಯಬ್ಯಾಡಿರಪ್ಪ'

ಅಂತ ಪೋಲೀಸರನ್ನ ಬೇಡಿದಳಂತೀಯೇನು? ಇಲ್ಲ. ಏನೂ ಇಲ್ಲಪ್ಪ. 'ಒಯ್ದರ ಒಯ್ಯಲಿ ಅವನನ್ನು. ನನ್ನ ತೋಳಿನಾಗ ಶಕ್ತಿ ಇರೂತನಕ ಯಾರಿಗೂ ಅಂಜುವಾಕಿ ಅಲ್ಲ ನಾನು. ಕೂಲೀ ಕುಂಬಳೀ ಮಾಡಿ ಇವರೆಲ್ಲರ ಹೊಟ್ಟೆಗೆ ಹಾಕ್ತೀನಿ.ಇಲ್ಲಿ ಕೂಲಿ ಸಿಗದಿದ್ದರ ಗೋಕಾವಿ ಗಿರಣಿಗೆ ಹೋಗಿ ದುಡೀತೀನಿ. ಆ ಕೆಂಪು ಮಾರೀ ಸರಕಾರಕ್ಕ ಮಾತ್ರ ಎಂದೆಂದೂ ಅಂಜುವದಿಲ್ಲ' ಅಂದಳು. ಕೂಡಿದ ಜನರೆಲ್ಲಾ ಬೊಟ್ಟು ಕಚ್ಚಿಕೊಂಡರಪ್ಪಾ. ಎಂಥಾ ಧೈರ್ಯ ನಿಮ್ಮ ಅವ್ವಂದು! ಅಂಥಾ ತಾಯಿಯ ಹೊಟ್ಟೆಯೊಳಗ ಹುಟ್ಟಿದ್ದಕ್ಕs ನೀ ಇಂಥಾ ಶೂರ ಆಗಿರಬೇಕಪ್ಪ. ಅಂಥ ಅವ್ವ ಎಲ್ಲರಿಗೂ ಸಿಗೂದಿಲ್ಲ. ಅದಕ್ಕೂ ಪುಣ್ಯಾ ಮಾಡಿ ಬರಬೇಕು ಪುಣ್ಯಾ!"ಎಂದು ಹೇಳುವಾಗ ಅಭಿಮಾನದಿಂದಲೂ ಮೆಚ್ಚುಗೆಯಿಂದಲೂ ಸಾಬಣ್ಣನ ಸ್ವರ ಕಂಪಿಸುತ್ತಿತ್ತು.

ಶೇಖರನಿಗೂ ಅಭಿಮಾನದಿಂದ ಎದೆ ತುಂಬಿಬಂದಿದ್ದಿತು. ಆತ ಹೇಮಾವತಿಯ ಕಡೆಗೆ ತಿರುಗಿ-"ಈಗ ಹ್ಯಾಂಗೈತಿ ಹೇಮಕ್ಕಾ?" ಎಂದ.

ಅವನ ಪ್ರಶ್ನೆಗೆ ಉತ್ತರ ದೊರೆಯಲಿಲ್ಲ.

ಶೇಖರನಿಗೆ ಮತ್ತೆ ಗಾಬರಿಯಾಯಿತು! ಅವಳ ಹಣೆಯನ್ನೇ ನೇವರಿಸುತ್ತ ಪುನಃ ಕೂಗಿದ: "ಹೇಮಾ!" ಉತ್ತರ ಬರಲಿಲ್ಲ.

ದಿಗಿಲುಗೊಂಡು ಶೇಖರ ಮೇಲಕ್ಕೆದ್ದು ಕುಳಿತ. ಹಸನ್ ಸಾಬಿಯ ಕೈಯಲ್ಲಿದ್ದ ಟಾರ್ಚಿನಿಂದ ಬೆಳಕು ಬೀರಿ ಅವಳ ಮುಖವನ್ನು ನಿಟ್ಟಿಸಿ ನೋಡಿದ. ಕಣ್ಣುಗಳೆರಡೂ ಮುಚ್ಚಿದ್ದವು. ತುಟಿಗಳೆರಡೂ ತೆರೆದಿದ್ದುವು.

"ಹೇಮಾ, ಹೇಮಕ್ಕ!" ಎಂದು ರೋದಿಸುತ್ತಾ ಆತ ಅವಳ ಶರೀರವನ್ನು ಗಟ್ಟಿಯಾಗಿ ಅಲುಗಾಡಿಸಿದ. ಅವಸರವಸರವಾಗಿ ಅವಳ ಕೈಗಳನ್ನೂ ಮೈಯನ್ನೂ ಮುಟ್ಟಿ ನೋಡಿದ. ದೇಹ ತಣ್ಣಗಾಗಿತ್ತು. ಹಸನ್ ಸಾಬಿಯ ಮಾತು ನಡೆದಾಗಲೇ ಆಕೆ ಕೊನೆಯುಸಿರೆಳೆದಿದ್ದಳೋ ಏನೋ. ಸದ್ದು ಮಾಡದೆ ಹೊರಟುಹೋಗಿತ್ತೇನೋ, ಅವಳ ಪ್ರಾಣಪಕ್ಷಿ!

"ಹೇಮಾ, ಹೇಮಕ್ಕ!...ಹೋಗಿಬಿಟ್ಟೆಯಾ ಹೇಮಾ, ನನ್ನ ತಂಗೀ!..." ಎನ್ನುತ್ತಾ ಶೇಖರ ಅವಳ ಕಳೇಬರದ ಮೇಲೆ ಹಣೆ ಚೆಲ್ಲಿದ. ರಕ್ತಸ್ರಾವದಿಂದಲೂ ಮಾರ್ಗಾಯಾಸದಿಂದಲೂ ಉಂಟಾಗಿದ್ದ ನಿಶ್ಯಕ್ತಿಯನ್ನು ಆತ ಇದುವರೆಗೆ ಹೇಗೋ ತಡೆಹಿಡಿದಿದ್ದ. ಆದರೆ ಹೇಮಾವತಿಯ ಮೃತ್ಯುವಿನೊಂದಿಗೆ ಆ ಹಿಡಿತವೂ ಮಾಯವಾಯಿತು. ಅವನ

ಕಣ್ಣುಗಳೆದುರಿಗೆ ಗಾಢಾಂಧಕಾರ ಕವಿಯಿತು.

ಸ್ವಲ್ಪ ಹೊತ್ತು ಮೂಕನಾಗಿ ಕುಳಿತಿದ್ದ ಹಸನ್ ಸಾಬಿ ಶೇಖರನನ್ನು ಸಂತವಿಸಲೆಂದು ಅವನ ಬೆನ್ನು ತಟ್ಟುತ್ತಾ, "ಏಳು ಮ್ಯಾಲಕ್ಕ ಶೇಖರಣ್ಣ... ಹೋದವಳು ಹೋದಳು.... ಏಳು" ಎಂದ.

ಶೇಖರ ಏಳಲೂ ಇಲ್ಲ, ಅವನಿಂದ ಮಾತೂ ಹೊರಡಲಿಲ್ಲ.

ಹಸನ್ ಸಾಬಿಗೆ ಕೈಕಾಲುಗಳೇ ಹೋದಹಾಗಾಯಿತು. ಆತ ಡ್ರೈವರನನ್ನು ಕೂಗಿ ಲಾರಿ ನಿಲ್ಲಿಸಿದ. ಇಬ್ಬರೂ ಸೇರಿ ಶೇಖರನನ್ನು ಪರೀಕ್ಷಿಸಿದರು. ಆತ ನಿಶ್ಚೇಷ್ಟಿತನಾಗಿ ಬಿದ್ದುಕೊಂಡಿದ್ದ. ಶ್ವಾಸೋಚ್ಛ್ವಾಸ ನಿಂತುಹೋಗಿರಲಿಲ್ಲವಾದರೂ ಸಮರ್ಪಕವಾದ ರೀತಿಯಲ್ಲೂ ನಡೆಯುತ್ತಿರಲಿಲ್ಲ. ಕಾಲುಗಳೂ ತಣ್ಣಗಾಗುತ್ತಿದ್ದವು.

"ಲಗೂ ಲಗೂ ಗಾಡಿ ಹೊಡೆದು ಗೋಕಾವಿಗೆ ಹೋಗೋಣ ಸಾಬಣ್ಣಾ, ಇವನು ನೆಟ್ಟಗಾದರೂ ಆಗಬಹುದು!"ಎಂದು ಹೇಳಿ ಡ್ರೈವರ್ ಮತ್ತೆ ತನ್ನ ಸ್ಥಾನದಲ್ಲಿ ಕುಳಿತು ಲಾರಿಯನ್ನೋಡಿಸತೊಡಗಿದ.

ಶೇಖರನ ತಲೆಯನ್ನು ತೊಡೆಯ ಮೇಲಿರಿಸಿಕೊಂಡಿದ್ದ ಹಾಗೇ ಹಸನ್ ಸಾಬಿ ಮೊಳಕಾಲುಗಳನ್ನು ಮಡಿಚಿಕೊಂಡು ನಮಾಜಿನ ಭಂಗಿಯಲ್ಲಿ ಕುಳಿತು, ಹೃದಯವನ್ನೇ ಹಿರಿದು, ಹೊರಗೆಳೆದು ತಂದಂಥ ಧ್ವನಿಯಲ್ಲಿ ಪ್ರಾರ್ಥನೆ ಮಾಡತೊಡಗಿದ:

"ಯಾ ಖುದಾ, ಯಾ ಅಲ್ಲಾ! ಇವನ ಪ್ರಾಣ ಉಳಿಸು, ನನ್ನ ತಂದೇ! ನನ್ನ ಜೀವಾದರೂ ತಕ್ಕೊಂಡು ಇವನ ಪ್ರಾಣ ಉಳಿಸು!"

ಆತನ ಪ್ರಾರ್ಥನೆ ಇನ್ನೂ ನಡೆದಿದ್ದ ಹಾಗೇ ಶೇಖರನ ಶರೀರ ಅಲುಗಿದಂತಾಯಿತು. ಸಾಬಿಯ ತೊಡೆಯ ಮೇಲಿದ್ದ ಆತನ ತಲೆ ಮೆಲ್ಲನೆ ಉರುಳಿ ಕೆಳಕ್ಕೆ ಬಿತ್ತು.

Laser Typeset at Arun Graphics, New Delhi and
printed at Shivam Offset, New Delhi

ರೂ. 10.00

ISBN 81-237-2423-3

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ